ಸೋಮವಾರ, ಡಿಸೆಂಬರ್ 26, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 356 | ಪುಟ 12
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಪ್ರತ್ಯೇಕ ಪ್ರವರ್ಗ ರಚಿಸಿ ಪಂಚಮಸಾಲಿಗಳಿಗೆ ಶೇ 4, ಒಕ್ಕಲಿಗರಿಗೆ ಶೇ 3 ಮೀಸಲು ಕಲ್ಪಿಸಲು ಚಿಂತನೆ

ಇಡಬ್ಲ್ಯುಎಸ್ ಶೇ 10 ಹಂಚಿಕೆ?

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೇಂದ್ರ ಸರ್ಕಾರ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ನೀಡಿರುವ ಶೇಕಡ 10ರಷ್ಟು ಮೀಸಲಾತಿಯಲ್ಲಿ ಲಿಂಗಾಯತ ಪಂಚಮಸಾಲಿ ಮತ್ತು ಒಕ್ಕಲಿಗ ಸಮುದಾಯಗಳಿಗೂ ಪಾಲು ನೀಡುವುದರ ಜೊತೆಗೆ 'ಪ್ರವರ್ಗಗಳ' ಮರುವಿಂಗಡನೆಯನ್ನೂ ಮಾಡಲು ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸಿದೆ.

ಬೆಳಗಾವಿಯ ಸುವರ್ಣ ಸೌಧದಲ್ಲಿ ಸೋಮವಾರ (ಡಿ. 26) ಬೆಳಿಗ್ಗೆ ತುರ್ತು ಸಚಿವ ಸಂಪುಟ ಸಭೆ ನಡೆಯಲಿದೆ. ಈ ಸಭೆಯಲ್ಲಿ ಮೀಸಲಾತಿ ವಿಚಾರದ ಜೊತೆಗೆ ಕೆಲವು ಮಸೂದೆಗಳನ್ನು ಮಂಡಿಸುವ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆ ಇದೆ.

ರಾಜ್ಯಗಳಲ್ಲಿ ಇಡಬ್ಲ್ಯುಎಸ್ ಕೋಟಾ ಅಡಿಯಲ್ಲಿ ಶೇ 10ರಷ್ಟು ಮೀಸಲಾತಿಯನ್ನು ಜಾರಿಗೊಳಿಸುವ ನಿರ್ಧಾರವನ್ನು ಪ್ರಾದೇಶಿಕ ಶಾಸಕಾಂಗಗಳೊಂದಿಗೆ ರಾಜ್ಯಗಳಿಗೆ ಬಿಡಲಾಗಿದೆ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಈಗಾಗಲೇ ತಿಳಿಸಿದೆ.

ಕೇಂದ್ರ ಸರ್ಕಾರದ ಎಸ್‌ಸಿ, ಎಸ್‌ಟಿ, ಇತರ ಹಿಂದುಳಿದ ಜಾತಿ (ಒಬಿಸಿ) ಪಟ್ಟಿಯಲ್ಲಿ ಇಲ್ಲದ ಉಳಿದ ಎಲ್ಲ ಜಾತಿಯ ಬಡವರು ಇಡಬ್ಲುಎಸ್ ಮೀಸಲಾತಿ ಪಡೆಯಲು ಅರ್ಹರು. ಇಡಬ್ಲ್ಯುಎಸ್ ವ್ಯಾಪ್ತಿಗೆ ಒಕ್ಕಲಿಗರು ಮತ್ತು ಲಿಂಗಾಯತ ಪಂಚಮಸಾಲಿ ಸಮುದಾಯಗಳನ್ನು ಸೇರಿಸಿ ಮೀಸಲಾತಿ ಹೆಚ್ಚಳದ ಬೇಡಿಕೆ ಈಡೇರಿಸುವ ಯೋಚನೆ ಸರ್ಕಾರ ಮುಂದಿದೆ.

ಈ ಹಿನ್ನೆಲೆಯಲ್ಲಿ ಶೇ 10ರಷ್ಟು ಮೀಸಲಾತಿಯನ್ನು ವಿಭಜಿಸಿ ಶೇ 4 ರಷ್ಟನ್ನು ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ, ಶೇ 3ರಷ್ಟನ್ನು ಒಕ್ಕಲಿಗ ಸಮುದಾಯಕ್ಕೆ ಮತ್ತು ಉಳಿದ ಶೇ 3ರಷ್ಟನ್ನು ಕೇಂದ್ರದ ಇತರ ಹಿಂದುಳಿದ ವರ್ಗಗಳ (ಒಬಿಸಿ) ಜಾತಿ ಪಟ್ಟಿಯಲ್ಲಿ ಇಲ್ಲದ ಆರ್ಥಿಕವಾಗಿ ದುರ್ಬಲ ವರ್ಗದ ಸಮುದಾಯಗಳಿಗೆ (ಬ್ರಾಹ್ಮಣ, ಜೈನ, ಆರ್ಯವೈಶ್ಯ, ನಗರ್ತ, ಮೊದಲಿಯಾರ್) ಮೀಸಲಿಡಲು ಚರ್ಚೆ ನಡೆದಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಪ್ರಜಾವಾಣಿ ವಿಶೇಷ

ಸದ್ಯ ಪರಿಶಿಷ್ಟ ಜಾತಿ (ಹೊಲೆಯ, ಮಾದಿಗ, ಬೋವಿ, ಲಂಬಾಣಿ, ಕೊರಚ, ಕೊರಮ ಸೇರಿ 101 ಜಾತಿಗಳು), ಪರಿಶಿಷ್ಟ ಪಂಗಡ (ವಾಲ್ಮೀಕಿ, ನಾಯಕ, ಸೋಲಿಗರು, ಕುರುಮಾನ್ ಸೇರಿದಂತೆ 50 ಜಾತಿಗಳು), ಹಿಂದುಳಿದ ವರ್ಗಗಳ ಪ್ರವರ್ಗ 1 (ಗಂಗಾಮತಸ್ಥ, ಉಪ್ಪಾರ, ಗೊಲ್ಲ ಸೇರಿ 95 ಜಾತಿಗಳು), ಹಿಂದುಳಿದ ವರ್ಗಗಳ ಪ್ರವರ್ಗ 2ಎ (ಕುರುಬ, ಈಡಿಗ, ವಿಶ್ವಕರ್ಮ, ಕುಂಬಾರ, ಸವಿತಾ ಸಮಾಜ, ದೇವಾಂಗ, ನೇಕಾರ, ಮಡಿವಾಳ ಸೇರಿ 102 ಜಾತಿಗಳು), ಹಿಂದುಳಿದ ವರ್ಗಗಳ ಪ್ರವರ್ಗ 2ಬಿ (ಮುಸ್ಲಿಂ ಮತ್ತು ಅದರಲ್ಲಿರುವ ಉಪ ಜಾತಿಗಳು), ಹಿಂದುಳಿದ ವರ್ಗಗಳ ಪ್ರವರ್ಗ 3ಎ (ಒಕ್ಕಲಿಗ, ರೆಡ್ಡಿ, ಬಲಿಜ, ಬಂಟ, ಕೊಡವ ಸೇರಿ 12 ಜಾತಿಗಳು), ಹಿಂದುಳಿದ ವರ್ಗಗಳ ಪ್ರವರ್ಗ 3ಬಿ (ವೀರಶೈವ ಮತ್ತು ಲಿಂಗಾಯತ ಸಮುದಾಯದ ಎಲ್ಲ ಉಪಜಾತಿಗಳು) ಎಂಬ ಪ್ರವರ್ಗಗಳಿವೆ.

ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಶಿಫಾರಸಿನ ಅನ್ವಯ, ಈ ಪ್ರವರ್ಗಗಳ ಪೈಕಿ, 3ಎ ಮತ್ತು 3ಬಿ ಪ್ರವರ್ಗಗಳನ್ನು ತೆಗೆದುಹಾಕಿ, ಅದರ ಬದಲು ಪ್ರವರ್ಗ 2ಸಿ ಮತ್ತು 2ಡಿ ರಚಿಸಿ, ಇಡಬ್ಲ್ಯುಎಸ್ ಮೀಸಲಾತಿಯನ್ನು ಮರು ಹಂಚಿಕೆ ಮಾಡುವ ಮೂಲಕ ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಬೇಡಿಕೆ ಇಟ್ಟಿರುವ ಲಿಂಗಾಯತ ಪಂಚಮಸಾಲಿ ಮತ್ತು ಒಕ್ಕಲಿಗ ಸಮುದಾಯಗಳನ್ನು ತೃಪ್ತಿಪಡಿಸಲು ಚಿಂತನೆ ನಡೆದಿದೆ. ಸಚಿವ ಸಂಪುಟ ಸಭೆಯಲ್ಲೂ ಈ ಬಗ್ಗೆ ಚರ್ಚೆ ನಡೆದಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಒಕ್ಕಲಿಗ ಉಪ ಪಂಗಡಗಳನ್ನು ಒಳಗೊಂಡ 'ಪ್ರವರ್ಗ-3ಎ'ಗೆ ನೀಡಲಾಗಿರುವ ಮೀಸಲಾತಿ ಪ್ರಮಾಣವನ್ನು ಶೇ 4 ರಿಂದ ಶೇ 12ಕ್ಕೆ ಹೆಚ್ಚಿಸಬೇಕೆಂದು ಒಕ್ಕಲಿಗ ಸಮುದಾಯ ಪಟ್ಟು ಹಿಡಿದಿದೆ.

6ನೇ ಪುಟ ನೋಡಿ
ಪ್ರತಿಕ್ರಿಯೆಗಳು 6

ರಾಜ್ಯದಲ್ಲಿ ಮೀಸಲಾತಿ– ಹೊಸ ಲೆಕ್ಕಾಚಾರ?

ಪ್ರವರ್ಗ	ಮೀಸಲಾತಿ ಪ್ರಮಾಣ (ಶೇ)
ಪರಿಶಿಷ್ಟ ಜಾತಿ	17
ಪರಿಶಿಷ್ಟ ಪಂಗಡ	7
ಪ್ರವರ್ಗ–1	4
ಪ್ರವರ್ಗ–2ಎ	15
ಪ್ರವರ್ಗ–2ಬಿ	4
ಪ್ರವರ್ಗ–2ಸಿ	7
ಪ್ರವರ್ಗ–2ಡಿ	9
ಇಡಬ್ಲುಎಸ್ (ಬ್ರಾಹ್ಮಣ, ಆರ್ಯ ವೈಶ್ಯ, ನಾಯರ್, ಮೊದಲಿಯಾರ್)	3
ಒಟ್ಟು	66

'ಇಡಬ್ಲ್ಯುಎಸ್ ಜಾರಿ ಬಳಿಕ ಮರು ವಿಂಗಡನೆ'

'ಪ್ರವರ್ಗ 2ಎ ಪಟ್ಟಿಯಲ್ಲಿರುವ ಅತಿ ಹಿಂದುಳಿದ ಸಮುದಾಯಗಳಿಗೆ ಮೀಸಲಾತಿಯಲ್ಲಿ ಯಾವುದೇ ಸಮಸ್ಯೆ ಆಗದಂತೆ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಮಧ್ಯಂತರ ವರದಿಯಲ್ಲಿ ಶಿಫಾರಸು ಮಾಡಿದೆ. ಪ್ರತಿ 10 ವರ್ಷಗಳಿಗೊಮ್ಮೆ ಪ್ರವರ್ಗಗಳನ್ನು ಮರು ವಿಂಗಡನೆ ಮಾಡಬೇಕಿದೆ. ಆದರೆ, 2002ರ ಬಳಿಕ ಮರು ವಿಂಗಡನೆಯೇ ಆಗಿಲ್ಲ. ಇಡಬ್ಲ್ಯುಎಸ್ ಜಾರಿಯಾದ ಬಳಿಕ ಮೀಸಲಾತಿ ಪ್ರಮಾಣ ಹಂಚಿಕೆ ಮಾಡಿ ಪ್ರವರ್ಗಗಳ ವಿಂಗಡನೆ, ಹೊಸ ಪ್ರವರ್ಗಗಳ ರಚನೆಗೆ ಅವಕಾಶವಿದೆ' ಎಂದೂ ಸರ್ಕಾರದ ಮೂಲಗಳು ತಿಳಿಸಿವೆ.

ಕೆನರಾ ಬ್ಯಾಂಕ್
Canara Bank
Government of India Undertaking
Together We Can
ಗೃಹ ಸಾಲ
ವರ್ಷಕ್ಕೆ 8.55%* ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
ಸಂಸ್ಕರಣ ಮತ್ತು ಡಾಕ್ಯುಮೆಂಟೇಷನ್ ಶುಲ್ಕ 100% ಮನ್ನಾ.
*ಷರತ್ತುಗಳು ಅನ್ವಯಿಸುತ್ತವೆ
1800 425 0018

ಬಾಂಗ್ಲಾ ಎದುರು ಸರಣಿ ಜಯ: ಅಶ್ವಿನ್ ಮಿಂಚು

ಡಬ್ಲ್ಯುಟಿಸಿ: ಭಾರತದ ಕನಸು ಜೀವಂತ

ದುಬೈ/ಮೀರ್‌ಪುರ್ (ಪಿಟಿಐ): ಆಲ್‌ರೌಂಡರ್ ಆರ್. ಅಶ್ವಿನ್ ಮತ್ತು ಶ್ರೇಯಸ್ ಅಯ್ಯರ್ ಜೊತೆಯಾಟದ ಬಲದಿಂದ ಭಾರತ ತಂಡವು ಬಾಂಗ್ಲಾದೇಶ ಎದುರಿನ ಎರಡನೇ ಟೆಸ್ಟ್‌ನಲ್ಲಿ 3 ವಿಕೆಟ್‌ಗಳಿಂದ ಜಯಗಳಿಸಿತು. 2–0ಯಿಂದ ಸರಣಿ ತನ್ನದಾಗಿಸಿಕೊಂಡಿತು.

ಇದರೊಂದಿಗೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದ್ದು, ಫೈನಲ್ ಪ್ರವೇಶದ ಕನಸು ಜೀವಂತವಾಗಿದೆ.

ಭಾನುವಾರ ಮುಕ್ತಾಯವಾದ ಬಾಂಗ್ಲಾ ಎದುರಿನ ಟೆಸ್ಟ್‌ನಲ್ಲಿ ಭಾರತವು 145 ರನ್‌ಗಳ ಗುರಿಯನ್ನು ಬೆನ್ನಟ್ಟಿತ್ತು.


ಅಶ್ವಿನ್

ಅಶ್ವಿನ್ (ಅಜೇಯ 42) ಮತ್ತು ಶ್ರೇಯಸ್ ಅಯ್ಯರ್ (ಅಜೇಯ 29) ಅವರು ಮುರಿಯದ ಎಂಟನೇ ವಿಕೆಟ್ ಜೊತೆಯಾಟದಲ್ಲಿ 71 ರನ್ ಸೇರಿಸಿ ಗೆಲುವಿಗೆ ಕಾರಣರಾದರು.

ಡಬ್ಲ್ಯುಟಿಸಿ ಫೈನಲ್‌ಗೆ ಅಗ್ರ ಎರಡು ತಂಡಗಳು ಮಾತ್ರ ಅರ್ಹತೆ ಪಡೆಯುತ್ತವೆ.

ಆಸ್ಟ್ರೇಲಿಯಾ ಶೇ 76.92 ಮತ್ತು ಭಾರತ ಶೇ 58.92 ರಷ್ಟು ಅಂಕ ಗಳಿಸಿವೆ. ಮುಂಬರುವ ಫೆಬ್ರುವರಿ–ಮಾರ್ಚ್‌ನಲ್ಲಿ ಭಾರತವು, ಆಸ್ಟ್ರೇಲಿಯಾ ಎದುರಿನ ನಾಲ್ಕು ಟೆಸ್ಟ್ ಸರಣಿಗೆ ಆತಿಥ್ಯ ವಹಿಸಲಿದೆ. ಅದರಲ್ಲಿ ಮೂರು ಪಂದ್ಯ ಗೆದ್ದರೆ ಫೈನಲ್ ಹಾದಿ ಸರಾಗ. ಇಲ್ಲದಿದ್ದರೆ ಮೂರನೇ ಸ್ಥಾನದಲ್ಲಿರುವ ದಕ್ಷಿಣ ಆಫ್ರಿಕಾ (54.55 %) ತಂಡ ಪೈಪೋಟಿಯೊಡ್ಡುವ ಸಾಧ್ಯತೆಯಿದೆ. ತನ್ನ ತವರಿನಲ್ಲಿಯೇ ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್ ಎದುರಿನ ಎರಡು ಪಂದ್ಯಗಳ ಸರಣಿ ಆಡಲಿದೆ. ಅದರಲ್ಲಿ ಗೆದ್ದರೆ ಭಾರತಕ್ಕೆ ಸವಾಲಾಗಬಹುದು.

ನೇಪಾಳ: ಪುಷ್ಪಕಮಲ್ ದಹಲ್‌ಗೆ ಪ್ರಧಾನಿ ಗಾದಿ

ಕಠ್ಮಂಡು (ಪಿಟಿಐ): ನೇಪಾಳದ ನೂತನ ಪ್ರಧಾನಿಯಾಗಿ ನೇಪಾಳ ಕಮ್ಯುನಿಸ್ಟ್ ಪಕ್ಷದ (ಮಾವೋವಾದಿ) ಮುಖ್ಯಸ್ಥ ಪುಷ್ಪಕಮಲ್ ದಹಲ್ (ಪ್ರಚಂಡ) ಅವರು ಭಾನುವಾರ ನೇಮಕಗೊಂಡಿದ್ದಾರೆ.

'ಅಧ್ಯಕ್ಷೆ ವಿದ್ಯಾದೇವಿ ಭಂಡಾರಿ ಅವರು ಸಂವಿಧಾನದ ವಿಧಿ 75 (2)ರ ಅನ್ವಯ ಪ್ರಚಂಡ ಅವರನ್ನು ಪ್ರಧಾನಿ ಹುದ್ದೆಗೆ ನೇಮಿಸಿದ್ದಾರೆ' ಎಂದು ಅಧ್ಯಕ್ಷರ ಕಚೇರಿಯ ಪ್ರಕಟಣೆ ತಿಳಿಸಿದೆ.

11



ರೈಲು ಹಳಿ ತಪ್ಪಲು ಸಮಯೋಚಿತ ನಿರ್ವಹಣೆ ಕೊರತೆ ಕಾರಣ: ಸಿಎಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ರೈಲ್ವೆಯ ಎಂಜಿನಿಯರಿಂಗ್ ವಿಭಾಗವು ಕಾಲ ಕಾಲಕ್ಕೆ ರೈಲು ಮಾರ್ಗಗಳಲ್ಲಿ ಹಳಿಗಳ ನಿರ್ವಹಣೆ ಮಾಡದಿರುವುದೇ ರೈಲುಗಳು ಹಳಿತಪ್ಪುವ ಘಟನೆಗಳು ಸಂಭವಿಸಲು ಪ್ರಮುಖ ಕಾರಣ ಎಂದು ಭಾರತದ ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

ರೈಲು ಹಳಿಗಳ ಸಮಯೋಚಿತ ನಿರ್ವಹಣಾ ಕೆಲಸಗಳಿಗೆ ಮತ್ತು ಪರಿಣಾಮಕಾರಿ ಮೇಲ್ವಿಚಾರಣೆಗೆ ಸುಧಾರಿತ ತಂತ್ರಜ್ಞಾನಗಳು ಹಾಗೂ ಸಂಪೂರ್ಣ ತಾಂತ್ರಿಕ ವಿಧಾನ ಅಳವಡಿಸಿಕೊಳ್ಳುವಂತೆ ಭಾರತೀಯ ರೈಲ್ವೆಗೆ ಸಿಎಜಿ ಸೂಚಿಸಿದೆ.

ಭಾರತೀಯ ರೈಲ್ವೆಯ 2017-18ರಿಂದ 2020-21ರ ಅವಧಿಯ ಕಾರ್ಯಕ್ಷಮತೆ ಕುರಿತ 'ಭಾರತೀಯ ರೈಲ್ವೆಯಲ್ಲಿ ಹಳಿ ತಪ್ಪುವಿಕೆ' ವರದಿಯಲ್ಲಿ ಸಿಎಜಿ, ಹಳಿಗಳ ಕಳಪೆ ನಿರ್ವಹಣೆ, ಅತೀ ವೇಗ ಹಾಗೂ ತಾಂತ್ರಿಕ ವೈಫಲ್ಯಗಳು ರೈಲುಗಳು ಹಳಿ ತಪ್ಪಲು ಪ್ರಮುಖ ಕಾರಣಗಳಾಗಿವೆ ಎಂದು ಉಲ್ಲೇಖಿಸಿದೆ.

ಹಳಿ ತಪ್ಪುವಿಕೆಯ ಒಟ್ಟು 422 ಪ್ರಕರಣಗಳು ಸಂಭವಿಸಿದ್ದು, ಇದಕ್ಕೆ ಎಂಜಿನಿಯರಿಂಗ್ ವಿಭಾಗ ಹೊಣೆಯಾಗಿದೆ.



ಕ್ರಿಸ್‌ಮಸ್ ಸಂಭ್ರಮ ಬೆಂಗಳೂರಿನ ವಿವೇಕನಗರದಲ್ಲಿರುವ ಇನ್‌ಫೆಂಟ್ ಜೀಸಸ್ ಚರ್ಚ್ ಆವರಣದಲ್ಲಿ ಕ್ರಿಸ್‌ಮಸ್ ಅಂಗವಾಗಿ ಭಾನುವಾರ ಯುವಕರು ಸಾಂಟಾ ಕ್ಲಾಸ್ ವೇಷ ಧರಿಸಿ ಸಿಹಿ ಹಂಚಿ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ

'ಭಾರತ ಜತೆ ಬಾಂಧವ್ಯಕ್ಕೆ ಚೀನಾ ಉತ್ಸುಕ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಭಾರತದೊಂದಿಗೆ ಸ್ಥಿರ ಬಾಂಧವ್ಯ ಹೊಂದಲು ಚೀನಾ ಉತ್ಸುಕವಾಗಿದೆ' ಎಂದು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರು ಭಾನುವಾರ ಬೀಜಿಂಗ್‌ನಲ್ಲಿ ಹೇಳಿದರು.

2022ರಲ್ಲಿ ಅಂತರರಾಷ್ಟ್ರೀಯ ಸ್ಥಿತಿಗತಿ ಮತ್ತು ಚೀನಾದ ವಿದೇಶಾಂಗ ಸಂಬಂಧ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಭಾರತ ಹಾಗೂ ಚೀನಾವು ರಾಜತಾಂತ್ರಿಕ ಮತ್ತು ಸೇನೆಯ ಮುಖಾಂತರ ಸಂಪರ್ಕದಲ್ಲಿವೆ. ಉಭಯ ದೇಶಗಳು ಗಡಿ ಪ್ರದೇಶದಲ್ಲಿ ಸ್ಥಿರತೆ ಕಾಪಾಡಲು ಬದ್ಧವಾಗಿವೆ' ಎಂದರು.

ಅರುಣಾಚಲ ಪ್ರದೇಶದ ತವಾಂಗ್‌ನಲ್ಲಿರುವ ವಾಸ್ತವ ನಿಯಂತ್ರಣ ರೇಖೆಯನ್ನು (ಎಲ್‌ಎಸಿ) ಉಲ್ಲಂಘಿಸಿ ಅತಿಕ್ರಮಣ ನಡೆಸಲು ಚೀನಾದ ಸೈನಿಕರು 15 ದಿನಗಳ ಹಿಂದಷ್ಟೇ ಪ್ರಯತ್ನಿಸಿದ್ದರು. ಇದನ್ನು ಭಾರತದ ಸೈನಿಕರು ವಿಫಲಗೊಳಿಸಿದ್ದರು. ಭಾರತದೊಂದಿಗಿನ ಆಕ್ರಮಣಕಾರಿ ಧೋರಣೆಗೆ ಕಡಿವಾಣ ಹಾಕಲು ಚೀನಾ ಇಚ್ಛಿಸಿಲ್ಲ ಎಂಬುದನ್ನು ಈ ಬೆಳವಣಿಗೆಗಳು ಸೂಚಿಸಿದ್ದವು. ಈಗ ವಾಂಗ್ ಅವರು ಸ್ಥಿರ ಬಾಂಧವ್ಯದ ಹೇಳಿಕೆ ನೀಡಿದ್ದಾರೆ.

ಗಸ್ತು ಠಾಣೆ 15ರಿಂದ ಎರಡೂ ದೇಶಗಳ ಸೇನೆಯನ್ನು ಕಳೆದ ತಿಂಗಳು ಹಿಂಪಡೆಯಲಾಗಿತ್ತು. ಪಶ್ಚಿಮ ಲಡಾಖ್‌ನ ಎಲ್‌ಎಸಿ ಉದ್ದಕ್ಕೂ ಯಥಾಸ್ಥಿತಿ ಕಾಯ್ದುಕೊಳ್ಳಲಾಗುವುದು ಎಂದೂ ಚೀನಾ ಹೇಳಿತ್ತು. ಆದರೆ, ಡೆಪ್ಸಾಂಗ್, ಡೆಮ್‌ಚೋಕ್ ಪ್ರದೇಶದ ಗಡಿಯ ವಿವಿಧ ಗಸ್ತು ಠಾಣೆಗಳಿಗೆ ಹೋಗಲು ಚೀನಾವು ಭಾರತೀಯ ಸೈನಿಕರಿಗೆ ಅವಕಾಶ ನೀಡಿಲ್ಲ ಆದ್ದರಿಂದ, ಚೀನಾದ ಹೇಳಿಕೆಯು 'ಹೊಸ ಸಹಜ ಸ್ಥಿತಿ'ಯನ್ನು ಭಾರತವು ಒಪ್ಪಿಕೊಳ್ಳಬೇಕು ಎಂದು ಹೇರುತ್ತಿರುವ ಒತ್ತಡದಂತೆ ತೋರುತ್ತಿದೆ.

ಭಾರತ ತಿರಸ್ಕಾರ: 'ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಎಂದು ಚೀನಾ ಹೇಳಿರುವುದನ್ನು ಭಾರತ ತಿರಸ್ಕರಿಸಿದೆ. ಏಕೆಂದರೆ ಗಡಿ ವಿವಾದಕ್ಕೆ ಸಂಬಂಧಿಸಿ ಹಲವು ವಿಚಾರಗಳು ಇನ್ನೂ ಪರಿಹಾರವಾಗಬೇಕಿವೆ' ಎಂದು ಭಾರತ ಹೇಳಿದೆ.

ಚಿನಕುರಳಿ


ಪ್ರಕಾಶ್ ಶೆಟ್ಟಿ



'ಕಲ್ಯಾಣ ರಾಜ್ಯ ಪ್ರಗತಿ ಪಕ್ಷ' ಸ್ಥಾಪನೆ

ಹೊಸ ಪಕ್ಷ ಘೋಷಿಸಿದ ಜನಾರ್ದನ ರೆಡ್ಡಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಜೆಪಿಯಿಂದ ಹೊರ ಬಂದಿರುವ ಮಾಜಿ ಸಚಿವ ಜಿ. ಜನಾರ್ದನ ರೆಡ್ಡಿ, 'ಕಲ್ಯಾಣ ರಾಜ್ಯ ಪ್ರಗತಿ ಪಕ್ಷ' ಎಂಬ ಹೊಸ ರಾಜಕೀಯ ಪಕ್ಷವನ್ನು ಆರಂಭಿಸುವುದಾಗಿ ಭಾನುವಾರ ಪ್ರಕಟಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಾನು ಬಿಜೆಪಿಗಾಗಿ ಸಾಕಷ್ಟು ಕೆಲಸ ಮಾಡಿದ್ದೇನೆ. ಸ್ವಂತ ಕೆಲಸ ಬದಿಗೊತ್ತಿ ಪಕ್ಷಕ್ಕಾಗಿ ದುಡಿದಿದ್ದೇನೆ. ಆದರೆ, ನನ್ನ ಕಷ್ಟದ ದಿನಗಳಲ್ಲಿ ಬಿ.ಎಸ್. ಯಡಿಯೂರಪ್ಪ ಮತ್ತು ಜಗದೀಶ ಶೆಟ್ಟರ್ ಹೊರತಾಗಿ ಪಕ್ಷದ ಯಾರೊಬ್ಬರೂ ಜತೆಗೆ ನಿಲ್ಲಲಿಲ್ಲ' ಎಂದು ದೂರಿದರು.

'ನನ್ನ ನಿರ್ಧಾರವನ್ನು ಯಡಿಯೂರಪ್ಪ ಅವರಿಗೆ ತಿಳಿಸಿದ್ದೇನೆ. ದೂರವಾಣಿ ಮೂಲಕ ಅವರೊಂದಿಗೆ ಚರ್ಚಿಸಿದ್ದೇನೆ. ನನಗೆ ಆಗಿರುವ ನೋವನ್ನು ತಿಳಿಸಿದ್ದೇನೆ. ನನ್ನದು ಮತ್ತು ಯಡಿಯೂರಪ್ಪ ಅವರದ್ದು ರಾಜಕಾರಣ ಮೀರಿದ ಸಂಬಂಧ' ಎಂದು ಹೇಳಿದರು.

5ನೇ ಪುಟ ನೋಡಿ
ವಿಶ್ಲೇಷಣೆ 5

'ಗಂಗಾವತಿ ಕ್ಷೇತ್ರದಿಂದ ಸ್ಪರ್ಧೆ'

'ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ಕ್ಷೇತ್ರದಿಂದ ನಾನು ಸ್ಪರ್ಧಿಸುತ್ತೇನೆ. ಮತದಾರರ ಪಟ್ಟಿಯಲ್ಲಿ ಈಗಾಗಲೇ ಹೆಸರು ನೋಂದಾಯಿಸಿದ್ದೇನೆ. ಚುನಾವಣೆ ಎದುರಿಸಲು ಸಿದ್ಧತೆಗಳನ್ನೂ ಆರಂಭಿಸಿದ್ದೇನೆ' ಎಂದು ಜನಾರ್ದನ ರೆಡ್ಡಿ ಪ್ರಕಟಿಸಿದರು.

ಜಾಹೀರಾತು



ಮಕ್ಕಳ ಅಪೌಷ್ಟಿಕತೆಯನ್ನು ತಗ್ಗಿಸುವ ದಿಸೆಯಲ್ಲಿ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಅಭಿವೃದ್ಧಿ ಪ್ರಗತಿಯ ವೇಗವನ್ನು ಹೆಚ್ಚಿಸುತ್ತಿದೆ.

ವಚನದಂತೆ ಬದ್ಧತೆಯ ಕಡೆಗೆ
ಅಪೌಷ್ಟಿಕತೆಯ ಅಂತ್ಯ

ಐಸಿಡಿಎಸ್ ನೀತಿಯ ಪ್ರಾಥಮಿಕ ಗುರಿಯು 0–6 ವರ್ಷಗಳವರೆಗಿನ ಮಕ್ಕಳು, ಗರ್ಭಿಣಿಯರು, ಬಾಣಂತಿಯರು ಹಾಗೂ ಕಿಶೋರಿಯರ ಆರೋಗ್ಯ ಮತ್ತು ಪೌಷ್ಟಿಕತೆಯನ್ನು ಸುಧಾರಿಸುವುದಾಗಿದೆ. ಈ ಯೋಜನೆಯ ಬಹುತೇಕ ಸಂಖ್ಯೆಯ ಫಲಾನುಭವಿಗಳು ತಮ್ಮ ದಿನನಿತ್ಯದ ಅವಶ್ಯಕ ಗುಣಮಟ್ಟದಿಂದ ಕೂಡಿದ ಪೂರಕ ಪೌಷ್ಟಿಕ ಆಹಾರವನ್ನು ಒದಗಿಸಿಕೊಳ್ಳುವುದರಿಂದ ವಂಚಿತರಾಗಿರುವರು

ಕರ್ನಾಟಕ ರಾಜ್ಯದಲ್ಲಿ ಐ.ಸಿ.ಡಿ.ಎಸ್. ಯೋಜನೆಯಡಿ ಸುಮಾರು 60,00,000ಕ್ಕೂ ಹೆಚ್ಚಿನ ಫಲಾನುಭವಿಗಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ರಾಜ್ಯಾದ್ಯಂತ ಸ್ಥಾಪಿತವಾಗಿರುವ 137 ಎಂಎಸ್‌ಪಿಟಿಸಿಗಳ (ಅಂಗನವಾಡಿ ಕೇಂದ್ರಗಳಿಗೆ ಪೌಷ್ಟಿಕ ಆಹಾರಗಳ ಸರಬರಾಜುದಾರರು) ಮೂಲಕ 31 ಜಿಲ್ಲೆಗಳಲ್ಲಿ ಆಹಾರವನ್ನು ವಿತರಿಸುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 60,000 ಅಂಗನವಾಡಿ ಕೇಂದ್ರಗಳಿರುತ್ತವೆ.

ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಈ ಎಂಎಸ್‌ಪಿಟಿಸಿಗಳ ಹಾಗೂ ಅಂಗನವಾಡಿ ಕೇಂದ್ರಗಳ ಉಸ್ತುವರಿ ಹಾಗೂ ತಪಾಸಣೆಯನ್ನು ನಡೆಸಲಾಗುತ್ತಿವೆ. 2016 ರಲ್ಲಿನ DELOTTEE ನಂತಹ ಹಲವಾರು ವರದಿಗಳು ಸಲ್ಲಿಕೆಯಾಗಿದ್ದು, ಈ ವರದಿಗಳಲ್ಲಿ ಸರಬರಾಜಾಗುತ್ತಿರುವ ಆಹಾರ ಪದಾರ್ಥಗಳು ಕೇಂದ್ರ ಸರ್ಕಾರದ ಮಾರ್ಗದರ್ಶನದಂತೆ ಇರುವುದಿಲ್ಲವೆಂದು ಹಾಗೂ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಮನೆಗೆ ಕೊಂಡೊಯ್ಯುವ ಆಹಾರ ಪದಾರ್ಥಗಳು (ಟಿ.ಹೆಚ್.ಆರ್.) ಸಹ ಸೂಕ್ಷ್ಮ ಪೋಷಕಾಂಶಗಳೊಂದಿಗೆ (ಮೈಕ್ರೋನ್ಯೂಟ್ರಿಯೆಂಟ್ಸ್) ಬಲವರ್ಧಿತವಾಗಿರುವುದಿಲ್ಲವೆಂದು ತಿಳಿಸಲಾಗಿದೆ. ಆಹಾರ ಮತ್ತು ಪೋಷಕಾಂಶ ಮಂಡಳಿಯು ಕರ್ನಾಟಕ ರಾಜ್ಯದ ಎಲ್ಲಾ ವಿಭಾಗಗಳಿಂದ ಒಟ್ಟು 13 ಮನೆಗೆ ಕೊಂಡೊಯ್ಯುವ ಆಹಾರಗಳ (ಟಿ.ಹೆಚ್.ಆರ್.) ಮಾದರಿಗಳನ್ನು ಸಂಗ್ರಹಿಸಿ, ಅವುಗಳನ್ನು ಚೆನ್ನೈನ ಪ್ರಾದೇಶಿಕ ಆಹಾರ ಪರೀಕ್ಷಾ ಪ್ರಯೋಗಶಾಲೆಗೆ ಪರಿವೀಕ್ಷಣೆಗಾಗಿ ಕಳುಹಿಸಿರುತ್ತದೆ. ಈ ರೀತಿ ಸಂಗ್ರಹಿಸಲಾದ 13 ಟಿ.ಹೆಚ್. ಆರ್. ಮಾದರಿಗಳಲ್ಲಿ ಒಟ್ಟು 12 ಮಾದರಿಗಳಲ್ಲಿ ನಿಗದಿಪಡಿಸಲಾದಂತೆ ಅವಶ್ಯಕ ಪ್ರಮಾಣಕ್ಕಿಂತಲೂ ಕಡಿಮೆ ಪ್ರಮಾಣದ ಪ್ರೋಟೀನು ಹಾಗೂ ಕ್ಯಾಲೋರಿಗಳು ಕಂಡುಬಂದಿರುವುದಾಗಿ



ಹಾಗೂ ಜೀವಸತ್ವಗಳೊಂದಿಗೆ (ವಿಟಮಿನ್ಸ್) ಬಲವರ್ಧಿತಗೊಂಡಿಲ್ಲದಿರುವುದು ಕಂಡುಬಂದಿದೆ.

ಈ ವರದಿಗಳಂತೆ, ಐ.ಸಿ.ಡಿ.ಎಸ್. ಯೋಜನೆಯ ಫಲಾನುಭವಿಗಳಿಗೆ ಅಪಾರ ತೊಂದರೆಗಳುಂಟಾಗುತ್ತಿದ್ದು, ಅವರಲ್ಲಿ ಬಹುತೇಕರು ಎಂಎಸ್‌ಪಿಟಿಸಿಗಳಿಂದ ತಾಂತ್ರಿಕವಾಗಿ ಸಂಸ್ಕರಿತ ವಿಧಾನವನ್ನು ಪಾಲಿಸದೇ ಸರಬರಾಜಾಗುತ್ತಿರುವ ಪೂರಕ ಪೌಷ್ಟಿಕ ಆಹಾರವನ್ನು ಅಂಗನವಾಡಿಗಳಿಂದ ಪಡೆದುಕೊಳ್ಳುವಂತೆ ಒತ್ತಾಯಗೊಳ್ಳುತ್ತಿರುವುದು ಸ್ಪಷ್ಟವಾಗಿದೆ. ಹೀಗಾಗಿ, ರಾಜ್ಯದಲ್ಲಿನ ಇಂದಿನ ಅಸಮತೋಲಿನ ಪರಿಸ್ಥಿತಿಯನ್ನು ಅದರಲ್ಲೂ ವಿಶೇಷವಾಗಿ ಪ್ರಸಕ್ತ ಚಾಲ್ತಿಯಿರುವ ಕೋವಿಡ್–19 ನಂತಹ ಸಾಂಕ್ರಾಮಿಕ ರೋಗದ ಕಾರಣದಿಂದಾಗಿ, ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ರಾಜ್ಯದಲ್ಲಿ ಹಾಲಿ ನೀಡಲಾಗುತ್ತಿರುವ ಆಹಾರವನ್ನು ಸ್ಥಗಿತಗೊಳಿಸಿ, ಅವಶ್ಯಕ ಕ್ರಮಗಳೊಂದಿಗೆ ಐ.ಸಿ.ಡಿ.ಎಸ್.ಯೋಜನೆಯನ್ನು ಕಾರ್ಯರೂಪಗೊಳಿಸುವಂತೆ ಆದೇಶಿಸಿದೆ. ಅಲ್ಲದೇ, ಆಹಾರ ಪದಾರ್ಥಗಳ ಬಲವರ್ಧನೆಯ ಸೂತ್ರದ ಅನುಷ್ಠಾನದ ಸಲುವಾಗಿ ಎಂಎಸ್‌ಪಿಟಿಸಿಗಳು ಬಿ.ಐ.ಎಸ್. ಪರವಾನಿಗೆ ಹೊಂದಿರುವ ಮಹಿಳಾ ಗುಂಪುಗಳ ಸಹಾಯವನ್ನು ಪಡೆಯಲು ದಿನಾಂಕ 05.05.2021 ರಲ್ಲಿ ಹೊರಡಿಸಲಾದ ಸರ್ಕಾರಿ ಆದೇಶದಂತೆ ಕರಾರು ಮಾಡಿಕೊಳ್ಳಲು ಎಂಎಸ್‌ಪಿಟಿಸಿಗಳಿಗೆ ಸೂಕ್ತ ನಿರ್ದೇಶನ ಹೊರಡಿಸುವಂತೆ ಸರ್ಕಾರಕ್ಕೆ ಸೂಚಿಸಿದೆ.

ಗೌರವಾನ್ವಿತ ಉಚ್ಚ ನ್ಯಾಯಾಲಯವು ನೀಡಿರುವ ಆದೇಶವನ್ನು ಪರಿಗಣಿಸಿ, ಕರ್ನಾಟಕ ಸರ್ಕಾರವು ಮಾನ್ಯ ನ್ಯಾಯಾಲಯಕ್ಕೆ ಒಂದು ಅನುಸರಣಾ ವರದಿಯನ್ನು ಸಲ್ಲಿಸಿದ್ದು, ಅದರಂತೆ ಸರ್ಕಾರವು ಐ.ಸಿ.ಡಿ.ಎಸ್. ಯೋಜನೆಯನ್ನು ಉತ್ತಮವಾಗಿ ಅನುಷ್ಠಾನಗೊಳಿಸುವ ಸಂಬಂಧ ಮತ್ತು ತಾಯಂದಿರ ಮತ್ತು ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆಯನ್ನು ಉತ್ತಮಪಡಿಸುವ ಸಲುವಾಗಿ ವಿಶೇಷ ಗಮನಹರಿಸಲಾಗಿದೆ ಹಾಗೂ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂಬುದಾಗಿ ಈ ಅನುಸರಣಾ ವರದಿಯಲ್ಲಿ ತಿಳಿಸಿದೆ.





ನಗರದ ಚರ್ಚ್‌ಸ್ಟ್ರೀಟ್‌ನಲ್ಲಿ ಭಾನುವಾರ ರಾತ್ರಿ ಜನಸಂದಣಿ ನಡುವೆಯೇ ಯುವಕ–ಯುವತಿಯರು ಸೆಲ್ಫಿ ಕ್ಲಿಕ್ಕಿಸಿಕೊಂಡರು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ (ಎಡಚಿತ್ರ), ಚರ್ಚ್‌ಸ್ಟ್ರೀಟ್‌ನಲ್ಲಿ ಮಳೆ ಸುರಿಯುವ ವೇಳೆ ಬಟ್ಟೆಗಳನ್ನು ತಲೆ ಮೇಲೆ ಹೊದ್ದುಕೊಂಡು ಯುವತಿಯರು ಹೆಜ್ಜೆ ಹಾಕಿದರು– ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಮೋಡದ ವಾತಾವರಣ: ಮಳೆ ಸಿಂಚನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಭಾನುವಾರ ಸಂಜೆ ಸಾಧಾರಣ ಮಳೆ ಸುರಿಯಿತು.

ನಗರದ ಬಹುತೇಕ ಪ್ರದೇಶಗಳಲ್ಲಿ ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣ ಕಂಡುಬಂತು. ಸಂಜೆ 6 ಗಂಟೆ ನಂತರ ತುಂತುರು ಮಳೆ ಆರಂಭವಾಯಿತು. ನಂತರ, ಮಳೆ ಜೋರಾಯಿತು. ಸಂಪಂಗಿರಾಮನಗರ, ಶಿವಾಜಿನಗರ, ಎಂ.ಜಿ.ರಸ್ತೆ, ಅಶೋಕನಗರ, ಕೋರಮಂಗಲ, ಮಡಿವಾಳ, ಜಯನಗರ, ಜೆ.ಪಿ. ನಗರ, ಹನುಮಂತನಗರ, ಗಿರಿನಗರ, ದೀಪಾಂಜಲಿನಗರ, ರಾಜರಾಜೇಶ್ವರಿನಗರ, ಜ್ಞಾನಭಾರತಿ, ಕೆಂಗೇರಿ, ನಾಯಂಡನಹಳ್ಳಿ, ಬನಶಂಕರಿ, ಮಡಿವಾಳ, ಕೋರಮಂಗಲ, ಶಾಂತಿನಗರ, ವಿಲ್ಸನ್ ಗಾರ್ಡನ್, ಶಾಂತಿನಗರ, ಗಾಂಧಿನಗರ ಹಾಗೂ ಸುತ್ತಮುತ್ತ ಮಳೆ ಆಯಿತು.

ಇಂದೂ ಮಳೆ ಸಾಧ್ಯತೆ

‘ಸೋಮವಾರವೂ ನಗರದ ಹಲವೆಡೆ ಮೋಡ ಕವಿದ ವಾತಾವರಣ ಕಂಡುಬರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ’ ಎಂದು ಹವಾಮಾನ ಇಲಾಖೆಯು ತಿಳಿಸಿದೆ.

ವಿಜಯನಗರ, ರಾಜಾಜಿನಗರ, ಯಶವಂತಪುರ, ಪೀಣ್ಯ, ಜಾಲಹಳ್ಳಿ, ಮಲ್ಲೇಶ್ವರ, ಶೇಷಾದ್ರಿಪುರ, ಹೆಬ್ಬಾಳ, ಆರ್‌.ಟಿ.ನಗರ ಹಾಗೂ ಸುತ್ತಮುತ್ತಲೂ ಮಳೆ ಸುರಿಯಿತು. ಭಾನುವಾರ ರಜೆ ಇದ್ದಿದ್ದರಿಂದ ಸಂಜೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಮಾರುಕಟ್ಟೆಗಳತ್ತ ಮುಖ ಮಾಡಿದ್ದರು.

ಕ್ರಿಸ್‌ಮಸ್ ಹಬ್ಬದ ನಿಮಿತ್ತವೂ ಮಾರುಕಟ್ಟೆಯಲ್ಲಿ ಸಂದಣಿ ಕಂಡುಬಂತು. ಮಳೆ ಆರಂಭವಾಗಿದ್ದರಿಂದ ಹಲವರು, ಅಂಗಡಿ ಹಾಗೂ ಮಳಿಗೆಗಳಲ್ಲಿ ಆಶ್ರಯ ಪಡೆದುಕೊಂಡಿದ್ದರು.

ಕೆಲ ಸವಾರರು, ತಮ್ಮ ದ್ವಿಚಕ್ರ ವಾಹನಗಳನ್ನು ರಸ್ತೆ ಪಕ್ಕದಲ್ಲಿ ನಿಲ್ಲಿಸಿ ಸುರಕ್ಷಿತ ಸ್ಥಳಗಳಲ್ಲಿ ನಿಂತುಕೊಂಡಿದ್ದರು. ಬಹುತೇಕರು, ಸುರಿಯುವ ಮಳೆಯಲ್ಲಿ ಓಡಾಡಿದರು. ತುಂತುರು ಮಳೆಯಿಂದಾಗಿ ಹಲವೆಡೆ ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು. ದಟ್ಟಣೆಯೂ ಕಂಡುಬಂತು.

ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್ ಹಾಗೂ ಸುತ್ತಮುತ್ತ ರಸ್ತೆಗಳಲ್ಲೂ ಜನಸಂದಣಿ ಹೆಚ್ಚಿತ್ತು. ಯುವಕ–ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಸುರಿಯುವ ಮಳೆಯಲ್ಲೇ ಹಲವರು ಕೊಡೆ ಹಿಡಿದು ಹೆಜ್ಜೆ ಹಾಕಿದರು. ಕೆಲವರು, ಬಟ್ಟೆ ಹಾಗೂ ಬ್ಯಾಗ್‌ಗಳನ್ನು ತಲೆ ಮೇಲಿಟ್ಟುಕೊಂಡು ಓಡಾಡಿದರು.

‘ಭಾನುವಾರ ಇಡೀ ದಿನ ಮೋಡ ಕವಿದ ವಾತಾವರಣವೇ ಹೆಚ್ಚಿತ್ತು. ಸಂಜೆ ಹಲವಡೆಗೆ ಉತ್ತಮ ಮಳೆಯಾಗಿದೆ. ಹಾನಿ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.



ಹೊಸ ಪಿಂಚಣಿ ಯೋಜನೆ ರದ್ದುಪಡಿಸಿ ಹಳೆ ಪಿಂಚಣಿ ಯೋಜನೆ ಜಾರಿಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಎನ್‌ಪಿಎಸ್ ಸರ್ಕಾರಿ ನೌಕರರು ಹಮ್ಮಿಕೊಂಡಿರುವ ಅನಿರ್ದಿಷ್ಟಾವಧಿ ಧರಣಿ 7ನೇ ದಿನಕ್ಕೆ ಕಾಲಿಟ್ಟಿದ್ದು, ಸ್ಥಳಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಭಾನುವಾರ ಭೇಟಿ ನೀಡಿ ಬೆಂಬಲ ವ್ಯಕ್ತಪಡಿಸಿದರು.

‘ಸಾಧನೆಗೆ ವಿಶ್ವಾಸ ತುಂಬುತ್ತಿದ್ದ ಎಚ್‌.ಎನ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾನ್ಯ ಹಾಗೂ ಸರಳ ಮನುಷ್ಯರನ್ನು ಇಷ್ಟಪಡುತ್ತಿದ್ದ ಎಚ್. ನರಸಿಂಹಯ್ಯ ಅವರು, ಜೀವನ ಸಾಧನೆಗೆ ವಿಶ್ವಾಸ ತುಂಬುತ್ತಿದ್ದರು. ಇದಕ್ಕೆ ನಾನೇ ಉತ್ತಮ ಉದಾಹರಣೆ’ ಎಂದು ನಟ ಶ್ರೀನಾಥ್ ತಿಳಿಸಿದರು.

ಅಕಾಡೆಮಿ ಆಫ್ ಹ್ಯೂಮರ್ ಸಹಯೋಗದಲ್ಲಿ ನ್ಯಾಷನಲ್ ಎಜುಕೇಷನ್ ಸೊಸೈಟಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಡಾ.ಎಚ್. ನರಸಿಂಹಯ್ಯ ಅವರ ಜನ್ಮಶತಾಬ್ದಿ ಮತ್ತು ಹಾಸ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ‘ನಾನು ಸಾಮಾನ್ಯವಾಗಿ ಶಾಲಾ–ಕಾಲೇಜಿಗೆ 45 ನಿಮಿಷ ತಡವಾಗಿ ಹೋಗುತ್ತಿದ್ದೆ. ಇದನ್ನು ಗಮನಿಸಿದ ಎಚ್.ಎನ್., ‘ನಾಳೆ ತರಗತಿಗೆ ಮೂರು ನಿಮಿಷ ಮೊದಲು ಬಂದರೆ 3 ದಿನದ ಹಾಜರಿ ನೀಡುತ್ತೇನೆ’ ಎಂದು ಹೇಳಿದ್ದರು. ಅಷ್ಟಾಗಿಯೂ 30 ನಿಮಿಷ ತಡವಾಗಿ ಹೋಗಿದ್ದೆ. ಆಗ ತರಗತಿಯ ಮಹತ್ವ ತಿಳಿದಿರಲಿಲ್ಲ. ಸಿನಿಮಾ ಶೋಗಳಿಗೆ ಮಾತ್ರ ಸಮಯಕ್ಕೆ ಸರಿಯಾಗಿ ಹೋಗುತ್ತಿದ್ದೆ. ಇದನ್ನು ಗಮನಿಸಿದ ಎಚ್.ಎನ್., ಕಲೆಯಲ್ಲಿನ ಆಸಕ್ತಿ ಗುರುತಿಸಿ ಪ್ರೋತ್ಸಾಹಿಸಿದರು’ ಎಂದು ಹೇಳಿದರು.

‘ನಾಟಕಗಳಲ್ಲಿ ಸಂಭಾಷಣೆಯನ್ನು ಯಾವ ರೀತಿ ನಡೆಸಬೇಕು ಎನ್ನುವುದನ್ನು ಸರಸಿಂಹಯ್ಯ ಅವರು ಕಲಿಸಿಕೊಟ್ಟರು. ಅವರು ಬೋಧಿಸಿದ್ದರಲ್ಲಿ ನೂರಕ್ಕೆ ನೂರರಷ್ಟು ಅಳವಡಿಸಿಕೊಳ್ಳಲು ಸಾಧ್ಯವಾಗದಿದ್ದರೂ, ಎರಡು ಮೂರನ್ನು ಅಳವಡಿಸಿಕೊಂಡರೂ ಬದುಕಿನಲ್ಲಿ ಪಾಸಾಗುತ್ತೇವೆ ಎಂಬ ನಂಬಿಕೆಯಿತ್ತು’ ಎಂದು ತಿಳಿಸಿದರು.

ನ್ಯಾಷನಲ್ ಎಜುಕೇಷನ್ ಸೊಸೈಟಿ ಅಧ್ಯಕ್ಷ ಎ.ಎಚ್. ರಾಮರಾವ್, ‘ನ್ಯಾಷನಲ್ ಕಾಲೇಜಿನಲ್ಲಿ ಯಾವುದೇ ರಾಜಕಾರಣ ಹಾಗೂ ಸ್ವಾಮೀಜಿಯ ಹಸ್ತಕ್ಷೇಪವಿಲ್ಲ. ಇವರ ಹಸ್ತಕ್ಷೇಪ ಇರುವಲ್ಲಿ ಹಣವೂ ಇರುತ್ತದೆ. ನ್ಯಾಷನಲ್ ಕಾಲೇಜು ಸ್ವತಂತ್ರವಾಗಿರುವುದರಿಂದ ಹಣ ಇಲ್ಲದಿದ್ದರೂ ಹಾಸ್ಯ ಉಳಿದಿದೆ’ ಎಂದು ಹೇಳಿದರು.

ಹಾಸ್ಯೋತ್ಸವದ ಸಂಚಾಲಕ ಬೇಲೂರು ರಾಮಮೂರ್ತಿ ಎಚ್. ಎನ್ ಜತೆಗಿನ ಒಡನಾಟ ಸ್ಮರಿಸಿಕೊಂಡರು. ಗಂಗಾವತಿ ಪ್ರಾಣೇಶ್, ಭುವನೇಶ್ವರಿ ಹೆಗಡೆ, ಎಚ್. ಡುಂಡಿರಾಜ್, ವೈ.ವಿ. ಗುಂಡೂರಾವ್, ಮಿಮಿಕ್ರಿ ಗೋಪಿ ಹಾಗೂ ಕೆ.ಪಿ. ಪುತ್ತೂರಾಯ, ಗಾಯಕ ಶಶಿಧರ ಕೋಟೆ ಉಪಸ್ಥಿತರಿದ್ದರು.

ನಗರದಲ್ಲಿ ಸಂಭ್ರಮದ ಕ್ರಿಸ್‌ಮಸ್ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೈಸ್ತರ ಪವಿತ್ರ ಹಬ್ಬ ಕ್ರಿಸ್‌ಮಸ್ ಅನ್ನು ನಗರದೆಲ್ಲೆಡೆ ಭಾನುವಾರ ಸಂಭ್ರಮ ಸಡಗರದಿಂದ ಆಚರಿಸಲಾಯಿತು.

ಕ್ರೈಸ್ತ ಸಮುದಾಯದವರು ಚರ್ಚ್‌ಗಳಿಗೆ ತೆರಳಿ ಏಸುವಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಹೊಸ ಉಡುಗೆಗಳನ್ನು ತೊಟ್ಟಿದ್ದ ಕ್ರೈಸ್ತರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಸಿಹಿ ಹಂಚಿದರು. ಶಿವಾಜಿನಗರದ ಸೇಂಟ್ ಮೇರಿ ಬೆಸಿಲಿಕಾ, ಕಬ್ಬನ್ ರಸ್ತೆಯ ಸೇಂಟ್ ಆಂಡ್ರ್ಯೂಸ್ ಚರ್ಚ್, ಫ್ರೇಜರ್‌ಟೌನ್‌ನ ಸೇಂಟ್ ಜಾನ್ಸ್ ಚರ್ಚ್, ಹಡ್ಸನ್ ವೃತ್ತದ ಹಡ್ಸನ್ ಚರ್ಚ್, ಎಂ.ಜಿ.ರಸ್ತೆಯ ಸೇಂಟ್ ಮಾರ್ಕ್ಸ್ ಚರ್ಚ್ ಸೇರಿದಂತೆ ವಿವಿಧ ಚರ್ಚ್‌ಗಳಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಿತು.

ಹಬ್ಬದ ಅಂಗವಾಗಿ ಚರ್ಚ್‌ಗಳು ವಿದ್ಯುತ್ ದೀಪ ಹಾಗೂ ಅಲಂಕಾರಿಕ ವಸ್ತುಗಳಿಂದ ಕಂಗೊಳಿಸಿದವು. ಸಾಂಟಾಕ್ಲಾಸ್ ವೇಷಧಾರಿಗಳು ಚರ್ಚ್‌ನ ಆವರಣದಲ್ಲಿದ್ದ ಭಕ್ತಾದಿಗಳಿಗೆ ಬಗೆಬಗೆಯ ಉಡುಗೊರೆಗಳನ್ನು ನೀಡಿದರು. ಉಡುಗೊರೆ ಪಡೆಯಲು ಮಕ್ಕಳು ಮುಗಿ ಬೀಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಕ್ರಿಸ್‌ಮಸ್ ಕೇಕ್ ಹಾಗೂ ಸಿಹಿ ತಿನಿಸುಗಳನ್ನು ಹಂಚಲಾಯಿತು.

ಚರ್ಚ್ ಆವರಣದಲ್ಲಿ ಏಸು ಹುಟ್ಟಿದ ಸಂದರ್ಭದ ಪ್ರತಿಕೃತಿಗಳು ಹಾಗೂ ಮೇರಿ ಮಾತೆ ಬಾಲ ಏಸುವನ್ನು ಎತ್ತಿಕೊಂಡಿರುವ ಮೂರ್ತಿಗಳನ್ನು ಇಡಲಾಗಿತ್ತು. ಕ್ರಿಸ್‌ಮಸ್ ಮರಕ್ಕೆ ಉಡುಗೊರೆಗಳನ್ನು ಕಟ್ಟಲಾಗಿತ್ತು. ಚರ್ಚ್‌ಗಳಲ್ಲಿ ಬೈಬಲ್ ಪಠಣದ ಜತೆಗೆ ಏಸುವಿನ ಮಹಿಮೆಯ ಗೀತೆಗಳನ್ನು ಹಾಡಲಾಯಿತು.

ಚರ್ಚ್‌ಗಳಲ್ಲಿ ನೃತ್ಯರೂಪಕಗಳು, ಕೆಲವೆಡೆ ಮೇರಿ ಮಾತೆ, ಬಾಲ ಏಸುವಿನ ಮೆರವಣಿಗೆ, ರಥೋತ್ಸವ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆದವು.



ಕ್ರಿಸ್‌ಮಸ್ ಅಂಗವಾಗಿ ನಗರದಲ್ಲಿ ಯುವಜನರು ಸಾಂಟಾ ಕ್ಲಾಸ್ ಟೋಪಿ ಧರಿಸಿ ವಿದ್ಯುತ್ ಬೈಸಿಕಲ್‌ನಲ್ಲಿ ಸಂಚರಿಸಿ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ

ಮನುಸ್ಮೃತಿ ಸುಟ್ಟು ದಸಂಸ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಆರ್. ಅಂಬೇಡ್ಕರ್ ಅವರು ಮನುಸ್ಮೃತಿ ಸುಟ್ಟ ದಿನದ ಅಂಗವಾಗಿ ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಮನುಸ್ಮೃತಿ ಸುಟ್ಟು ಆಕ್ರೋಶ ವ್ಯಕ್ತಪಡಿಸಲಾಯಿತು.

ದಲಿತ ಮುಖಂಡ ಮಾವಳ್ಳಿ ಶಂಕರ್ ಮಾತನಾಡಿ, ‘ಮನುಸ್ಮೃತಿ ಓದಿದರೆ ಅದು ಎಷ್ಟು ಜೀವ ವಿರೋಧಿಯಾಗಿದೆ ಎಂಬುದು ಅರ್ಥವಾಗುತ್ತದೆ. ಆದರೆ, ಮನುವಾದಿಗಳು ಮನುಸ್ಮೃತಿಯೇ ಶ್ರೇಷ್ಠ ಎನ್ನುತ್ತಿದ್ದಾರೆ. ನ್ಯಾಯಾಂಗವೂ ಮನುವಾದಿಗಳ ಹಿಡಿತದಲ್ಲಿ ಸಿಲುಕಿದೆ. ಜಾತಿ, ಧರ್ಮಗಳ ಹೆಸರಿನಲ್ಲಿ ದೇಶವನ್ನು ಸಂಪೂರ್ಣ ಛಿದ್ರಗೊಳಿಸಲಾಗುತ್ತಿದೆ’ ಎಂದು ಆರೋಪಿಸಿದರು.

‘1927ರಲ್ಲಿ ಕೆರೆಯ ನೀರು ಮುಟ್ಟುವ ಹೋರಾಟ ನಡೆಸಿದ ಅಂಬೇಡ್ಕರ್ ಅವರು, ಮುಂದುವರಿದ ಭಾಗವಾಗಿ 1927ರ ಡಿಸೆಂಬರ್ 27ರಂದು ಮನುಸ್ಮೃತಿ ಸುಟ್ಟು ಹಾಕಿದರು. ಆದರೂ, ಶೂದ್ರರು, ಅತಿ ಶೂದ್ರರ ಮನಸುಗಳಲ್ಲಿ ಮನುಸ್ಮೃತಿ ಸೇರಿಕೊಂಡಿದೆ. ಎಲ್ಲಿಯ ತನಕ ಮನುಸ್ಮೃತಿ ಈ ದೇಶದಲ್ಲಿ ಇರುತ್ತದೋ ಅಲ್ಲಿಯ ತನಕ ಬ್ರಾಹ್ಮಣವಾದಿಗಳ ಆಟ ಮುಂದುವರಿಯುತ್ತದೆ. ಅದರ ಭಾಗವಾಗಿಯೇ ಶೇ 3ರಷ್ಟು ಜನಸಂಖ್ಯೆ ಇರುವವರಿಗೆ ಶೇ 10ರಷ್ಟು ಮೀಸಲಾತಿ (ಇಡಬ್ಲ್ಯುಎಸ್) ದೊರಕಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗದಲ್ಲಿ ಮನುಸ್ಮೃತಿ ಪ್ರವೇಶ ಮಾಡಿದೆ. ಅದು ಕೇವಲ ಪುಸ್ತಕದಲ್ಲಿ ಅಕ್ಷರವಾಗಿ ಉಳಿದಿಲ್ಲ. ದೇಶದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಬಲಗೊಳ್ಳಲು ಮನುಸ್ಮೃತಿಯೇ ಕಾರಣ. ಆರ್‌ಎಸ್‌ಎಸ್ ಸೋಲುವ ತನಕ ಮನುಸ್ಮೃತಿ ಸೋಲುವುದಿಲ್ಲ’ ಎಂದರು.



ಸ್ವಾತಂತ್ರ್ಯ ಉದ್ಯಾನದಲ್ಲಿ ಮನುಸ್ಮೃತಿಯ ಪ್ರತಿಗಳನ್ನು ದಲಿತ ಮುಖಂಡರು ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು. ಸಾಹಿತಿ ದು. ಸರಸ್ವತಿ, ಹೋರಾಟಗಾರರಾದ ಶ್ರೀಪಾದ ಭಟ್, ವಿ.ನಾಗರಾಜ್, ಎನ್‌.ವೆಂಕಟೇಶ್, ಮಾವಳ್ಳಿ ಶಂಕರ್ ಇದ್ದರು

ನಗರದಲ್ಲಿ ಇಂದು

ಪೂರ್ಣಪ್ರಮತಿ ಉತ್ಸವ: ಆಯೋಜನೆ: ಪೂರ್ಣಪ್ರಮತಿ, ಬೆಳಿಗ್ಗೆ, ಸ್ಥಳ: ಕಂಬದ ಆಂಜನೇಯ ಸ್ವಾಮಿ ದೇವಸ್ಥಾನ, ಪೂರ್ಣಪ್ರಜ್ಞ ನಗರ, ಸಂಜೆ, ಸ್ಥಳ: ರಾಘವೇಂದ್ರಸ್ವಾಮಿ ಮಠದ ಆವರಣ, ಪೂರ್ಣಪ್ರಜ್ಞ ನಗರ

ಅಮರ್ ಕುಮಾರ್ ಪಾಂಡೆ ಅವರಿಗೆ ಬೀಳ್ಕೊಡುಗೆ ಪರೇಡ್: ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಪರೇಡ್ ಮೈದಾನ, ಕೋರಮಂಗಲ, ಬೆಳಿಗ್ಗೆ 8

‘ಕುರುಕ್ಷೇತ್ರ’ ಪೌರಾಣಿಕ ನಾಟಕ ಪ್ರದರ್ಶನ: ಉದ್ಘಾಟನೆ: ಆರ್. ಚಂದ್ರಶೇಖರ್, ಅತಿಥಿಗಳು: ಆರ್. ರಾಮಚಂದ್ರ, ಕೆ.ಎಚ್. ಕುಮಾರ್, ಎಂ. ಜಗದೀಶ್ ಗೌಡ, ಯರಗುಂಟೆ ವಿ. ಶ್ರೀನಿವಾಸ್, ಅಧ್ಯಕ್ಷತೆ: ಆರ್.ಜಿ. ಹಳ್ಳಿ ನಾಗರಾಜ್, ಆಯೋಜನೆ: ಕರ್ನಾಟಕ ರಂಗಸಂಗೀತ ಪರಿಷತ್ತು, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಮಧ್ಯಾಹ್ನ 12.30

ಸದ್ಗುರು ಅನಂತಸ್ವಾಮಿ ಅವರ ದಿವ್ಯಾರಾಧನ ಮಹೋತ್ಸವ: ಪ್ರವಚನದ ವಿಷಯ: ಸಂತರ ಸಾಧನೆ, ಉಪನ್ಯಾಸ: ಹ.ರಾ. ನಾಗರಾಜಾಚಾರ್ಯ, ಭಜನೆ: ವಿಠೋಬಾ ದೇವಸ್ಥಾನ ಭಜನೆ ಮಂಡಳಿ, ಕೀರ್ತನೆ: ಕೃಷ್ಣಮೂರ್ತಿ ಬೋಗಾಳೆ, ಆಯೋಜನೆ: ಅನಂತಸ್ವಾಮಿ ಆಶ್ರಮ, ಸ್ಥಳ: ಸುಭೇದಾರ್ ಛತ್ರಂ ರಸ್ತೆ ಕ್ರಾಸ್, ಕಪಾಲಿ ಟಾಕೀಸ್ ಹಿಂಭಾಗ, ಗಾಂಧಿ ನಗರ, ಸಂಜೆ 5.30

ಕುವೆಂಪು ಸಾಂಸ್ಕೃತಿಕ ಉತ್ಸವ, ನಾಟಕೋತ್ಸವ, ಗೀತಗಾಯನ ಮತ್ತು ನೃತ್ಯ ಕಾರ್ಯಕ್ರಮ: ಉದ್ಘಾಟನೆ: ಹೇಮಲತಾ ಗೋಪಾಲಯ್ಯ, ಅತಿಥಿಗಳು: ಪುಷ್ಪ ರಾಜೇಂದ್ರಕುಮಾರ್, ಶೋಭ ತಮ್ಮಣ್ಣಗೌಡ, ಸವಿತ ಪ್ರಸನ್ನಕುಮಾರ್, ಛಾಯಾ ಭಾರ್ಗವಿ, ರೂಪ ಮಲ್ಲಿನಾಥ್, ಗೀತ ರಾಯ್ಕರ್, ಆಯೋಜನೆ: ಕುವೆಂಪು ಕಲಾನಿಕೇತನ, ಸ್ಥಳ: ಹಿರಿಯ ನಾಗರಿಕರ ವೇದಿಕೆ, ಕೆಂಪೇಗೌಡ ಉದ್ಯಾನ, ನಂದಿನಿ ಲೇಔಟ್, ಸಂಜೆ 6



ರಾಘವೇಂದ್ರ ರಾಜ್‌ಕುಮಾರ್



ಬರಗೂರು ರಾಮಚಂದ್ರಪ್ಪ

ಎಚ್‌.ಎಚ್. ಮ್ಯಾದಾರ್ ಚಿತ್ರಿಸಿರುವ ‘ಡಾ. ರಾಜ್‌ಕುಮಾರ್ ಅವರ ಚುಕ್ಕಿ ಚಿತ್ರಗಳ ಪ್ರದರ್ಶನ’ ಮತ್ತು ‘ಅಮೂಲ್ಯ ಮುತ್ತು’ ಚುಕ್ಕಿ ಚಿತ್ರ ಸಂಪುಟ ಬಿಡುಗಡೆ: ರಾಘವೇಂದ್ರ ರಾಜ್‌ಕುಮಾರ್, ಪ.ಸ. ಕುಮಾರ್, ಆಶಯ ನುಡಿ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಹಂಸಲೇಖ, ಆಯೋಜನೆ: ನಾಡೋಜ ಡಾ. ಬರಗೂರು ಪ್ರತಿಷ್ಠಾನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಪಾರ್ಕ್, ಸಂಜೆ 5

ಶಂಕರನಾಗ್ ನಾಟಕೋತ್ಸವದ ಉದ್ಘಾಟನೆ: ಅತಿಥಿಗಳು: ಬನಶಂಕರಿ ವಿ. ಅಂಗಡಿ, ಬಲವಂತ್ ರಾವ್ ಪಾಟೀಲ್, ಸಂದೇಶ ಜವಳಿ, ಕೆ.ಎಸ್.ಡಿ.ಎಲ್. ಚಂದ್ರು, ಗಂಗಾಧರ್, ರಮೇಶ್ ಭಟ್, ಮಂಡ್ಯ ರಮೇಶ್, ಉದಯ್ ಆಚಾರ್, ಶಂಕರನಾಗ್ ಪ್ರಶಸ್ತಿ ಪುರಸ್ಕೃತರು: ಸಿ.ಎಂ. ನರಸಿಂಹ ಮೂರ್ತಿ, ಉಮಾ ವೈ.ಜಿ., ತಾಯಿ ಲೋಕೇಶ್, ‘ಚಿರಸ್ಮರಣೆ’ ನಾಟಕ ಪ್ರದರ್ಶನ: ಜಿಕೆವಿಕೆ ಭೂಮಿಕ ಬಳಗ, ನಿರ್ದೇಶನ: ಮಾಲತೇಶ್ ಬಡಿಗೇರ್, ಸಂಗೀತ: ರಾಜಗುರು ಹೊಸಕೋಟೆ, ಆಯೋಜನೆ: ರಂಗಪಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6.30

ಪಿ.ಜಿ ಪ್ರವೇಶ: ಇಂದು ಪೋರ್ಟಲ್ ಆರಂಭ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಪ್ರಥಮ ವರ್ಷದ ಸ್ನಾತಕೋತ್ತರ ಪ್ರವೇಶಕ್ಕೆ 2ನೇ ಸುತ್ತಿನ ಸಮಾಲೋಚನೆಗಾಗಿ ಡಿ.26ರಂದು ಪೋರ್ಟಲ್ ತೆರೆಯಲಿದೆ.

ಈ ಹಿಂದೆ ಅರ್ಜಿಗಳನ್ನು ಸಲ್ಲಿಸಿರುವ ವಿದ್ಯಾರ್ಥಿಗಳು, ಮೊದಲ ಸುತ್ತಿನ ಸಮಾಲೋಚನೆಯಲ್ಲಿ ಪ್ರವೇಶ ಪಡೆಯಲು ವಿಫಲರಾದ ವಿದ್ಯಾರ್ಥಿಗಳು 2ನೇ ಸುತ್ತಿನ ಸಮಾಲೋಚನೆಯಲ್ಲಿ ಭಾಗವಹಿಸಬಹುದು. ಈ ಮೊದಲು ಅರ್ಜಿ ಸಲ್ಲಿಸಿದ್ದವರು ಮತ್ತೆ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಡಿ.29ರಂದು ಅರ್ಜಿಗಳನ್ನು ಸಲ್ಲಿಸಲು ಕೊನೆ ದಿನ ಎಂದು ಕುಲಸಚಿವರು ತಿಳಿಸಿದ್ದಾರೆ.

ಸಾರಿಗೆ ನೌಕರರು ವಶಕ್ಕೆ

ಬೆಳಗಾವಿ: ಇಲ್ಲಿನ ಸುವರ್ಣ ಸೌಧ ಬಳಿ ಇರುವ ಬಸ್ತವಾಡದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಸಾರಿಗೆ ನೌಕರರನ್ನು ಭಾನುವಾರ ರಾತ್ರಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ತಿದ್ದುಪಡಿ

ಪತ್ರಿಕೆಯ ಬೆಂಗಳೂರು ನಗರ ಆವೃತ್ತಿಯ ಭಾನುವಾರ ಸಂಚಿಕೆಯ ಪುಟ 2ರಲ್ಲಿ ‘ಸತ್ಯದ ಜಾಗದಲ್ಲಿ ಸುಳ್ಳನ್ನು ಇರಿಸುವ ಕೆಲಸ ಆಗಲಿ: ಬರಗೂರು’ ಎಂಬ ತಪ್ಪು ಶೀರ್ಷಿಕೆ ಪ್ರಕಟವಾಗಿದೆ. ಇದಕ್ಕಾಗಿ ವಿಷಾದಿಸುತ್ತೇವೆ. ಇದು ‘ಸತ್ಯದ ಜಾಗದಲ್ಲಿ ಸತ್ಯವನ್ನೇ ಇರಿಸುವ ಕೆಲಸ ಆಗಲಿ: ಬರಗೂರು’ ಎಂದಾಗಬೇಕಿತ್ತು. **ಸಂ.**

CONNECT

IS 278:2009 125 GSM CM/L. No. 6200079610c
IS 280:2006 290 GSM CM/L. No. 6200079711c
BARBED WIRES | CHAIN LINK | GI WIRES
South India's First ISI Certified Wires
MALU WIRES
Mail: maluwires@gmail.com Aditya Malu : 8197733777
TRADE ENQUIRIES SOLICITED

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

RENTAL PROPERTIES
Accommodation Available
Commercial
AVAILABLE COMMERCIAL Building 10000 sqft for Rent at Banashankari 2nd Stage, K.R.Road. Contact: 9341234288/ 9663224353.

JOB OPPORTUNITIES
Multiple Vacancy
REQUIRED, TEAMLEADER, Telecaller & Field_Executive For Bank Loan collection. Direct recruitment to company. 9620206756, 9620200756.
Wanted
WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

REAL ESTATE SELLING
Farm House/ Land/ Resorts
Kanakapura Road
KANAKAPURA TOWN 1 Acre and 2 Acre with Water & Electricity Suitable for any Purpose Call Ravikumar: 9945928994.

DH DECCAN HERALD ಪ್ರಜಾವಾಣಿ
Book Your Classifieds Ads
Online Log in to dhclassifieds.com
Contact : 9845114560 : 9731810277 9901641752 : 9886213331 080 - 45557163 / 164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement



ವಸತಿಯಲ್ಲಿ ಮಳಿಗೆ: ಮುಚ್ಚಲು ಸೂಚನೆ


ವಾಣಿಜ್ಯ ಚಟುವಟಿಕೆ ತೆರವಿಗೆ ಬಿಬಿಎಂಪಿ ನೋಟಿಸ್; ಕಾನೂನು ಕ್ರಮದ ಎಚ್ಚರಿಕೆ

● ಆರ್. ಮಂಜುನಾಥ್

ಬೆಂಗಳೂರು: ವಸತಿ ಪ್ರದೇಶಗಳಲ್ಲಿ ಕಟ್ಟಡ ನಕ್ಷೆ ಮಂಜೂರಾತಿ ಉಲ್ಲಂಘಿಸಿ ವಾಣಿಜ್ಯ ಚಟುವಟಿಕೆ ನಡೆಸುತ್ತಿರುವವರ ಮೇಲೆ ಬಿಬಿಎಂಪಿ ಕಾನೂನು ಕ್ರಮ ಕೈಗೊಳ್ಳಲು ಮುಂದಾಗಿದೆ.

ವಸತಿ ಕಟ್ಟಡ ನಕ್ಷೆ ಉಲ್ಲಂಘಿಸಿ, ವಾಣಿಜ್ಯ ಚಟುವಟಿಕೆ ನಡೆಸುತ್ತಿರುವ ಮಾಲೀಕರಿಗೆ ಬಿಬಿಎಂಪಿಯ ಆರೋಗ್ಯ ಘಟಕದಿಂದ ನೋಟಿಸ್ ಜಾರಿ ಮಾಡಲಾಗುತ್ತಿದೆ. ವಸತಿಗೆ ಮೀಸಲಾಗಿರುವ ಪ್ರದೇಶದಲ್ಲಿ ವಾಣಿಜ್ಯ ಚಟುವಟಿಕೆ ನಡೆಸುವಂತಿಲ್ಲ. ಹೀಗಾಗಿ ಆ ಚಟುವಟಿಕೆಗಳನ್ನು ಕೂಡಲೇ ಸ್ಥಗಿತಗೊಳಿಸಬೇಕೆಂದು ನೋಟಿಸ್‌ನಲ್ಲಿ ಸೂಚಿಸಲಾಗಿದೆ.

ವಸತಿ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆ ನಡೆಸುತ್ತಿರುವ ಕಟ್ಟಡಗಳ ಒಟ್ಟಾರೆ ಸಂಖ್ಯೆ ಬಿಬಿಎಂಪಿಯಲ್ಲಿ ಲಭ್ಯವಿಲ್ಲ. ಹೀಗಾಗಿ, ಎಂಟೂ ವಲಯದಲ್ಲಿ ವಲಯ ಆರೋಗ್ಯ ವೈದ್ಯಾಧಿಕಾರಿಗಳು ಪರಿಶೀಲನೆ ನಡೆಸಿ ನೋಟಿಸ್ ಜಾರಿ ಮಾಡುತ್ತಿದ್ದಾರೆ. ಜ.10ರವರೆಗೆ ನೋಟಿಸ್ ನೀಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ನಂತರ, ವಾಣಿಜ್ಯ ಚಟುವಟಿಕೆ ಮುಚ್ಚುವ ಕಾರ್ಯಾಚರಣೆ ಆರಂಭಿಸಲಾಗುತ್ತದೆ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ್ ಚಂದ್ರ ತಿಳಿಸಿದರು.



ವಸತಿ ಕಟ್ಟಡದಲ್ಲಿ ವಾಣಿಜ್ಯ ಚಟುವಟಿಕೆ ಸ್ಥಗಿತಗೊಳಿಸಲು ಬಿಬಿಎಂಪಿ ನೀಡಿರುವ ನೋಟಿಸ್

ನಗರ ವ್ಯಾಪ್ತಿಯ ವಸತಿ ಪ್ರದೇಶಗಳಲ್ಲಿ 40 ಅಡಿಗಿಂತ ಕಡಿಮೆ ಅಗಲದ ರಸ್ತೆಗಳಲ್ಲಿರುವ ಕಟ್ಟಡಗಳಲ್ಲಿ ವಾಣಿಜ್ಯ ಚಟುವಟಿಕೆ ನಡೆಯುತ್ತಿವೆ. ಈ ಪ್ರದೇಶದಲ್ಲಿ ಮಂಜೂರು ಪಡೆದಿರುವ ನಕ್ಷೆಯನ್ನು ಉಲ್ಲಂಘಿಸಿ ವಸತಿಯೇತರ ಚಟುವಟಿಕೆಗಳು ನಡೆಯುತ್ತಿರುವುದನ್ನು ಗಮನಿಸಲಾಗಿದೆ. ಹೀಗಾಗಿ, 2016ರಲ್ಲಿ ಈ ರೀತಿಯ ವಸತಿ ಚಟುವಟಿಕೆ ಹಾಗೂ ಉದ್ದಿಮೆ ಮುಚ್ಚಲು ಪ್ರಕಟಣೆಯನ್ನು ಬಿಬಿಎಂಪಿ ಹೊರಡಿಸಿತ್ತು.

ಪರಿಷ್ಕೃತ ಮಾಸ್ಟರ್ ಪ್ಲಾನ್ – 2015 ಮತ್ತು ಅದರಡಿ ರಚಿಸಲಾಗಿರುವ ವಲಯ ನಿಯಂತ್ರಣ ಮಾರ್ಗಸೂಚಿಗಳನ್ನು ವಸತಿಯೇತರ ಚಟುವಟಿಕೆಗಳು ಉಲ್ಲಂಘಿಸಿವೆ ಹೈಕೋರ್ಟ್‌ನಲ್ಲಿ ರಿಟ್ ಸಲ್ಲಿಸಲಾಗಿದ್ದು, ಇದು ಕಾನೂನುಬಾಹಿರ ಚಟುವಟಿಕೆ. ಇದರಿಂದ ನಗರದ ಸುಗಮ ಸಂಚಾರ, ವಸತಿ ಪ್ರದೇಶದಲ್ಲಿ ಜನರಿಗೆ ಅಡಚಣೆ, ಕಿರುಕುಳ ಉಂಟಾಗುತ್ತಿದೆ. ತಕ್ಷಣ ವಾಣಿಜ್ಯ ಚಟುವಟಿಕೆ ಮುಚ್ಚಬೇಕು. ಇಲ್ಲದಿದ್ದರೆ, ಚಟುವಟಿಕೆ ನಡೆಯುತ್ತಿ ರುವ ಕಟ್ಟಡಗಳನ್ನು ಪಾಲಿಕೆ ವತಿ ಯಿಂದ ಮುಚ್ಚಿ, ತಗುಲುವ ವೆಚ್ಚವನ್ನು ಕಟ್ಟಡ ಮಾಲೀಕರಿಂದ ವಸೂಲಿ ಮಾಡಲಾಗುತ್ತದೆ ಎಂದು ಬಿಬಿಎಂಪಿ ನೀಡಿರುವ ನೋಟಿಸ್ ನಲ್ಲಿ ಸೂಚಿಸಲಾಗಿದೆ.

‘ಹೈಕೋರ್ಟ್ ಆದೇಶದಂತೆ ಕ್ರಮ’

‘ಬಿಬಿಎಂಪಿ ವ್ಯಾಪ್ತಿಯ ವಸತಿ ಪ್ರದೇಶದಲ್ಲಿ ವಾಣಿಜ್ಯ ಚಟುವಟಿಕೆ ನಡೆಸುವುದು ಕಾನೂನುಬಾಹಿರ. ಹೈಕೋರ್ಟ್ ಆದೇಶದಂತೆ ಕ್ರಮ ಕೈಗೊಳ್ಳಲು ಆರಂಭಿಸಿದ್ದೇವೆ. ನೋಟಿಸ್ ನೀಡಲಾಗುತ್ತಿದ್ದು, ಇದು ಸ್ಥಗಿತಗೊಳ್ಳದಿದ್ದರೆ ಕಾರ್ಯಾಚರಣೆ ಮಾಡುತ್ತೇವೆ. ವಾಣಿಜ್ಯ ಪ್ರದೇಶಗಳಲ್ಲಿರುವ ಕಟ್ಟಡಗಳಲ್ಲಿ ಪಾರ್ಕಿಂಗ್ ಹಾಗೂ ಇತರೆ ಮೀಸಲು ತೆರೆದ ಪ್ರದೇಶಗಳಲ್ಲೂ ವಾಣಿಜ್ಯ ಚಟುವಟಿಕೆ ನಡೆಸುತ್ತಿರುವವರ ಮೇಲೂ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ್ ಚಂದ್ರ ತಿಳಿಸಿದರು.

‘ಒಂದು ದಿನ ಮಹಾರಾಷ್ಟ್ರ ಬಂದ್ ಮಾಡಿ’

ಬೆಳಗಾವಿ: ‘ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದ ಹಿನ್ನೆಲೆಯಲ್ಲಿ ಸರ್ವಪಕ್ಷಗಳು ಒಂದು ದಿನ ಮಹಾರಾಷ್ಟ್ರ ಬಂದ್ ಮಾಡಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು’ ಎಂದು ಮಹಾರಾಷ್ಟ್ರ ಏಕೀಕರಣ ಸಮಿತಿ(ಎಂಇಎಸ್) ಕಾರ್ಯಾಧ್ಯಕ್ಷ ಮನೋಹರ ಕಿಣೇಕರ್ ಕೋರಿದರು.

ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮರಾಠಿ ಭಾಷಿಗರ ಮೇಲೆ ರಾಜ್ಯ ಸರ್ಕಾರ ದಬ್ಬಾಳಿಕೆ ನಡೆಸುತ್ತಲೇ ಇದೆ. ಮಹಾರಾಷ್ಟ್ರದ ಗಡಿ ಉಸ್ತುವಾರಿ ಸಚಿವರು, ಮಹಾರಾಷ್ಟ್ರ ಗಡಿ ಸಲಹಾ ಸಮಿತಿ ಅಧ್ಯಕ್ಷರಿಗೆ ಬೆಳಗಾವಿಗೆ ಬರಲು ಅನುಮತಿ ನೀಡದೆ ಅನ್ಯಾಯ ಮಾಡುತ್ತಿದೆ’ ಎಂದು ಅವರು ದೂರಿದರು.

‘ಈ ಹಿಂದೆ ಮಹಾಜನ್ ವರದಿಯೇ ಅಂತಿಮ ಎನ್ನುತ್ತಿದ್ದ ರಾಜ್ಯ ಸರ್ಕಾರ, ಈಗ ಕರ್ನಾಟಕದ ಒಂದಿಂಚು ಜಾಗವನ್ನೂ ಮಹಾರಾಷ್ಟ್ರಕ್ಕೆ ನೀಡುವುದಿಲ್ಲ ಎನ್ನುತ್ತಿರುವುದು ಸರಿಯಲ್ಲ’ ಎಂದು ಆರೋಪಿಸಿದರು.



ಶಾಸ್ತ್ರೀಯ ಕಲಾ ಉತ್ಸವ... ಇಂಟರ್ ನ್ಯಾಷನಲ್ ಆರ್ಟ್ಸ್ ಆ್ಯಂಡ್ ಕಲ್ಚರಲ್ ಫೌಂಡೇಷನ್ ದಶಮಾನೋತ್ಸವ, ಭಾರತದ ಅಮೃತ ಮಹೋತ್ಸವ ಮತ್ತು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಅಂಗವಾಗಿ ಭಾನುವಾರ ಸೇವಾ ಸದನದಲ್ಲಿ ನಡೆದ ‘ಮಕ್ಕಳ ಶಾಸ್ತ್ರೀಯ ಕಲಾ ಉತ್ಸವ’ದಲ್ಲಿನ ನೃತ್ಯ

‘ನಷ್ಟಕ್ಕೆ ಇಲಾಖೆಗಳನ್ನೇ ಹೊಣೆ ಮಾಡಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಯಾವ ಇಲಾಖೆಯಿಂದ ಅನವಶ್ಯಕವಾಗಿ ಆರ್ಥಿಕ ನಷ್ಟ ಆಗುತ್ತಿದೆಯೋ ಅಂತಹ ಇಲಾಖೆಗಳಿಗೆ ಕಡಿವಾಣ ಹಾಕಿ, ಅವರನ್ನೇ ಜವಾಬ್ದಾರರನ್ನಾಗಿ ಮಾಡಿ ದಂಡ ವಿಧಿಸಬೇಕು’ ಎಂದು ಕುಮಾರ್ ಬಂಗಾರಪ್ಪ ಅಧ್ಯಕ್ಷತೆಯ ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಸಮಿತಿಯ ನಾಲ್ಕನೇ ವರದಿಯಲ್ಲಿ ಹಲವು ಇಲಾಖೆಗಳಲ್ಲಿ ಅನಗತ್ಯವಾಗಿ ಆರ್ಥಿಕ ನಷ್ಟ ಆಗುತ್ತಿರುವುದನ್ನು ಗುರುತಿಸಿದ್ದು, ತೆರಿಗೆದಾರರ ಹಣ ಪೋಲಾಗುತ್ತಿರುವುದಕ್ಕೆ ಕಡಿವಾಣ ಹಾಕಬೇಕು ಎಂದು ತಾಕೀತು ಮಾಡಿದೆ.

ಹೊಸ ಹೊಸ ಯೋಜನೆಗಳನ್ನು ಪ್ರಕಟಿಸುವುದರ ಬದಲು, ಈಗಾಗಲೇ ಪ್ರಕಟಿಸಿರುವ ಯೋಜನೆಗಳನ್ನೇ ಪೂರ್ಣಗೊಳಿಸುವುದಕ್ಕೆ ಆದ್ಯತೆ ನೀಡಬೇಕು. ಸರ್ಕಾರದ ಬೊಕ್ಕಸದಿಂದ ಖರ್ಚಾಗುವ ಪ್ರತಿ ಒಂದು ರೂಪಾಯಿಯು ಬಡವರು, ಹಿಂದುಳಿದವರು ಮತ್ತು ದೀನ– ದಲಿತರ ಕಲ್ಯಾಣಕ್ಕೆ ಅನುಕೂಲವಾಗುವಂತೆ ದೀರ್ಘಾವಧಿಯ ಯೋಜನೆ ಸಿದ್ಧಪಡಿಸಿ ಜಾರಿಗೊಳಿಸಬೇಕು ಎಂದು ಶಿಫಾರಸು ಮಾಡಿದೆ.

ರಾಜ್ಯದಲ್ಲಿ ಹಿಂದುಳಿದ ವರ್ಗಗಳು ಅಲ್ಪಸಂಖ್ಯಾತ ವರ್ಗಗಳ ಇಲಾಖೆಯ ಅಧೀನಕ್ಕೆ ಸೇರಿದ ಸಾಕಷ್ಟು ಸ್ವತ್ತುಗಳಿವೆ. ಇವುಗಳು ದಾಖಲೆಗಳಲ್ಲಿ ಲೆಕ್ಕ ಇಲ್ಲ. ಅದರಲ್ಲೂ ಬೆಂಗಳೂರಿನಲ್ಲಿ ಅತ್ಯಂತ ಬೆಲೆಬಾಳುವ ಸ್ವತ್ತುಗಳನ್ನು ಹೊಂದಿವೆ. ಅವುಗಳನ್ನು ಸರ್ಕಾರದ ದಾಖಲೆಯ ವ್ಯಾಪ್ತಿಗೆ ಒಳಪಡಿಸಬೇಕು ಮತ್ತು ಇವುಗಳಿಂದ ಸರ್ಕಾರಕ್ಕೆ ಆದಾಯ ಬರುವಂತೆ ವ್ಯವಸ್ಥೆ ಮಾಡಬೇಕಾಗಿದೆ ಎಂದು ತಾಕೀತು ಮಾಡಿದೆ.

‘ಯಾವುದೇ ದಾಖಲೆಗಳಿಲ್ಲದೇ, ಯಾರೋ ಎಲ್ಲೋ ಕುಳಿತುಕೊಂಡು ವ್ಯವಹಾರ ನಡೆಸುತ್ತಿರುವುದು ಅಕ್ಷಮ್ಯ ಅಪರಾಧ. ಇದಕ್ಕೆ ಆರ್ಥಿಕ ಇಲಾಖೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು’ ಎಂದು ಸಮಿತಿ ಸೂಚಿಸಿದೆ.

ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ರಸ್ತೆಯ ಮಧ್ಯದಲ್ಲಿ ನಿಂತುಕೊಂಡು ವಾಹನಗಳನ್ನು ತಡೆದು ಪರಿಶೀಲನೆ ನಡೆಸುತ್ತಾರೆ. ಅದರ ಬದಲು ವಾಹನಗಳು ಟೋಲ್‌ಗೇಟ್ ದಾಟಿದ ನಂತರ ಅಲ್ಲಿಯೇ ಒಂದು ಜಾಗದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿ ವಾಹನ ತಪಾಸಣೆ ಮಾಡುವುದರಿಂದ ಶೇ 50 ರಷ್ಟು ಆದಾಯ ಹೆಚ್ಚುತ್ತದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಎಸ್‌ಸಿಪಿಟಿಎಸ್‌ಪಿ ಯೋಜನೆಯಡಿ ಯಾವ ಉದ್ದೇಶಕ್ಕಾಗಿ ಇಲಾಖೆಗಳಲ್ಲಿ ಗುರುತು ಮಾಡಲಾಗಿದೆಯೋ ಆ ಉದ್ದೇಶಕ್ಕಾಗಿಯೇ ಉಪಯೋಗ ಮಾಡುವಂತೆ ಇಲಾಖಾಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಮತ್ತು ಅದಕ್ಕಾಗಿ ಸೂಕ್ತ ನಿಯಮ ರೂಪಿಸಬೇಕು ಎಂದೂ ಶಿಫಾರಸು ಮಾಡಿದೆ.

ನಿರಂತರ ಜ್ಯೋತಿಯಿಂದ ವಿದ್ಯುತ್ ಪೋಲು

ಇಂಧನ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಂದ ರಾಜ್ಯದ ಬೊಕ್ಕಸಕ್ಕೆ ದೊಡ್ಡ ಪ್ರಮಾಣದಲ್ಲಿ ನಷ್ಟವಾಗುತ್ತಿದೆ ಎಂದು ವರದಿ ತಿಳಿಸಿದೆ.

ನಿರಂತರ ಜ್ಯೋತಿ ಯೋಜನೆಯಡಿ ಕಳೆದ 7–8 ತಿಂಗಳಿಂದ 24 ಗಂಟೆಗಳೂ ಬಲ್ಬುಗಳು ಉರಿಯುತ್ತಿವೆ. ಇದರಿಂದ ಹಗಲಿನಲ್ಲಿ ವಿದ್ಯುತ್ ಪೋಲಾಗುತ್ತಿದೆ. ಇದಕ್ಕೆ ಗ್ರಾಮ ಪಂಚಾಯಿತಿಯವರು ಹಣ ಕಟ್ಟುತ್ತಿದ್ದಾರೆ. ಇಂಧನ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಈ ಬಗ್ಗೆ ಗಮನಹರಿಸಿ ಲೋಪ ಸರಿಪಡಿಸಬೇಕು ಎಂದು ಹೇಳಿದೆ.

ಈಗಾಗಲೇ ಆರಂಭಿಸಿರುವ ಯೋಜನೆಗಳನ್ನು ಪೂರ್ಣಗೊಳಿಸಲು ಹಣ ಮೀಸಲಿಡಬೇಕು. ಯಾವುದೇ ಒಂದು ಯೋಜನೆ ಮಾಡುವಾಗ ಎಷ್ಟು ಅನುಕೂಲವಾಗುತ್ತದೆ. ಎಷ್ಟು ಸ್ವತ್ತು ಸೃಷ್ಟಿಯಾಗುತ್ತದೆ ಮತ್ತು ಅದರಿಂದ ಎಷ್ಟು ಉದ್ಯೋಗ ಸೃಷ್ಟಿ ಆಗುತ್ತದೆ ಎಂಬುದನ್ನು ಗಮನದಲ್ಲಿ ಹಾಗೂ ದೂರದೃಷ್ಟಿ ಇಟ್ಟುಕೊಂಡು ಯೋಜನೆ ಸಾಕಾರಗೊಳಿಸಬೇಕು ಎಂದೂ ಸೂಚಿಸಿದೆ.



ಎಂ.ಎಸ್. ರಾಮಯ್ಯ ಚಾರಿಟೀಸ್ ಭಾನುವಾರ ಆಯೋಜಿಸಿದ್ದ ಧನಸಹಾಯ ವಿತರಣಾ ಕಾರ್ಯಕ್ರಮದಲ್ಲಿ (ಎಡದಿಂದ ಬಲಕ್ಕೆ) ಟ್ರಸ್ಟ್‌ನ ಉಪಾಧ್ಯಕ್ಷ ಎಂ.ಆರ್. ಸೀತಾರಾಮ್, ಮುಖ್ಯ ಆರಣ್ಯಾಧಿಕಾರಿ ಮನೋಜ್ ಕುಮಾರ್, ಟ್ರಸ್ಟ್ ಅಧ್ಯಕ್ಷ ಎಂ.ಆರ್. ಜಯರಾಮ್, ಉಪಾಧ್ಯಕ್ಷ ಎಂ.ಆರ್. ಸಂಪಗೀರಾಮಯ್ಯ ಇದ್ದಾರೆ.

900 ವಿದ್ಯಾರ್ಥಿಗಳಿಗೆ ಧನಸಹಾಯ

ಬೆಂಗಳೂರು: ‘ವಿದ್ಯಾರ್ಥಿ ಜೀವನದಲ್ಲಿ ಸಿಗುವ ಪ್ರತಿಯೊಂದು ಅವಕಾಶಗಳನ್ನು ಬಳಸಿಕೊಂಡು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು’ ಎಂದು ಮುಖ್ಯ ಅರಣ್ಯಾಧಿಕಾರಿ ಮನೋಜ್ ಕುಮಾರ್ ಸಲಹೆ ನೀಡಿದರು.

ಎಂ.ಎಸ್. ರಾಮಯ್ಯ ಚಾರಿಟೀಸ್ ಟ್ರಸ್ಟ್ ಭಾನುವಾರ ಆಯೋಜಿಸಿದ್ದ 900 ವಿದ್ಯಾರ್ಥಿಗಳಿಗೆ ಧನಸಹಾಯ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು. ‘ವಿದ್ಯಾರ್ಥಿಗಳು ಜೀವನದ ಪ್ರತಿಯೊಂದು ಹಂತದಲ್ಲಿ ಸಿಗುವ ಅವಕಾಶ, ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಗುರಿ ಸಾಧಿಸುವ ಹಾದಿಯಲ್ಲಿ ಮುನ್ನಡೆಯಬೇಕು ’ ಎಂದರು.

ಟ್ರಸ್ಟ್‌ನ ಉಪಾಧ್ಯಕ್ಷರಾದ ಎಂ.ಆರ್. ಸೀತಾರಾಮ್ ಮಾತನಾಡಿ, ‘ವಿದ್ಯಾರ್ಥಿಗಳಿಗೆ ಸಿಗುವ ಅವಕಾಶಗಳನ್ನು ಉಪಯೋಗಿಸಿಕೊಂಡು ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ಕೈ ಜೋಡಿಸಬೇಕು’ ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಎಂ.ಆರ್. ಜಯರಾಮ್ ಮಾತನಾಡಿದರು.

ಸಿದ್ದರಾಮಯ್ಯ ಸ್ಪರ್ಧೆ: ನಿರ್ಧಾರಕ್ಕೆ ಜ.9ರ ಸಭೆ

ಕೋಲಾರ: ಕೋಲಾರ ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸುವ ನಿರ್ಧಾರಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಜನವರಿ 9ರಂದು ನಗರಕ್ಕೆ ಭೇಟಿ ನೀಡಲಿದ್ದಾರೆ.

ಅಂದು ಕಾರ್ಯಕರ್ತರು, ಮುಖಂಡರ ಸಭೆಯಲ್ಲಿ ಘೋಷಣೆ ಹೊರ ಬೀಳುವ ಸಾಧ್ಯತೆ ಇದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಜನಸೇವಾ ವಿಶ್ವಸ್ಥ ಮಂಡಳಿಯ ಸ್ವರ್ಣ ಜಯಂತಿ

‘ಶಿಕ್ಷಣ ರಾಷ್ಟ್ರೀಯತೆ ಬಿಂಬಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ದೃಷ್ಟಿಕೋನದ ಶಿಕ್ಷಣದಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಶಿಕ್ಷಣ ರಾಷ್ಟ್ರೀಯತೆಯನ್ನು ಪ್ರತಿಬಿಂಬಿಸಬೇಕು’ ಎಂದು ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಚನ್ನೇನಹಳ್ಳಿಯ ಜನಸೇವಾ ವಿಶ್ವಸ್ಥ ಮಂಡಳಿ ಭಾನುವಾರ ಆಯೋಜಿಸಿದ್ದ ಸ್ವರ್ಣ ಜಯಂತಿ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

‘ನಾವೀಗ ಅಮೃತ ಮಹೋತ್ಸವವನ್ನು ಆಚರಣೆ ಮಾಡುತ್ತಿದ್ದು, ಮುಂದಿನ 25 ವರ್ಷಗಳು ದೇಶದ ಬೆಳವಣಿಗೆಯ ಪರ್ವ ಕಾಲವಾಗಿದೆ. 100ನೇ ಸ್ವಾತಂತ್ರ್ಯೋತ್ಸವದ ವೇಳೆಗೆ ದೇಶದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಶಿಕ್ಷಣ ಅತ್ಯಂತ ಮಹತ್ವದ ಮತ್ತು ನಿರ್ಣಾಯಕ ಪಾತ್ರ ವಹಿಸುತ್ತದೆ’ ಎಂದರು.

ಶಿರಸಿಯ ಶ್ರೀಸೋಂದಾ ಸ್ವರ್ಣವಲ್ಲೀ ಮಠದ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ‘ವಿದ್ಯಾಶ್ರೀ’ ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡಿದರು. ‘ಭಾರತೀಯ ಆಹಾರ ಪದ್ಧತಿಯಿಂದ ಕೋವಿಡ್ ಸಾಂಕ್ರಾಮಿಕ ರೋಗವನ್ನು ಎದುರಿಸಲು ಸಾಧ್ಯವಾಯಿತು. ಚೀನಾದಲ್ಲಿ ಆಹಾರ ಪದ್ಧತಿ ಹದಗೆಟ್ಟಿದ್ದು, ಹತ್ತಿರದ ಸಂಬಂಧಿಗಳ ನಡುವೆ ವಿವಾಹವಾಗುತ್ತಿರುವುದರಿಂದ ಸಾಂಕ್ರಾಮಿಕ ಸಮಸ್ಯೆ ತೀವ್ರಗೊಂಡಿದೆ. ಆಹಾರ ಮತ್ತು ವೈವಾಹಿಕ ವಿಚಾರದಲ್ಲಿ ಭಾರತೀಯ ಮಹರ್ಷಿಗಳು ನೀಡಿರುವ ಕೊಡುಗೆಗಳು ಇಂದಿಗೂ ಪ್ರಸ್ತುತವಾಗಿವೆ’ ಎಂದು ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹ ಮುಕುಂದ ಸಿ.ಆರ್. ಇದ್ದರು.



ಚನ್ನೇನಹಳ್ಳಿಯ ಜನಸೇವಾ ವಿಶ್ವಸ್ಥ ಮಂಡಳಿಯಲ್ಲಿ ಭಾನುವಾರ ನಡೆದ ‘ಸ್ವರ್ಣ ಜಯಂತಿಯ ಸಮಾರೋಪ’ ಕಾರ್ಯಕ್ರಮದಲ್ಲಿ (ಎಡದಿಂದ) ಕೋಟೆಮನೆ ರಾಮಚಂದ್ರ ಭಟ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಿರಸಿಯ ಶ್ರೀಸೋಂದಾ ಸ್ವರ್ಣವಲ್ಲೀ ಮಠದ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಪಾಲ್ಗೊಂಡಿದ್ದರು.

ಕೈವಾರದಿಂದ ಪಾದಯಾತ್ರೆ: ಬಲಿಜ ವೇದಿಕೆ ಎಚ್ಚರಿಕೆ

ಬೆಂಗಳೂರು: ಬಲಿಜ ಸಮುದಾಯಕ್ಕೆ ಪ್ರವರ್ಗ 2ಎ ಮೀಸಲಾತಿ ಕಲ್ಪಿಸುವ ನಿರ್ಧಾರವನ್ನು ಬೆಳಗಾವಿ ಅಧಿವೇಶನದಲ್ಲಿ ಕೈಗೊಳ್ಳದಿದ್ದರೆ ಚಿಕ್ಕಬಳ್ಳಾಪುರ ಜಿಲ್ಲೆ ಕೈವಾರದಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸಲಾಗುವುದು ಎಂದು ರಾಜ್ಯ ಸಮಗ್ರ ಬಲಿಜ ವೇದಿಕೆ ರಾಜ್ಯ ಕಾರ್ಯದರ್ಶಿ ಎಸ್. ರಮೇಶ್ ತಿಳಿಸಿದ್ದಾರೆ.

ಬಲಿಜ ಸಮುದಾಯವು ಶಿಕ್ಷಣದ ವಿಷಯದಲ್ಲಿ 2ಎ ಮೀಸಲಾತಿ ಪಡೆಯುತ್ತಿದ್ದರೆ, ರಾಜಕೀಯವಾಗಿ 3ಎ ಮೀಸಲಾತಿ ಪಡೆಯುತ್ತಿದೆ. ಒಂದು ಸಮುದಾಯವನ್ನು ಈ ರೀತಿಯ ಅತಂತ್ರ ಸ್ಥಿತಿಗೆ ತಳ್ಳಿರುವುದು ಕರ್ನಾಟಕದಲ್ಲಿ ಮಾತ್ರ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

‘28 ವರ್ಷಗಳಿಂದ ಸಮುದಾಯಕ್ಕೆ ದ್ರೋಹ ಎಸಗಲಾಗಿದೆ. ನ್ಯಾಯಮೂರ್ತಿ ಭಕ್ತವತ್ಸಲಂ ವರದಿ ಪ್ರಕಾರ ಸುಮಾರು 820 ಹಿಂದುಳಿದ ಜಾತಿಗಳಿದ್ದು, ಅವುಗಳ ಪೈಕಿ 156 ಜಾತಿಗೆ ಮಾತ್ರ ಮೀಸಲಾತಿ ದೊರಕಿದೆ. ಅಧಿವೇಶನದಲ್ಲಿ 2ಎ ಮೀಸಲಾತಿ ಸಿಗದಿದ್ದರೆ ಕೈವಾರದಿಂದ ಪಾದಯಾತ್ರೆ ಕೈಗೊಂಡು ವಿಧಾನಸೌಧ ಚಲೊ ನಡೆಸಲಾಗುವುದು’ ಎಂದು ಪತ್ರಿಕಾ ಹೇಳಿಕೆಯಲ್ಲಿ ಎಚ್ಚರಿಸಿದ್ದಾರೆ.

‘ಬೆಂಗಳೂರು–ಮೈಸೂರು ಹೆದ್ದಾರಿಗೆ ಒಡೆಯರ್ ಹೆಸರಿಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು- ಮೈಸೂರು ರಾಷ್ಟ್ರೀಯ ಹೆದ್ದಾರಿ-275ಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರನ್ನು ನಾಮಕರಣ ಮಾಡಬೇಕು’ ಎಂದು ಆಗ್ರಹಿಸಿ ಮುಖ್ಯಮಂತ್ರಿಗೆ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯರಾದ ದಿನೇಶ್ ಗೂಳಿಗೌಡ ಮತ್ತು ಮಧು ಜಿ. ಮಾದೇಗೌಡ ಮನವಿ ಸಲ್ಲಿಸಿದ್ದಾರೆ.

ಈ ಬಗ್ಗೆ ಸಚಿವರಾದ ಸಿ.ಸಿ. ಪಾಟೀಲ, ಕೆ. ಗೋಪಾಲಯ್ಯ, ಕೆ.ಸಿ. ನಾರಾಯಣಗೌಡ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿರುವ ಅವರು, ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿಗೂ ಪತ್ರ ಬರೆದಿದ್ದಾರೆ.

ಒಡೆಯರ್ ಹೆಸರು ನಾಮಕರಣ ಮಾಡುವ ಬಗ್ಗೆ ಕೇಂದ್ರ ಸಚಿವರಿಗೆ ಶಿಫಾರಸು ಮಾಡುವಂತೆ ಮುಖ್ಯಮಂತ್ರಿಗೆ ಮನವಿ ಮಾಡುವುದಾಗಿ ಕೆ. ಗೋಪಾಲಯ್ಯ ಮತ್ತು ಕೆ.ಸಿ. ನಾರಾಯಣ ಗೌಡ ಭರವಸೆ ನೀಡಿದ್ದಾರೆ.

ಮನವಿಯಲ್ಲಿ ಏನಿದೆ?: ಕೃಷ್ಣರಾಜ ಸಾಗರ ಅಣೆಕಟ್ಟು (ಕೆಆರ್‌ಎಸ್), ಬೆಂಗಳೂರಿಗೆ ಕುಡಿಯುವ ನೀರು, ಶಿವನ ಸಮುದ್ರ ಜಲ ವಿದ್ಯುತ್ ಯೋಜನೆ, ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆ, ದೇಶದಲ್ಲಿ ಮೊದಲ ಬಾರಿಗೆ ರಸ್ತೆಬದಿಗೆ ದಾರಿದೀಪ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ, ಬಾಲ್ಯ ವಿವಾಹ ನಿಷೇಧ, ಕೆ.ಆರ್. ಆಸ್ಪತ್ರೆ, ಶ್ರೀಗಂಧದ ಎಣ್ಣೆ ಕಾರ್ಖಾನೆ ಸೇರಿದಂತೆ ನೂರಾರು ಸಮಾಜಮುಖಿ ಕಾರ್ಯಗಳನ್ನು ನಾಲ್ವಡಿ ಒಡೆಯರ್ ಮಾಡಿದ್ದಾರೆ’ ಎಂದು ಮನವಿಯಲ್ಲಿ ಕೋರಿದ್ದಾರೆ.

ಅರೆ ಸೇನಾಪಡೆ ನಿವೃತ್ತ ಸಿಬ್ಬಂದಿಗೆ ಸೌಲಭ್ಯ: ಆರಗ

ಬೆಳಗಾವಿ: ಕೇಂದ್ರೀಯ ಅರೆಸೇನಾ ಪಡೆಗಳಾದ ಗಡಿ ಭದ್ರತಾ ಪಡೆ, ಔದ್ಯೋಗಿಕ ಸುರಕ್ಷಾ ಪಡೆ, ಇಂಡೋ–ಟಿಬೆಟಿಯನ್ ಗಡಿ ಭದ್ರತಾ ಪಡೆ, ಸಶಸ್ತ್ರ ಸೀಮಾ ಪಡೆ, ಅಸ್ಸಾಂ ರೈಫಲ್ಸ್‌ನಲ್ಲಿ ಸೇವೆ ಸಲ್ಲಿಸಿದ ರಾಜ್ಯದ ಮಾಜಿ ಯೋಧರು ಮತ್ತು ಹುತಾತ್ಮ ಕುಟುಂಬಗಳ ಕ್ಷೇಮಾಭಿವೃದ್ಧಿಗಾಗಿ ಕೇಂದ್ರ ಸಶಸ್ತ್ರ ಪಡೆ ಸಿಬ್ಬಂದಿಗೆ ನೀಡುತ್ತಿರುವ ಮಾದರಿಯಲ್ಲೇ ಸೌಲಭ್ಯಗಳನ್ನು ವಿತರಿಸಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ರಾಜ್ಯದಲ್ಲಿ ಮಾಜಿ ಕೇಂದ್ರ ಸಶಸ್ತ್ರ ಪಡೆ ಸಿಬ್ಬಂದಿ ಎಂದು ಪದನಾಮೀಕರಿಸಿ ಇವರಿಗೆ ಕೇಂದ್ರ ಸರ್ಕಾರದ ಮಾದರಿಯಲ್ಲಿ ಹಾಗೂ ಸಮಾಲೋಚನೆಗೊಳಪಟ್ಟು ಕೇಂದ್ರದ ಸಶಸ್ತ್ರ ಪಡೆ ಸಿಬ್ಬಂದಿಗೆ ನೀಡುತ್ತಿರುವ ಅರ್ಹ ಸೌಲಭ್ಯಗಳನ್ನು ನವೆಂಬರ್ 4ರಂದು ಆದೇಶ ಹೊರಡಿಸಲಾಗಿದೆ ಎಂದು ಹೇಳಿದ್ದಾರೆ.

ಕಾಲೇಜಿನ ಕಟ್ಟಡ ಕುಸಿದು ಒಂಬತ್ತು ಕಾರ್ಮಿಕರಿಗೆ ಗಾಯ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಆರೂರು ಬಳಿ ನಿರ್ಮಾಣ ಹಂತದಲ್ಲಿರುವ ಸರ್ಕಾರಿ ವೈದ್ಯಕೀಯ ಶಿಕ್ಷಣ ಕಾಲೇಜಿನ ಐದನೇ ಹಂತದ ಕಟ್ಟಡ ಕುಸಿದು 9 ಮಂದಿ ಕಾರ್ಮಿಕರು ಗಾಯಗೊಂಡಿದ್ದಾರೆ. ಶನಿವಾರ ರಾತ್ರಿ ಕಾರ್ಮಿಕರು ಕೆಲಸ ಮಾಡುವಾಗ ಈ ಅವಘಡ ಸಂಭವಿಸಿದೆ.

ಫೆಬ್ರುವರಿಗೆ ಕಟ್ಟಡ ಉದ್ಘಾಟಿಸಬೇಕೆಂಬ ಗುರಿ ಇದೆ. ಈ ಹಿನ್ನೆಲೆಯಲ್ಲಿ ರಾತ್ರಿಯೆಲ್ಲ ಕಾಮಗಾರಿ ನಡೆಯುತ್ತಿದೆ. ಐದನೇ ಹಂತದ ಕಟ್ಟಡದಲ್ಲಿ ಸ್ಟೀಲ್ ಫ್ರೇಂಗಳನ್ನು ಅಳವಡಿಸಿ ಸಿಮೆಂಟ್ ಹಾಕುವ ವೇಳೆ ಅವಘಡ ಸಂಭವಿಸಿದೆ ಎನ್ನಲಾಗುತ್ತಿದೆ. ಸ್ಟೀಲ್ ಕಂಬಿಗಳು ನೆಲಕ್ಕೆ ಬಿದ್ದಿವೆ.

ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ್ ಮತ್ತು ಎಸ್ಪಿ ಡಿ.ಎಲ್.ನಾಗೇಶ್ . ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು.





ಪ್ರವಾಸಿಗರ ಸೆಳೆಯಲು ಸಂಸ್ಕೃತಿ ಇಲಾಖೆ ಯೋಜನೆ • ನಡೆಯಲಿದೆ ನಿರಂತರ ಸಾಂಸ್ಕೃತಿಕ ಚಟುವಟಿಕೆ

‘ಚೋಖಿ ಧನಿ’ ರೀತಿ ಕಲಾಗ್ರಾಮ ಅಭಿವೃದ್ಧಿ

• ವರುಣ ಹೆಗಡೆ



ಕಲಾಗ್ರಾಮದಲ್ಲಿರುವ ಸಾಂಸ್ಕೃತಿಕ ಸಮುಚ್ಚಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜಸ್ಥಾನದ ‘ಚೋಖಿ ಧನಿ’ ಮಾದರಿಯಲ್ಲಿ, ಖಾಸಗಿ ಸಂಸ್ಥೆಯ ಸಹಭಾಗಿತ್ವದಲ್ಲಿ ಇಲ್ಲಿನ ಮಲ್ಲತ್ತಹಳ್ಳಿಯ ಕಲಾಗ್ರಾಮವನ್ನು ಅಭಿವೃದ್ಧಿಪಡಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂದಾಗಿದೆ.

ಮೂಲಸೌಕರ್ಯಗಳ ಕೊರತೆಯಿರುವ ಕಲಾಗ್ರಾಮಕ್ಕೆ ಕಾಯಕಲ್ಪ ನೀಡಬೇಕೆಂಬ ಆಗ್ರಹ ಕಲಾವಿದರ ವಲಯದಲ್ಲಿತ್ತು. ಹೀಗಾಗಿ, ಅಲ್ಲಿ ನಿರಂತರ ಸಾಂಸ್ಕೃತಿಕ ಚಟುವಟಿಕೆ ನಡೆಸಲು ಹಾಗೂ ಪ್ರವಾಸಿಗರನ್ನು ಸೆಳೆಯಲು ಇಲಾಖೆ ಮುಂದಾಗಿದೆ.

ಈ ಸಂಬಂಧ ಯೋಜನೆಯನ್ನು ರೂಪಿಸಿ, ಅನುಮೋದನೆಗೆ ಮೂಲಸೌಲಭ್ಯ ಇಲಾಖೆಗೆ (ಐಡಿಡಿ) ಕಳುಹಿಸಲಾಗಿದೆ. ವಿವಿಧ ಸಾಂಸ್ಕೃತಿಕ ಚಟುವಟಿಗಳ ಜತೆಗೆ ವಸತಿ, ಆಹಾರ, ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ, ಥೀಮ್ ಪಾರ್ಕ್ ಸೇರಿ ಹಲವು ವೈವಿಧ್ಯ-ಗಳನ್ನು ಒಂದೇ ಸೂರಿನಡಿ ತರಲಾಗುತ್ತದೆ.

ರಾಜಸ್ಥಾನದಲ್ಲಿ ಚೋಖಿ ಧನಿ ಗ್ರಾಮವನ್ನು ಅಭಿವೃದ್ಧಿಪಡಿಸಿರುವಂತೆಯೇ ಕಲಾಗ್ರಾಮವನ್ನೂ ಅಭಿವೃದ್ಧಿಪಡಿಸಲು ಇಲಾಖೆಯು ಚೋಖಿ ಧನಿ ಗ್ರೂಪ್ ಅನ್ನು ಸಂಪರ್ಕಿಸಿತ್ತು. ಆದರೆ, ಸಂಸ್ಥೆಯವರು ಒಪ್ಪದ ಕಾರಣ ಸ್ಥಳೀಯ ಖಾಸಗಿ ಸಂಸ್ಥೆಯ ಸಹಯೋಗದಲ್ಲಿಯೇ ಅಭಿವೃದ್ಧಿಪಡಿಸಲು ಮುಂದಾಗಿದೆ.

30 ಎಕರೆಯಲ್ಲಿ ವ್ಯಾಪಿಸಿರುವ ಕಲಾಗ್ರಾಮವನ್ನು ಸಂಸ್ಕೃತಿ ಇಲಾಖೆ ನಿರ್ವಹಣೆ ಮಾಡುತ್ತಿದೆ. ಮೂಲಸೌಕರ್ಯ ಇಲ್ಲದ ಕಾರಣ ಕಲಾಗ್ರಾಮದಲ್ಲಿ ಪ್ರತಿವರ್ಷ ಬೆರಳಣಿಕೆಯ ಕಾರ್ಯಕ್ರಮಗಳಷ್ಟೇ ನಡೆಯುತ್ತಿವೆ. ಕಲಾವಿದರಿಗೆ ವಸತಿ ಸೌಲಭ್ಯವಿರದ ಕಾರಣ ಕಲಾ ಶಿಬಿರ, ತರಬೇತಿ ಹಾಗೂ ಪ್ರದರ್ಶನಗಳಿಗೂ ಸಮಸ್ಯೆಯಾಗಿತ್ತು. 2018ರ ಡಿಸೆಂಬರ್ ತಿಂಗಳಲ್ಲಿ ಶಾರ್ಟ್ ಸರ್ಕಿಟ್‌ನಿಂದ ಅಗ್ನಿ ಅವಘಡ ಸಂಭವಿಸಿದ್ದ ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯವು, ಮೂರೂವರೆ ವರ್ಷಗಳ ಬಳಿಕ ಪ್ರದರ್ಶನಗಳಿಗೆ ವೇದಿಕೆ ಒದಗಿಸಿದೆ. ಕಳೆದ ಏಪ್ರಿಲ್ ತಿಂಗಳಿಂದ ಅಲ್ಲಿ ಪ್ರದರ್ಶನಗಳಿಗೆ ಅವಕಾಶ ಮಾಡಿಕೊಡಲಾಗಿದೆ.

ವಿವಿಧ ಕಚೇರಿ: ಕಲಾಗ್ರಾಮದಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ರಾಷ್ಟ್ರೀಯ ನಾಟಕ ಶಾಲೆಯ ಬೆಂಗಳೂರು ವಿಭಾಗ, ಶಿಲ್ಪಕಲಾ ಅಕಾಡೆಮಿಯ ಗ್ಯಾಲರಿ, ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ನಾಲ್ಕು ಬಯಲು ರಂಗಮಂದಿರಗಳು ಹಾಗೂ ಸುವರ್ಣ ಸಾಂಸ್ಕೃತಿಕ ಸಮುಚ್ಚಯ ಇವೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಆಡಳಿತ ಕಚೇರಿ ತಲೆಯೆತ್ತುತ್ತಿದೆ.

‘ಕಲಾಗ್ರಾಮದಲ್ಲಿ ನಾಟಕ, ಯಕ್ಷಗಾನ, ಜಾನಪದ ನೃತ್ಯ, ಸಂಗೀತ ಸೇರಿ ರಾಜ್ಯದ ಎಲ್ಲ ಸಾಂಸ್ಕೃತಿಕ ಕಾರ್ಯ-ಕ್ರಮಗಳಿಗೆ ಆದ್ಯತೆ ನೀಡಲಾಗುತ್ತದೆ. ರಾಜ್ಯದ ವಿವಿಧ ಭಾಗಗಳ ಆಹಾರವೂ ಒಂದೆಡೆ ಸಿಗುವಂತೆ ಮಾಡಲಾಗುವುದು’ ಎಂದು ಇಲಾಖೆಯ ನಿರ್ದೇಶಕ ಪ್ರಕಾಶ್ ಜಿ. ನಿಟ್ಟಾಲಿ ತಿಳಿಸಿದರು.

ಮನರಂಜನೆ ಜತೆಗೆ ಆತಿಥ್ಯ

ರಾಜಸ್ಥಾನದಲ್ಲಿ ಅಭಿವೃದ್ಧಿಪಡಿಸಲಾದ ಚೋಖಿ ಧನಿ ಗ್ರಾಮದಲ್ಲಿ ಸ್ಥಳೀಯ ಪರಂಪರೆ ಮತ್ತು ಸಂಸ್ಕೃತಿಗೆ ಉತ್ತೇಜನ ನೀಡಲಾಗುತ್ತಿದೆ. ಪ್ರವಾಸಿ ತಾಣವಾಗಿಯೂ ಪ್ರಸಿದ್ಧಿ ಪಡೆದಿದೆ. ಇಲ್ಲಿ ರಾಜಸ್ಥಾನ ಕಲಾ ಪ್ರಕಾರಗಳ ಜತೆಗೆ ಸ್ಥಳೀಯ ಆಹಾರ ಸವಿಯುವ ಅವಕಾಶವು ಇದೆ. ವಿವಿಧ ದರ್ಜೆಯ ಹೋಟೆಲ್‌ಗಳು ಇವೆ. ಸ್ಥಳೀಯ ಕಲಾವಿದರಿಗೆ ಪ್ರದರ್ಶನಗಳನ್ನು ನಡೆಸಲು ಅವಕಾಶ ಒದಗಿಸಲಾಗಿದೆ. ವಿವಿಧ ಕಲಾ ಉತ್ಸವಗಳನ್ನೂ ನಡೆಸಲಾಗುತ್ತಿದೆ.



ಕಲಾಗ್ರಾಮವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಲಾಗುತ್ತದೆ. ಪ್ರವಾಸಿಗರನ್ನೂ ಸೆಳೆಯಲು ಕಾರ್ಯಯೋಜನೆ ರೂಪಿಸಲಾಗಿದೆ.

ಪ್ರಕಾಶ್ ಜಿ. ನಿಟ್ಟಾಲಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ

ಸುದ್ದಿ 2 ನಿಮಿಷ

ಪೊಲೀಸರಿಗೆ ಪ್ರವಾಸ, ಸಿನಿಮಾ ಟಿಕೆಟ್ ಉಡುಗೊರೆ

ಬೆಂಗಳೂರು: ಪೊಲೀಸರ ಕಾರ್ಯವೈಖರಿ ಬಗ್ಗೆ ಜನರಿಂದ ಅಭಿಪ್ರಾಯ ಸಂಗ್ರಹಿಸಲು ರೂಪಿಸಿರುವ ‘ದರ್ಪಣ’ ಕ್ಯೂಆರ್ ಕೋಡ್ ವ್ಯವಸ್ಥೆ ಯಶಸ್ವಿಯಾದ ಬೆನ್ನಲ್ಲೇ, ಉತ್ತಮ ಕೆಲಸ ಮಾಡಿದವರಿಗೆ ಪ್ರವಾಸ ಹಾಗೂ ಸಿನಿಮಾ ಟಿಕೆಟ್ ಉಡುಗೊರೆಯಾಗಿ ನೀಡಲಾಗುತ್ತಿದೆ.

ಆಗ್ನೇಯ ವಿಭಾಗದ ಎಲ್ಲ ಠಾಣೆಗಳಲ್ಲಿ ಈ ವ್ಯವಸ್ಥೆ ಜಾರಿಗೆ ತರಲಾಗಿದೆ. ಠಾಣೆಗೆ ಭೇಟಿ ನೀಡುವ ಜನ, ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಆ್ಯಪ್ ಮೂಲಕ ತಮ್ಮ ಅಭಿಪ್ರಾಯ ದಾಖಲಿಸು-ತ್ತಿದ್ದಾರೆ.

ಇದುವರೆಗೂ 3,484 ಮಂದಿ ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡಿದ್ದು, ಅದರಲ್ಲಿ 2,771 ಮಂದಿ ಅಭಿಪ್ರಾಯ ದಾಖಲಿಸಿದ್ದಾರೆ. ಬಹುತೇಕರು ಪೊಲೀಸರ ವಿರುದ್ಧ ದೂರು ಹೇಳಿದ್ದಾರೆ. ಕೆಲವರು ಮಾತ್ರ ಪೊಲೀಸರ ಕೆಲಸವನ್ನು ಶ್ಲಾಘಿಸಿ ಉತ್ತಮ ಅಂಕಗಳನ್ನು (ಸ್ಟಾರ್) ನೀಡಿದ್ದಾರೆ.

‘ಉತ್ತಮ ಕೆಲಸ ಮಾಡಿ ಜನರಿಂದ ಹೆಚ್ಚು ಅಂಕ ಪಡೆದ ಮೂವರು ಪೊಲೀಸರನ್ನು ಕುಟುಂಬ ಸಮೇತ ಕೇರಳ ಪ್ರವಾಸಕ್ಕೆ ಕಳುಹಿಸಲಾಗಿದೆ. ಐವರು ಪೊಲೀಸರಿಗೆ ಸಿನಿಮಾ ನೋಡಲು ಅವಕಾಶ ಕಲ್ಪಿಸಿ ಟಿಕೆಟ್‌ಗಳನ್ನು ಉಚಿತವಾಗಿ ವಿತರಿಸಲಾಗಿದೆ’ ಎಂದು ಡಿಸಿಪಿ ಸಿ.ಕೆ.ಬಾಬಾ ತಿಳಿಸಿದರು.

‘ಧರ್ಮಸಿಂಗ್ ಸಜ್ಜನ, ಕರುಣಾಮಯಿ’



ಕಲಬುರಗಿ: ‘ದಿವಂಗತ ಎನ್. ಧರ್ಮಸಿಂಗ್ ಅವರು ಅತ್ಯಂತ ಸಜ್ಜನ, ವಿನಯವಂತ, ಕರುಣಾಮಯಿ ವ್ಯಕ್ತಿಯಾಗಿದ್ದರು. ಅಧಿಕಾರ ಇರಲಿ ಅಥವಾ ಇಲ್ಲದಿರಲಿ ಜನರೊಂದಿಗೆ ಸದಾ ಒಡನಾಟ ಹೊಂದಿದ್ದರು. ಕಲ್ಯಾಣ ಕರ್ನಾಟಕವು ಕೊಂಚ ಅಭಿವೃದ್ಧಿಯಾಗಿದ್ದರೆ ಅದಕ್ಕೆ ಧರ್ಮಸಿಂಗ್ ಅವರು ಪ್ರಮುಖ ಕಾರಣ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶ್ಲಾಘಿಸಿದರು.

ಎನ್. ಧರ್ಮಸಿಂಗ್ ಪ್ರತಿಷ್ಠಾನದ ವತಿಯಿಂದ ಜೇವರ್ಗಿ ಹೊರವಲಯದ ಕಟ್ಟಿಸಂಗಾವಿ ಬಳಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ನೂತನ ಎನ್. ಧರ್ಮಸಿಂಗ್ ಕಲ್ಯಾಣ ಮಂಟಪದ ಕಟ್ಟಡವನ್ನು ಉದ್ಘಾಟಿಸಿ ಮತ್ತು 108 ಜೋಡಿ ನೂತನ ವಧು–ವರರಿಗೆ ಶುಭ ಹಾರೈಸಿ ಅವರು ಮಾತನಾಡಿದರು.

‘2014ರ ಲೋಕಸಭೆ ಚುನಾವಣೆಯಲ್ಲಿ ಬೀದರ್ ಕ್ಷೇತ್ರದಿಂದ ಪರಾಭವಗೊಂಡ ಧರ್ಮಸಿಂಗ್ ವಿಶ್ರಾಂತಿ ಮಾಡದೇ ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮುತುವರ್ಜಿ ವಹಿಸಿದರು’ ಎಂದರು.

ಎದೆ ಹಾಲು ಸಮಸ್ಯೆ: ಮಹಿಳೆ ಆತ್ಮಹತ್ಯೆ

ಬೆಂಗಳೂರು: ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ 19ನೇ ಮಹಡಿಯಿಂದ ಜಿಗಿದು ಚರಿಸ್ಮಾ ಸಿಂಗ್ (40) ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ತಲಘಟ್ಟಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಪೂರ್ವಾ ಹೈಲ್ಯಾಂಡ್ ಅಪಾರ್ಟ್‌ಮೆಂಟ್‌ನಲ್ಲಿ ನೆಲೆಸಿದ್ದ ಚರಿಸ್ಮಾ, ಭಾನುವಾರ ಮಧ್ಯಾಹ್ನ ಆತ್ಮಹತ್ಯೆಗೆ ಶರಣಾಗಿದ್ದಾರೆ. ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಕಿಮ್ಸ್ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೆಲ ವರ್ಷಗಳ ಹಿಂದೆಯಷ್ಟೇ ಮದುವೆಯಾಗಿದ್ದ ಚರಿಸ್ಮಾ, ಪತಿ ಜೊತೆ ಕೆನಡಾದಲ್ಲಿ ವಾಸವಿದ್ದರು. ಏಳು ತಿಂಗಳ ಹಿಂದೆಯಷ್ಟೇ ಅವರಿಗೆ ಮಗುವಾಗಿತ್ತು. ಆರೋಗ್ಯ ಸಮಸ್ಯೆಯಿಂದ ಮಗುವಿಗೆ ಎದೆ ಹಾಲು ಕುಡಿಸಲು ಸಾಧ್ಯವಾಗಿರಲಿಲ್ಲ. ಚಿಕಿತ್ಸೆ ಪಡೆಯಲೆಂದು ಇತ್ತೀಚೆಗಷ್ಟೇ ನಗರದಲ್ಲಿರುವ ತವರು ಮನೆಗೆ ಬಂದಿದ್ದರು.’

‘ಚಿಕಿತ್ಸೆ ಬಳಿಕವೂ ಎದೆ ಹಾಲು ಸಮಸ್ಯೆ ನಿವಾರಣೆ ಆಗಿರಲಿಲ್ಲ. ಮಗು ನಿತ್ಯವೂ ಹೆಚ್ಚು ಅಳುತ್ತಿತ್ತು. ಮಗುವಿಗೆ ಎದೆ ಹಾಲು ಕುಡಿಸಲಾಗದೇ ಮಾನಸಿಕವಾಗಿ ನೊಂದಿದ್ದ ಚರಿಸ್ಮಾ ಕೆಲ ದಿನಗಳ ಹಿಂದೆಯಷ್ಟೇ ಆತ್ಮಹತ್ಯೆಗೆ ಯತ್ನಿಸಿದ್ದರು. ಕುಟುಂಬದವರು ಅವರನ್ನು ತಡೆದಿದ್ದರು. ಭಾನುವಾರ ಎಲ್ಲರ ಕಣ್ತಪ್ಪಿಸಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕುಟುಂಬದವರ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವ-ರಿಸಲಾಗಿದೆ’ ಎಂದು ತಿಳಿಸಿದರು.

₹1 ಕೋಟಿ ಮೊತ್ತದ ಖೋಟಾ ನೋಟು ವಶ

ಸಾಲದ ಸೋಗು: ಜಯನಗರ ಪೊಲೀಸರ ತನಿಖೆ • ಬಿಲ್ಡರ್, ಎಂಜಿನಿಯರ್ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ



ಜಯನಗರ ಪೊಲೀಸರು ಬಂಧಿತ ಆರೋಪಿಗಳಿಂದ ಜಪ್ತಿ ಮಾಡಿರುವ ಖೋಟಾ ನೋಟು, ಕಾರುಗಳು, ನಕಲಿ ಚಿನ್ನದ ಬಿಸ್ಕತ್

ಬೆಂಗಳೂರು: ಸಾಲದ ಸೋಗಿನಲ್ಲಿ ಖೋಟಾ ನೋಟುಗಳನ್ನು ನೀಡಿ ಕಮಿಷನ್ ರೂಪದಲ್ಲಿ ಲಕ್ಷಾಂತರ ರೂಪಾಯಿ ಪಡೆದು ವಂಚಿಸುತ್ತಿದ್ದ ಜಾಲವನ್ನು ಜಯನಗರ ಪೊಲೀಸರು ಭೇದಿಸಿದ್ದು, ಬಿಲ್ಡರ್ ಹಾಗೂ ಎಂಜಿನಿಯರ್ ಸೇರಿದಂತೆ ಮೂವರನ್ನು ಬಂಧಿಸಿದ್ದಾರೆ.

‘ಜಯನಗರದ ಜೆ.ಎನ್. ಪ್ರಾಜೆಕ್ಟ್ ಪಾಲುದಾರ ಎನ್. ಪಾರ್ಥಸಾರಥಿ ಅವರು ವಂಚನೆ ಬಗ್ಗೆ ದೂರು ನೀಡಿದ್ದರು. ಆರೋಪಿಗಳಾದ ಆರ್.ಟಿ. ನಗರದ ಮನ್ನಾ ಶರುಣ್ (35), ಆರ್. ವಿಷ್ಣುರಾಜನ್ (26) ಹಾಗೂ ರಾಮ-ಮೂರ್ತಿನಗರದ ಪ್ರವೀಣ್‌ಕುಮಾರ್ (40) ಎಂಬುವವರನ್ನು ಬಂಧಿಸಲಾಗಿದೆ. ₹ 500 ರೂಪಾಯಿ ಮುಖಬೆಲೆಯ ₹ 1 ಕೋಟಿ ಮೊತ್ತದ ಖೋಟಾ ನೋಟುಗಳು, ಎರಡು ಕಾರು, ₹ 20 ಲಕ್ಷ ನಗದು, 6 ಕೆ.ಜಿ. ನಕಲಿ ಚಿನ್ನದ ಬಿಸ್ಕತ್‌ಗಳು ಹಾಗೂ ನಕಲಿ ಗುಂಡುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಪಾರ್ಥಸಾರಥಿ ಅವರು ಬಾಣ-ಸವಾಡಿಯಲ್ಲಿರುವ ಬ್ಯಾಂಕೊಂದರಲ್ಲಿ ₹ 1.75 ಕೋಟಿ ಸಾಲ ಮಾಡಿದ್ದರು. ಕೋವಿಡ್ ಲಾಕ್‌ಡೌನ್‌ನಿಂದಾಗಿ ವ್ಯ-ವಹಾರದಲ್ಲಿ ನಷ್ಟವಾಗಿತ್ತು. ಕೋವಿಡ್ ನಂತರವೂ ಸಾಲ ಮರುಪಾವತಿ ಸಾಧ್ಯವಾಗಿರಲಿಲ್ಲ. ಬೇರೆ ಕಡೆ ಸಾಲ ಪಡೆದು, ಹಳೇ ಸಾಲ ತೀರಿಸುವುದಕ್ಕಾಗಿ ಪಾರ್ಥಸಾರಥಿ ಪ್ರಯತ್ನಿಸುತ್ತಿದ್ದರು.’

ಅಪರಾಧ ಸುದ್ದಿ

‘ಬಿಲ್ಡರ್ ಹಾಗೂ ಎಂಜಿನಿಯರ್‌ಗಳಾದ ಆರೋಪಿಗಳು, ಪಾರ್ಥಸಾರಥಿ ಅವರನ್ನು ಸಂಪರ್ಕಿಸಿದ್ದರು. ‘ನಮ್ಮ ಬಳಿ ₹ 13 ಕೋಟಿ ಹಣವಿದೆ. ಇದರಲ್ಲಿ ನಿಮಗೆ ಸಾಲ ನೀಡುತ್ತೇವೆ. ಆದರೆ, ಶೇ 2ರಷ್ಟು ಕಮಿಷನ್ ಮುಂಗಡವಾಗಿ ನೀಡಬೇಕು’ ಎಂದಿದ್ದರು. ಅದನ್ನು ನಂಬಿದ್ದ ಪಾರ್ಥಸಾರಥಿ, ₹ 27 ಲಕ್ಷ ಕಮಿಷನ್ ನೀಡಿದ್ದರು. ಹಣ ಪಡೆದಿದ್ದ ಆರೋಪಿಗಳು, ₹ 1 ಕೋಟಿ ಮೊತ್ತದ ಖೋಟಾ ನೋಟುಗಳನ್ನು ಕೊಟ್ಟಿದ್ದರು’ ಎಂದು ಪೊಲೀಸರು ತಿಳಿಸಿದರು.

‘ನೋಟುಗಳನ್ನು ಬ್ಯಾಂಕ್‌ಗೆ ತೆಗೆದುಕೊಂಡು ಹೋದಾಗ ಖೋಟಾ ಎಂಬುದು ಗೊತ್ತಾಗಿತ್ತು. ಈ ಬಗ್ಗೆ ವಿಚಾರಿಸಲು ಯತ್ನಿಸಿದಾಗ ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದರು. ನಂತರವೇ ಪಾರ್ಥಸಾರಥಿ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖ-ಲಾಗುತ್ತಿದ್ದಂತೆ ತನಿಖೆ ಕೈಗೊಂಡ ವಿಶೇಷ ತಂಡ, ಮೂವರನ್ನು ಬಂಧಿಸಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಆಶಾಲತಾ ರಾವ್, ಲಕ್ಷ್ಮಣರಾವ್, ತುಷಾರ್ ಸೇರಿದಂತೆ ಮತ್ತಷ್ಟು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ’ ಎಂದು ಹೇಳಿದರು.

ವಂಚನೆಯೇ ವೃತ್ತಿ: ‘ಬಂಧಿತ ಆರೋಪಿಗಳು, ಜನರನ್ನು ವಂಚಿಸುವುದನ್ನೇ ವೃತ್ತಿ ಮಾಡಿಕೊಂಡಿದ್ದರು. ಸಾಲ ಹಾಗೂ ಚಿನ್ನ ಕೊಡಿಸುವ ಸೋಗಿನಲ್ಲಿ ಹಲವು ಸಾರ್ವಜನಿಕರನ್ನು ಆರೋಪಿಗಳು ವಂಚಿಸಿರುವ ಅನುಮಾನವಿದೆ’ ಎಂದು ಪೊಲೀಸರು ತಿಳಿಸಿದರು.

‘ಮಕ್ಕಳು ಆಟಿಕೆಗೆ ಬಳಸುವ ಖೋಟಾ ನೋಟುಗಳನ್ನು ಆನ್‌ಲೈನ್ ಮೂಲಕ ಆರೋಪಿಗಳು ಖರೀದಿಸಿದ್ದರು. ಖೋಟಾ ನೋಟುಗಳ ಕಂತೆಯ ಮೇಲ್ಭಾಗ ಹಾಗೂ ಕೆಳಭಾಗದಲ್ಲಿ ಅಸಲಿ ನೋಟುಗಳನ್ನು ಇರಿಸುತ್ತಿದ್ದರು. ಹೀಗಾಗಿ, ಆರಂಭದಲ್ಲಿ ಯಾರಿಗೂ ಅನುಮಾನ ಬರುತ್ತಿರಲಿಲ್ಲ’ ಎಂದು ಹೇಳಿದರು.

ಕ್ರಿಸ್‌ಮಸ್ ಪ್ರಾರ್ಥನೆಗೆ ಹೊರಟಿದ್ದಾಗ ಅಪಘಾತ: ಸವಾರ ಸಾವು



ಅಲೆಕ್ಸ್

ಬೆಂಗಳೂರು: ಕಬ್ಬನ್ ಪಾರ್ಕ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ನಸುಕಿನಲ್ಲಿ ಅಪಘಾತ ಸಂಭವಿಸಿದ್ದು, ಬೈಕ್ ಸವಾರ ಅಲೆಕ್ಸ್ (25) ಎಂಬುವವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ರಾಜಾಜಿನಗರ ಪ್ರಕಾಶ ನಗರದ ನಿವಾಸಿ ಅಲೆಕ್ಸ್, ಸಿಎನ್‌ಸಿ ಯಂತ್ರದ ಆಪರೇಟರ್ ಕೆಲಸ ಮಾಡುತ್ತಿದ್ದರು. ಕ್ರಿಸ್‌ಮಸ್ ಪ್ರಾರ್ಥನೆಗೆಂದು ಸ್ನೇಹಿತ ಸತೀಶ್ (26) ಜೊತೆ ಬೈಕ್‌ನಲ್ಲಿ ಶಿವಾಜಿನಗರದ ಸೇಂಟ್ ಪ್ಯಾಟ್ರಿಕ್ ಬ್ಯಾಸಿಲಿಕಾ ಚರ್ಚ್‌ಗೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಕಬ್ಬನ್ ಪಾರ್ಕ್ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

‘ನೋಂದಣಿ ಫಲಕ ಇಲ್ಲದ ಯಮಹಾ ಆರ್ 15 ಬೈಕ್‌ನಲ್ಲಿ ಅಲೆಕ್ಸ್, ಸತೀಶ್ ಹೊರಟಿದ್ದರು. ಗೋಪಾಲಗೌಡ ಜಂಕ್ಷನ್ ಬಳಿ ಪಾದಚಾರಿ ಮಾರ್ಗಕ್ಕೆ ನುಗ್ಗಿದ್ದ ಬೈಕ್, ಗೋಡೆಗೆ ಡಿಕ್ಕಿ ಹೊಡೆದು ಉರುಳಿಬಿದ್ದಿತ್ತು. ತೀವ್ರ ಗಾಯಗೊಂಡು ಅಲೆಕ್ಸ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿಂಬದಿ ಕುಳಿತಿದ್ದ ಸತೀಶ್ ಅವರಿಗೂ ತೀವ್ರ ಗಾಯವಾಗಿತ್ತು. ಸ್ಥಳೀಯರೇ ಅವರನ್ನು ಬೌರಿಂಗ್ ಆಸ್ಪತ್ರೆಗೆ ದಾಖಲಿಸಿದ್ದು, ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ.’

‘ಅಲೆಕ್ಸ್ ಅವರ ನಿರ್ಲಕ್ಷ್ಯದ ಚಾಲನೆಯಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಅವರ ವಿರುದ್ಧವೇ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂ-ದುವರಿಸಲಾಗಿದೆ. ಬೈಕ್ ಯಾರದ್ದು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ’ ಎಂದು ತಿಳಿಸಿದರು.

ವಿಧಾನಸೌಧ ಠಾಣೆ ಎದುರು ಮದ್ಯದ ಪಾರ್ಟಿ

ಬೆಂಗಳೂರು: ವಿಧಾನಸೌಧ ಠಾಣೆ ಎದುರಿನ ಉದ್ಯಾನದಲ್ಲಿ ಭಾನುವಾರ ಮದ್ಯದ ಪಾರ್ಟಿ ಮಾಡಿ ಫೋಟೊ ಕ್ಲಿಕ್ಕಿಸಿ-ಕೊಳ್ಳುತ್ತಿದ್ದ ನಾಲ್ವರು ಯುವಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ರಜೆ ದಿನವಾಗಿದ್ದರಿಂದ ವಿಧಾನಸೌಧ ಹಾಗೂ ಸುತ್ತಮುತ್ತಲ ಕಚೇರಿಗಳು ಬಂದ್ ಆಗಿದ್ದವು. ಜನರ ಓಡಾಟವೂ ವಿರಳವಾಗಿತ್ತು. ಬಿಯರ್ ಬಾಟಲಿ ಹಿಡಿದು ಠಾಣೆ ಎದುರಿನ ಉದ್ಯಾನಕ್ಕೆ ಬಂದಿದ್ದ ಯುವಕರು, ಪಾನಮತ್ತರಾಗಿದ್ದರು. ಅವರ ಜೊತೆ ಇಬ್ಬರು ಯುವತಿಯರೂ ಇದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರೋಪಿಗಳ ಕಾಲಿಗೆ ಗುಂಡೇಟು

ಆನೇಕಲ್: ತಲೆಮರೆಸಿಕೊಂಡ ಆರೋಪಿಗಳನ್ನು ಬಂಧಿಸಲು ಪೊಲೀಸರು ಭಾನುವಾರ ನಡೆಸಿದ ಕಾರ್ಯಾಚರಣೆ ವೇಳೆ ಹಲ್ಲೆಗೆ ಮುಂದಾದ ಆರೋಪಿಗಳ ಕಾಲಿಗೆ ಪೊಲೀಸರು ಗುಂಡು ಹೊಡೆದಿದ್ದಾರೆ.

ಗಾಂಜಾ ನಶೆಯಲ್ಲಿ ಪೊಲೀಸ್ ಪೇದೆಯ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದ ವರುಣ್ ಅಲಿಯಾಸ್ ಕೆಂಚ ಜಿಗಣಿ ಎಂಬಾತ ಸಮೀಪದ ಕಲ್ಲುಬಾಳು ಗ್ರಾಮದ ಮನೆಯೊಂದರಲ್ಲಿ ಅಡಗಿರುವ ಮಾಹಿತಿ ಮೇರೆಗೆ ಆನೇಕಲ್ ಪೊಲೀಸರು ಕಾರ್ಯಾಚರಣೆ ನಡೆಸಿದರು.

ಕಾರು ಡಿಕ್ಕಿ: ಪತಿ ಸಾವು, ಪತ್ನಿಗೆ ಗಾಯ (ಕುಣಿಗಲ್ ವರದಿ): ರಾಷ್ಟ್ರೀಯ ಹೆದ್ದಾರಿ 75ರ ಬೈಪಾಸ್ ಗವಿಮಠದ ಬಳಿ ಭಾನುವಾರ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿ ಪ್ರಯಾಣಿಸುತ್ತಿದ್ದ ದಂಪತಿ ಗಾಯಗೊಂಡಿದ್ದು, ಚಿಕಿತ್ಸೆಗೆ ಸ್ಪಂದಿಸದೆ ಪತಿ ಬೆಂಗಳೂರಿನ ಶಿವಪುರದ ಸುರೇಶ್ (42) ಮೃತಪಟ್ಟಿದ್ದಾರೆ.

ಕ್ರೀಸ್‌ನಲ್ಲಿ ಓಡುವಾಗ ಬಿದ್ದು ಸಾವು (ಕುಣಿಗಲ್ ವರದಿ): ರನ್ ಗಳಿಸಲು ಕ್ರೀಸ್‌ನಲ್ಲಿ ಓಡುತ್ತಿದ್ದಾಗ ಬಿದ್ದು ಕ್ರೀಡಾಪಟು ಮೃತಪಟ್ಟಿರುವ ಘಟನೆ ಭಾನುವಾರ ತಾಲ್ಲೂಕಿನ ಗಿರಿಗೌಡನಪಾಳ್ಯ ಕ್ರೀಡಾಂಗಣದಲ್ಲಿ ನಡೆದಿದೆ. ಮೃತರು ಬೆಂಗಳೂರಿನ ಭುವನೇಶ್ವರಿ ನಗರ ನಿವಾಸಿ ಸ್ಟಂಪ್ಸ್ ಕಂಪ್ಲಿಟ್ ಕ್ರಿಕೆಟ್ ಕ್ಲಬ್‌ನ ಕೋಚ್ ರಮೇಶ್ ಕುಮಾರ್ (36).



ವಾಜಪೇಯಿ ಪ್ರತಿಮೆ ಅನಾವರಣ

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಕಂಚಿನ ಪ್ರತಿಮೆ ಹಾಗೂ ಉದ್ಯಾನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬನಶಂಕರಿ 2ನೇ ಹಂತದಲ್ಲಿ ಭಾನುವಾರ ಉದ್ಘಾಟಿಸಿದರು. ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಲಯ ಆಯುಕ್ತ ಜಯರಾಮ್ ರಾಯಪುರ, ಸಂಸದ ತೇಜಸ್ವಿ ಸೂರ್ಯ, ಕಂದಾಯ ಸಚಿವ ಆರ್. ಅಶೋಕ, ಸಂಸದ ಪಿ.ಸಿ ಮೋಹನ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಉಪಸ್ಥಿತರಿದ್ದರು

ಸಲಿಂಗ ವಿವಾಹದ ವಿರುದ್ಧ ಹೇಳಿಕೆ: ಕ್ಷಮೆ ಯಾಚನೆಗೆ ಒತ್ತಾಯ



ಅಕ್ಕೈ ಪದ್ಮಶಾಲಿ

ಬೆಂಗಳೂರು: ‘ಸಲಿಂಗ ವಿವಾಹವು ಭಾರತೀಯ ಸಂಸ್ಕೃತಿಗೆ ವಿರುದ್ಧ ಎಂದು ಸಂಸತ್‌ನಲ್ಲಿ ಹೇಳಿಕೆ ನೀಡಿರುವ ರಾಜ್ಯಸಭೆ ಸದಸ್ಯ ಸುಶೀಲ್‌ಕುಮಾರ್ ಮೋದಿ ಅವರು ಕೂಡಲೇ ಕ್ಷಮೆ ಯಾಚಿಸಬೇಕು’ ಎಂದು ಲಿಂಗತ್ವ ಅಲ್ಪಸಂಖ್ಯಾತರ ಪರ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಆಗ್ರಹಿಸಿದ್ದಾರೆ.

ಸುಶೀಲ್‌ಕುಮಾರ್ ಅವರಿಗೆ ಬಹಿರಂಗ ಪತ್ರ ಬರೆದಿರುವ ಅವರು, ‘ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡುವುದರ ವಿರುದ್ಧ ನೀವು ರಾಜ್ಯ-ಸಭೆಯಲ್ಲಿ ಆಡಿರುವ ಮಾತುಗಳಿಂದ ತೀವ್ರ ಆಘಾತವಾಗಿದೆ’ ಎಂದಿದ್ದಾರೆ.

‘ಮದುವೆ ಪುರುಷ ಮತ್ತು ಮಹಿಳೆಗಷ್ಟೇ ಸೀಮಿತ, ಅದೇ ಪರಿಶುದ್ಧ ಎಂಬ ನಿಮ್ಮ ಭಾವನೆಯು ಲಿಂಗತ್ವ ಅಲ್ಪಸಂಖ್ಯಾತರ ಭಾವನೆಗಳಿಗೆ ವಿರುದ್ಧವಾಗಿದೆ. ಎಲ್ಲಾ ಲಿಂಗತ್ವ ಅಲ್ಪಸಂಖ್ಯಾತರನ್ನೂ ಸಮಾನವಾಗಿ ನೋಡಬೇಕಿದೆ. ಪುರುಷನಾಗಿ ಹುಟ್ಟಿದ ನಾನು, ಈಗ ಮಹಿಳೆಯಾಗಿ ಪರಿವರ್ತನೆಯಾಗಿದ್ದೇನೆ. ನಿಮ್ಮ ಪ್ರಕಾರ ನಾನು ಮಹಿಳೆಯಲ್ಲ ಮತ್ತು ನಾನು ಮದುವೆಯಾಗುವಂತೆಯೇ ಇಲ್ಲ. ನಾನು ಮದುವೆಯಾಗುವ ಹಕ್ಕನ್ನು ನಿರಾಕರಿಸುವುದು ಸರಿಯಲ್ಲ. ಸಲಿಂಗ ವಿವಾಹ ವಿರೋಧಿಸುವುದು ಸಮಾನತೆ ಮತ್ತು ಗೌರವಯುತ ಜೀವನದ ಹಕ್ಕನ್ನು ನಿರಾಕರಿಸಿದಂತೆ’ ಎಂದು ತಮ್ಮ ಮೂರು ಪುಟಗಳ ಪತ್ರದಲ್ಲಿ ಹೇಳಿದ್ದಾರೆ.

‘ಪುರುಷರೂ ಅಲ್ಲದ, ಮಹಿಳೆಯೂ ಅಲ್ಲದ ನನ್ನಂತ ಅನೇಕರು ಇದ್ದಾರೆ. ಅವರು ಮದುವೆಯೇ ಆಗಬಾರದೆ? ನಮ್ಮ ವಿವಾಹ ನಿರಾಕರಿಸುವುದು ಸಂವಿಧಾನದ ಆಶಯಗಳನ್ನು ಉಲ್ಲಂಘಿಸಿದಂತೆ ಅಲ್ಲವೇ’ ಎಂದು ಪ್ರಶ್ನಿಸಿದ್ದಾರೆ.

‘ಸಲಿಂಗ ವಿವಾಹ ದೇಶದ ಸಂಸ್ಕೃತಿಗೆ ಧಕ್ಕೆಯಾಗಲಿದೆ ಎಂದು ಹೇಳಿದ್ದೀರಿ. ಭಾರತೀಯ ಶ್ರೀಮಂತ ಸಂಸ್ಕೃತಿಯು ವಿಭಿನ್ನ ವಿವಾಹ ಮತ್ತು ಪ್ರೀತಿಗೆ ಸದಾ ಅವಕಾಶಗಳನ್ನು ನೀಡಿದೆ. ಸಂಸತ್‌ನಲ್ಲಿ ನೀವು ನೀಡಿರುವ ಹೇಳಿಕೆಯು ಲಿಂಗತ್ವ ಅಲ್ಪಸಂಖ್ಯಾ-ತರ ಸಮುದಾಯಕ್ಕೆ ನೋವುಂಟು ಮಾಡಿದ್ದು, ಕೂಡಲೇ ಕ್ಷಮೆ ಕೇಳಬೇಕು’ ಎಂದು ಒತ್ತಾಯಿಸಿದ್ದಾರೆ.

ಸಾಹಿತಿ ಪ್ರೊ.ಎಸ್‌.ಜಿ. ಸಿದ್ಧರಾಮಯ್ಯ ಕಳವಳ

‘ಪ್ರಯೋಗರಂಗ ಆಗುತ್ತಿದೆ ಕರ್ನಾಟಕ’

ಪ್ರಜಾವಾಣಿ ವಾರ್ತೆ



ನಟರಾಜ್ ಹುಳಿಯಾರ್ ಅವರಿಗೆ ‘ಪ್ರೊ.ಕಿ.ರಂ. ನಾಗರಾಜ ಸಂಸ್ಕೃತಿ ಪ್ರಶಸ್ತಿ’ಯನ್ನು ಪ್ರೊ.ಎಸ್‌.ಜಿ. ಸಿದ್ಧರಾಮಯ್ಯ ಪ್ರದಾನ ಮಾಡಿದರು. ಪ್ರಜ್ಞಾ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ನಲ್ಲೂರು ಪ್ರಸಾದ್, ಎಂ.ಎಸ್‌ ಆಶಾದೇವಿ ಹಾಗೂ ಲೇಖಕ ಎಲ್‌.ಎನ್ ಮುಕುಂದರಾಜ್ ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ದೇಶದಲ್ಲಿ ಕರ್ನಾಟಕವು ಎಲ್ಲವಕ್ಕೂ ಪ್ರಯೋಗರಂಗ ಆಗುತ್ತಿದೆ. ಈ ವೇಳೆ ರಂಗಭೂಮಿ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಪ್ರಜ್ಞಾವಂತ ಮನಸ್ಸುಗಳು ಮೌನವಾಗಿರುವುದು ಆತಂಕವನ್ನುಂಟು ಮಾಡುತ್ತಿದೆ’ ಎಂದು ಸಾಹಿತಿ ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಕಳವಳ ವ್ಯಕ್ತಪಡಿಸಿದರು.

ಪ್ರಜ್ಞಾ ಸಾಂಸ್ಕೃತಿಕ ವೇದಿಕೆ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಲೇಖಕ ನಟರಾಜ್ ಹುಳಿಯಾರ್ ಅವರಿಗೆ ‘ಪ್ರೊ.ಕಿ.ರಂ. ನಾಗರಾಜ ಸಂಸ್ಕೃತಿ ಪ್ರಶಸ್ತಿ’ ಪ್ರದಾನ ಮಾಡಿದರು. ಈ ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ.

‘ದೇಶ ಸಾಗುತ್ತಿರುವ ಸ್ಥಿತಿ ಕಳವಳವ-ನ್ನುಂಟು ಮಾಡುತ್ತಿದೆ. ಬಲಪಂಥೀಯರ ಎಲ್ಲ ಪ್ರಯೋಗಗಳೂ ಕರ್ನಾಟಕ-ದಲ್ಲಿಯೇ ಮೊದಲು ನಡೆಯುತ್ತಿವೆ. ರಾಷ್ಟ್ರೀಯ ಶಿಕ್ಷಣ ನೀತಿ ಪರಿಚಯ, ಹಿಜಾಬ್ ಸೇರಿ ವಿವಿಧ ಪ್ರಕರಣಗಳ ವೇಳೆ ಬಾಯಿ ಮುಚ್ಚಿಕೊಂಡೇ ಕುಳಿತುಕೊಳ್ಳಲಾಯಿತು. ಈ ವೇಳೆ ನಾವು ಮೌನವಾಗಿರುವುದು ಮುಂದಿನ ಪೀಳಿಗೆಗೆ ಮಾಡುವ ದ್ರೋಹವಾಗಲಿದೆ. ತೇಜಸ್ವಿ, ಲಂಕೇಶ್, ಚಂದ್ರಶೇಖರ ಪಾಟೀಲ (ಚಂಪಾ) ಅವರ ಕಾಲದಲ್ಲಿ ಯಾವ ರೀತಿಯ ಪ್ರತಿಕ್ರಿಯೆ ಬರುತ್ತಿತ್ತು ಎನ್ನುವುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. 70ರ ದಶಕದ ಚಳವಳಿ ಮತ್ತೆ ಹುಟ್ಟಬೇಕು. ಇಲ್ಲವಾದಲ್ಲಿ ನಮ್ಮ ಮಕ್ಕಳು ಬೇರೆಯವರ ದಾಳವಾಗಿ ಬಳಕೆಯಾಗುತ್ತವೆ’ ಎಂದು ಹೇಳಿದರು.

‘ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆಯ ಸನ್ಮಾನಿತರ ಪಟ್ಟಿಯಲ್ಲಿ ಮುಸ್ಲಿಂ ಸಮುದಾಯದವರ-ನ್ನು ಹೊರಗಿಟ್ಟು, ಕೋಮುದ್ವೇಷ ಸಾರಲಾಗಿದೆ. ನಮ್ಮ ಕಣ್ಣ ಮುಂದೆ ಸಮಾಜ ವಿದ್ರೋಹಿ ಕೃತ್ಯ ನಡೆಯುತ್ತಿ-ದ್ದರೂ ನಾವು ಮೌನವಾಗಿರುವುದು ಸರಿಯಲ್ಲ. ಎಲ್ಲರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕು’ ಎಂದರು.

ವಿಮರ್ಶಕಿ ಎಂ.ಎಸ್. ಆಶಾದೇವಿ, ‘ಕಿ.ರಂ. ನಾಗರಾಜ ಅವರು ಭಾರತದ ಬಹುತ್ವವನ್ನು ಸಾರುವ ಕೆಲಸ ಮಾಡಿದ್ದರು. ಅವರಿಂದ ಪಾಠ ಕಲಿತವರು ಕಣ್ಣೆದುರಿನ ಸತ್ಯ ಹೇಳಲು ಹಿಂಜರಿಯುವುದಿಲ್ಲ. ಒಳಗಿನ ಪ್ರಾಮಾಣಿಕತೆ ಇಟ್ಟುಕೊಳ್ಳುವ ನೈತಿಕ ಎಚ್ಚರಿಕೆಯನ್ನು ಅವರು ಕೊಟ್ಟು ಹೋಗಿದ್ದಾರೆ. ಅವರ ಕಾರ್ಯವನ್ನು ನಟರಾಜ್ ಹುಳಿಯಾರ್ ಮುಂದುವರಿಸುತ್ತಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

‘ರಸ್ತೆ ಅತಿಕ್ರಮಣ ತೆರವುಗೊಳಿಸಿ’

ಹಂಪಿನಗರ ಕಲ್ಯಾಣ್ ಹೌಸಿಂಗ್ ಸೊಸೈಟಿಯ ಸಾರ್ವಜನಿಕ ರಸ್ತೆ ತುಂಬಾ ಕಿರಿದಾಗಿದೆ. ಸ್ಥಳೀಯ ನಿವಾಸಿಯೊಬ್ಬರು ಮನೆಯ ಕಟ್ಟಡದ ನೆಲಮಹಡಿಯಿಂದ ಕಾರುಗಳನ್ನು ಹೊರ ತೆಗೆಯಲು 2ರಿಂದ 3 ಅಡಿಗಳಷ್ಟು ರಸ್ತೆಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಇದು ಮುಖ್ಯರಸ್ತೆಯಾಗಿದ್ದು, ನೂರಾರು ವಾಹನಗಳು ಸಂಚಾರಿಸುವುದರಿಂದ ಪಾದಚಾರಿಗಳು ಮತ್ತು ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಅತಿಕ್ರಮಿಸಿರುವ ರಸ್ತೆಯನ್ನು ಕೂಡಲೇ ತೆರವುಗೊಳಿಸಲು ಅಧಿಕಾರಿಗಳು ಅಗತ್ಯ ಕ್ರಮ ಕೈಗೊಂಡು ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ತಿ. ನಿರಂಜನ, ಸ್ಥಳೀಯ ನಿವಾಸಿ



ಹಂಪಿನಗರದ ಕಲ್ಯಾಣ್ ಹೌಸಿಂಗ್ ರಸ್ತೆ ಅತಿಕ್ರಮಣ ಮಾಡಿಕೊಂಡಿರುವುದು.

‘ಪಾದಚಾರಿ ಮಾರ್ಗ ನಿರ್ಮಿಸಿ’




ವಿದ್ಯಾರಣ್ಯಪುರದ ಆಕಾಶವಾಣಿ ಲೇಔಟ್ 1ನೇ ಅಡ್ಡ ರಸ್ತೆ.

ಬಿಇಎಲ್ ವೃತ್ತ ಮತ್ತು ವಿದ್ಯಾರ-ಣ್ಯಪುರ ನಡುವಿನ ದೊಡ್ಡಬೊಮ್ಮ-ಸಂದ್ರದ ನಂಜಪ್ಪ ವೃತ್ತ ನಡುವಿನ ರಸ್ತೆ ವಾಹನ ದಟ್ಟಣೆಯಿಂದ ಕೂಡಿರುತ್ತದೆ. ಈ ರಸ್ತೆಯ ಇಕ್ಕೆಲಗ-ಳಲ್ಲಿ ಪಾದಚಾರಿ ಮಾರ್ಗವಿಲ್ಲದೇ ಸಾರ್ವಜನಿಕರ ಓಡಾಟಕ್ಕೆ ಸಮಸ್ಯೆಯಾಗಿದೆ. ಪಾದಚಾರಿಗಳು ಜೀವ ಕೈಯಲ್ಲಿ ಹಿಡಿದುಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಈ ಭಾಗದಲ್ಲಿ ಪಾದಚಾರಿ ಮಾರ್ಗವನ್ನು ನಿರ್ಮಿಸಬೇಕು.

ಬಾಗೂರು ಆರ್. ನಾಗರಾಜಪ್ಪ, ದೊಡ್ಡಬೊಮ್ಮ-ಸಂದ್ರದ ನಿವಾಸಿ

‘ಮೋರಿ ದುರಸ್ತಿಗೊಳಿಸಿ’



ಬೇಗೂರಿನ ಮುಖ್ಯರಸ್ತೆಯ ಪಕ್ಕದಲ್ಲಿರುವ ಮೋರಿ.

ಬೇಗೂರು ನಾಗನಾಥೇಶ್ವರ ದೇವಸ್ಥಾನದ ಹತ್ತಿರದ ಮದರ್ ತೆರೇಸಾ ಅಥವಾ ಶಾಸ್ತ್ರಿ ಬೀದಿಯಿಂದ ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ 2–3 ಅಡಿ ಎತ್ತರದ ಉಬ್ಬು ಇದ್ದು, ವಾಹನಗಳು ಹತ್ತಿ ಇಳಿಯಲು ತೊಂದರೆಯಾಗುತ್ತಿದೆ. ವಾಹನ ಸವಾರರು ಬಿದ್ದ ಹಲವು ನಿದರ್ಶನಗಳಿವೆ. ಈ ರಸ್ತೆಯ ಪಕ್ಕದಲ್ಲಿರುವ ಮೋರಿಯೂ ಒಂದು ವರ್ಷದಿಂದ ತೆರೆದ ಸ್ಥಿತಿಯಲ್ಲಿದೆ. ಕೂಡಲೇ ಈ ಮೋರಿ ಮುಚ್ಚಿ, ರಸ್ತೆಯ ಉಬ್ಬು ತೆರವುಗೊಳಿಸಬೇಕು.

ನಾಗರಾಜ ಎ., ಬೇಗೂರು ನಿವಾಸಿ

‘ರಸ್ತೆ ಗುಂಡಿ ಮುಚ್ಚಿ’

ವಿದ್ಯಾರಣ್ಯಪುರದ ಆಕಾಶವಾಣಿ ಲೇಔಟ್ 1ನೇ ಅಡ್ಡ ರಸ್ತೆಯಲ್ಲಿ, ಒಂದು ಅಡಿ ಆಳದ ಗುಂಡಿ ಬಿದ್ದಿದೆ. ಬೆಸ್ಕಾಂ ಸಿಬ್ಬಂದಿ ಕೆಲಸ ನಿರ್ವಹಿಸಿ ನಂತರ ಸರಿಯಾಗಿ ಮುಚ್ಚದ ಕಾರಣ ರಸ್ತೆಯಲ್ಲಿ ಈ ಗುಂಡಿ ಉಂಟಾಗಿದ್ದು, ವಾಹನ ಸವಾರರಿಗೆ ಅಪಾಯಕಾರಿಯಾಗಿ ಪರಿಣಮಿಸಿದೆ. ಬಿಬಿಎಂಪಿ ಸಿಬ್ಬಂದಿ ಈ ಗುಂಡಿಯನ್ನು ಸರಿಯಾಗಿ ಮುಚ್ಚಲು ತಕ್ಷಣ ಕ್ರಮ ವಹಿಸಬೇಕು.

ರಾಮಚಂದ್ರ ಎಂ.ಆರ್, ಸ್ಥಳೀಯ ನಿವಾಸಿ

‘ಹೆಚ್ಚಿನ ಸಾರಿಗೆ ವ್ಯವಸ್ಥೆ ಕಲ್ಪಿಸಿ’

ದೊಡ್ಡಕಲ್ಲಸಂದ್ರ ಎಂಕೆಎಸ್ ಬಡಾವಣೆ ಮತ್ತು ನಾರಾಯಣ ನಗರಕ್ಕೆ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು. ಸದ್ಯ ಬಿಎಂಟಿಸಿ ಬಡಾವಣೆಗೆ ಬರುವ ಬಸ್ಸುಗಳು ನಿತ್ಯ ಕೆಲವೇ ಟ್ರಿಪ್‌ಗಳಲ್ಲಿ ಸಂಚರಿಸುತ್ತಿವೆ. ಆದ್ದರಿಂದ ಅಂಜನಾಪುರದಿಂದ ಸಂಚರಿಸುವ 215-ಕೆ ಮಾರ್ಗ ಸಂಖ್ಯೆಯ ಬಸ್ ಅನ್ನು ಆವಲಹಳ್ಳಿ ಚೌಕ, ಅಂಜನಾಪುರ ಡಬಲ್ ರಸ್ತೆ, ಎಂಕೆಎಸ್ ಬಡಾವಣೆ, ದೊಡ್ಡಕಲ್ಲಸಂದ್ರ ಮಾರ್ಗವಾಗಿ ಸಂಚರಿಸುವಂತೆ ಮಾಡಿದರೆ ಈ ಭಾಗದ ಸಾರ್ವಜನಿಕರಿಗೆ ಅನುಕೂ-ಲವಾಗುತ್ತದೆ. ಜತೆಗೆ ಇಲ್ಲಿರುವ ಬಸ್ ನಿಲ್ದಾಣಗಳಿಗೆ ಫಲಕಗಳನ್ನು ಅಳವಡಿಸಬೇಕು.

ಶ್ರೀನಿವಾಸ್, ಸ್ಥಳೀಯ ನಿವಾಸಿ

‘ರಸ್ತೆ ಸರಿಪಡಿಸಿ’

ಯಶವಂತಪುರದ ದೇವರಾಜ್ ಅರಸು ಟ್ರಕ್ ಟರ್ಮಿನಲ್ ಮತ್ತು ಸುತ್ತಮುತ್ತಲಿನ ರಸ್ತೆಗಳು ಗುಂಡಿಗಳಿಂದ ಕೂಡಿವೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ವಾಹನ ಸವಾರರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ದೂಳು ಆರೋಗ್ಯವನ್ನು ಹಾಳು ಮಾಡುತ್ತಿದ್ದು, ಸಾರ್ವಜನಿಕರ ಓಡಾಟಕ್ಕೂ ಸಮಸ್ಯೆಯಾಗಿದೆ. ಮಳೆ ಬಂದರೆ ರಸ್ತೆ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ರಸ್ತೆಯಲ್ಲಿ ಹಲವು ಅಪಘಾತಗಳಿಗೂ ಕಾರಣವಾಗಿದೆ. ಕೂಡಲೇ ರಸ್ತೆ ದುರಸ್ತಿಗೊಳಿಸಿ.

ರವೀಂದ್ರ, ಸ್ಥಳೀಯ ನಿವಾಸಿ



ಯಶವಂತಪುರದ ದೇವರಾಜ ಅರಸು ಟ್ರಕ್ ಟ್ರಮಿನಲ್ ರಸ್ತೆ.

ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಹೊಸ ಪಕ್ಷದ ಪಾತ್ರದ ಚರ್ಚೆ ಆರಂಭ

ಜನಾರ್ದನ ರೆಡ್ಡಿಗೆ ಅಗ್ನಿಪರೀಕ್ಷೆ ಕಾಲ

• ಹೊನಕೆರೆ ನಂಜುಂಡೇಗೌಡ

ಬಳ್ಳಾರಿ: ಮಾಜಿ ಸಚಿವ, ಗಣಿ ಉದ್ಯಮಿ ಗಾಲಿ ಜನಾರ್ದನ ರೆಡ್ಡಿ ಭಾನುವಾರ ಪ್ರಕಟಿಸಿದ ಹೊಸ ಪಕ್ಷ ರಾಜ್ಯ ರಾಜಕಾರಣದಲ್ಲಿ ನೆಲೆ ಕಂಡುಕೊಳ್ಳುವುದೇ? ವಿಧಾನಸಭೆಯ ಗದ್ದುಗೆಗೆ ನಡೆಯುತ್ತಿರುವ ಪ್ರಮುಖ ಪಕ್ಷಗಳ ಹೋರಾಟದಲ್ಲಿ ನಿರ್ಣಾಯಕ ಪಾತ್ರ ವಹಿಸುವುದೇ? ಎಂಬ ಚರ್ಚೆ ಕಲ್ಯಾಣ ಕರ್ನಾಟಕದಲ್ಲಿ ಅದರಲ್ಲೂ ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ (ಬಳ್ಳಾರಿ ಮತ್ತು ವಿಜಯನಗರ) ಆರಂಭವಾಗಿದೆ.

ಅಕ್ರಮ ಗಣಿಗಾರಿಕೆ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್‌ನಿಂದ ಷರತ್ತಿನ ಜಾಮೀನು ಪಡೆದ ಬಳಿಕ ಜನಾರ್ದನ ರೆಡ್ಡಿ ಬಳ್ಳಾರಿ ಮನೆಯೊಳಗೇ 'ಬಂದಿ'ಯಾಗಿದ್ದರು. ಅವರಿಂದ ಬಿಜೆಪಿ ಅಂತರ ಕಾಯ್ದುಕೊಂಡಿತ್ತು. ರೆಡ್ಡಿ ಅವರ 'ಆಪ್ತ ಮಿತ್ರ' ಸಚಿವ ಶ್ರೀರಾಮುಲು ಅಲ್ಲೊಂದು, ಇಲ್ಲೊಂದು ಕಾರ್ಯಕ್ರಮದಲ್ಲಿ ಗೆಳೆಯನ ಜೊತೆ ಕಾಣಿಸಿಕೊಂಡಿದ್ದು ಬಿಟ್ಟರೆ ಉಳಿದಂತೆ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲಿಲ್ಲ. ಇದರಿಂದ 'ರೆಡ್ಡಿ ಹಾಗೂ ಶ್ರೀರಾಮುಲು ಸಂಬಂಧ ಹಳಸಿದೆ' ಎಂಬ ಸಂದೇಶ ರವಾನೆಯಾಯಿತು.

ಬಿಜೆಪಿ ಹಾಗೂ ಗೆಳೆಯನಿಂದ ಕಡೆಗಣಿಸಲಾದ ರೆಡ್ಡಿಗೆ ಹೊಸ ಪಕ್ಷ ಸ್ಥಾಪನೆ ಅನಿವಾರ್ಯವಾಯಿತು. 'ಕಲ್ಯಾಣ ರಾಜ್ಯ ಪ್ರಗತಿ ಪಕ್ಷ' ಬಳ್ಳಾರಿ, ಹೊಸಪೇಟೆ, ಕೊಪ್ಪಳ, ರಾಯಚೂರು, ಯಾದಗಿರಿ, ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ಎಷ್ಟು ಸ್ಥಾನಗಳನ್ನು ಗೆಲ್ಲಬಹುದು? ಎಂಬ ರಾಜಕೀಯ ಲೆಕ್ಕಾಚಾರ ಆರಂಭವಾಗಿದೆ.

ರಾಜ್ಯದಲ್ಲಿ ಪ್ರಾದೇಶಿಕ ಪಕ್ಷಗಳನ್ನು ಕಟ್ಟಿದ ದೇವರಾಜ ಅರಸು, ಎಸ್. ಬಂಗಾರಪ್ಪ, ಬಿ.ಎಸ್. ಯಡಿಯೂರಪ್ಪ ಅವರ ಭವಿಷ್ಯ ಏನಾಯಿತು ಎಂಬ ಇತಿಹಾಸ ಕಣ್ಣ ಮುಂದಿದೆ. ಅಷ್ಟೇ ಏಕೆ, ರೆಡ್ಡಿ, ಶ್ರೀರಾಮುಲು ಸೇರಿಕೊಂಡು ಕಟ್ಟಿದ್ದ 'ಬಿಎಸ್‌ಆರ್ ಕಾಂಗ್ರೆಸ್' ಪಕ್ಷ ಕೊನೆಗೆ ಏನಾಯಿತು ಎಂಬುದು ಜನರ ಮನಸ್ಸಿನಲ್ಲಿ ಹಸಿರಾಗಿದೆ.

ಕಾಣದ ಸಿದ್ಧತೆ...: ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸ ಎನ್ನುವಂತೆ ಚುನಾವಣೆಗೆ ಮೂರ್ನಾಲ್ಕು ತಿಂಗಳು ಉಳಿದಿರುವಾಗ ರೆಡ್ಡಿ ಹೊಸ ಪಕ್ಷ ಕಟ್ಟಿದ್ದಾರೆ. ಇದಕ್ಕೆ ಬೇಕಾಗಿರುವ ಸಿದ್ಧತೆ ಮಾಡಿದಂತಿಲ್ಲ. ವ್ಯಾಪಕ ಪ್ರಚಾರವನ್ನೂ ಕೊಟ್ಟಿಲ್ಲ. ಬಿಎಸ್‌ಆರ್ ಕಾಂಗ್ರೆಸ್ 2013ರ ವಿಧಾನಸಭೆ ಚುನಾವಣೆಯಲ್ಲಿ 150 ಸ್ಥಾನಗಳಿಗೆ ಸ್ಪರ್ಧಿಸಿ, ಕೇವಲ 4 ಸ್ಥಾನಗಳನ್ನು ಗೆದ್ದು, ಶೇ 2.7 ರಷ್ಟು ಮತ ಗಳಿಸಿತ್ತು. ಆ ಸಮಯದಲ್ಲಿ ರೆಡ್ಡಿ ಮತ್ತು ಶ್ರೀರಾಮುಲು ಒಟ್ಟಾಗಿದ್ದರು. ಶ್ರೀರಾಮುಲು ಅವರ ವಾಲ್ಮೀಕಿ ಸಮಾಜದ ಭಾಗಶಃ ಬೆಂಬಲವಿತ್ತು. ಈಗ ಶ್ರೀರಾಮುಲು ಅವರೂ ಇಲ್ಲ, ವಾಲ್ಮೀಕಿ ಸಮಾಜವೂ ಬೆಂಬಲಕ್ಕಿಲ್ಲ. ರೆಡ್ಡಿ ಬಳಿ ಹಣವಿದೆ ಎನ್ನುವುದು ನಿರ್ವಿವಾದ. ಆದರೆ, ಹಣದಿಂದಲೇ ಎಲ್ಲವನ್ನೂ ಪಡೆಯಲಾಗದು ಎಂಬ ಮಾತೂ ಅಷ್ಟೇ ಸತ್ಯ.

ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಲ್ಲಿ 41 ವಿಧಾನಸಭಾ ಕ್ಷೇತ್ರಗಳಿವೆ. 2013ರ ಚುನಾವಣೆಯಲ್ಲಿ ಬಿಜೆಪಿ 19, ಕಾಂಗ್ರೆಸ್ 18, ಜೆಡಿಎಸ್ 4 ಕ್ಷೇತ್ರಗಳನ್ನು ಗೆದ್ದಿವೆ. ಸದ್ಯದ ರಾಜಕೀಯ ವಾತಾವರಣದಲ್ಲಿ ರೆಡ್ಡಿ ಯಾವ ಪಕ್ಷದ ಹಾದಿಗೆ ಮುಳುವಾಗಲಿದ್ದಾರೆ ಎಂಬ ತೀರ್ಮಾನಕ್ಕೆ ಇಷ್ಟು ಬೇಗ ಬರಲು ಸಾಧ್ಯವಿಲ್ಲ.

ಒಂದಂತೂ ಸತ್ಯ, ನಿಜವಾಗಿಯೂ ಇದು ರೆಡ್ಡಿಗೆ ಅಗ್ನಿ ಪರೀಕ್ಷೆಯ ಕಾಲ. ಇದುವರೆಗೆ ಅವರಿಗೆ 'ಬಹು ಪರಾಕ್' ಹಾಕುತ್ತಿದ್ದ ಬೆಂಬಲಿಗರು, ಹಿತೈಷಿಗಳು ಸಂದಿಗ್ಧ ಕಾಲದಲ್ಲಿ ಹಿಂಬಾಲಿಸುವರೇ ಎಂಬ ಪ್ರಶ್ನೆ ಕಾಡುತ್ತಿದೆ. ರೆಡ್ಡಿ ಅವರ ಸಹೋದರ ಬಳ್ಳಾರಿ ನಗರ ಬಿಜೆಪಿ ಶಾಸಕ ಸೋಮಶೇಖರ ರೆಡ್ಡಿಯವರೇ ಬಿಜೆಪಿಯಲ್ಲಿಯೇ ಇರುವುದಾಗಿ ಹೇಳುತ್ತಿದ್ದಾರೆ. ಉಳಿದವರು...?

'ರೆಡ್ಡಿ ಪಕ್ಷ ಪ್ರಭಾವ ಬೀರದು'



ಶ್ರೀರಾಮುಲು

ಬಳ್ಳಾರಿ: 'ಜನಾರ್ದನ ರೆಡ್ಡಿ ಅವರ ಹೊಸ ಪಕ್ಷ ಬಿಜೆಪಿ ಮೇಲೆ ಯಾವುದೇ ಪ್ರಭಾವ ಬೀರದು. ರೆಡ್ಡಿ ಪಕ್ಷ ಕಟ್ಟಿರುವುದರಿಂದ ಅವರ ಹಾದಿ ಅವರಿಗೆ, ನಮ್ಮ ಹಾದಿ ನಮಗೆ' ಎಂದು ಸಾರಿಗೆ ಸಚಿವ ಶ್ರೀರಾಮುಲು ಹೇಳಿದರು.

ಜನಾರ್ದನ ರೆಡ್ಡಿ ಪಕ್ಷ ಘೋಷಣೆ ಕುರಿತು ಬಳ್ಳಾರಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಭಾನುವಾರ ಮಾತನಾಡಿದರು

'ರೆಡ್ಡಿ ಬುದ್ಧಿವಂತರು ಹಾಗೂ ಅನುಭವಿ ರಾಜಕಾರಣಿ. ನನ್ನ ಸ್ನೇಹಿತರಾಗಿರುವ ರೆಡ್ಡಿ, ಬಿಜೆಪಿಗೆ ಶಕ್ತಿಯಾಗಿದ್ದರು, ಬಿಜೆಪಿಯೂ ಅವರಿಗೆ ಬೆಂಬಲವಾಗಿ ನಿಂತಿತ್ತು. ನನ್ನ ಬೆಳವಣಿಗೆಗೆ ಅವರು ಸಹಕಾರಿಯಾದಂತೆ ನಾನು ಸಹ ಅವರ ಪರವಾಗಿ ಬಂಡೆಯಂತೆ ನಿಂತಿದ್ದೆ' ಹೇಳಿದರು.

'ನಾನಂತೂ ಬಿಜೆಪಿಯಲ್ಲಿ ಇರುತ್ತೇನೆ. ಬೊಮ್ಮಾಯಿ ಅವರ ನೇತೃತ್ವದಲ್ಲಿ ಮುಂದಿನ ಚುನಾವಣೆ ಎದುರಿಸುತ್ತೇನೆ. ನಾನು ಪಕ್ಷದ ಶಿಸ್ತಿನ ಸಿಪಾಯಿ, ಕಾಲ ಬಂದಾಗ ಎಲ್ಲದಕ್ಕೂ ಉತ್ತರ ಕೊಡುತ್ತೇನೆ. ರಾಜಕೀಯ ಹೊರತುಪಡಿಸಿ ನಮ್ಮ ಸ್ನೇಹ ಮುಂದುವರಿಯಲಿದೆ' ಎಂದು ಸ್ಪಷ್ಟಪಡಿಸಿದರು.

ಪಕ್ಷ ಕಟ್ಟುವವರು ಹುಚ್ಚರಿರಬಾರದು: ಜೋಶಿ

ಧಾರವಾಡ: 'ಪಕ್ಷ ಕಟ್ಟುವುದಕ್ಕೆ, ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಸಂವಿಧಾನ ಅವಕಾಶ ನೀಡಿದೆ. ಆದರೆ, ಹಾಗೆ ಪಕ್ಷ ಕಟ್ಟುವವರು ಹಾಗೂ ಸ್ಪರ್ಧಿಸುವವರು ಹುಚ್ಚರಿರಬಾರದು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟಾಂಗ್ ಕೊಟ್ಟರು.

ಜನಾರ್ದನ ರೆಡ್ಡಿ ಹೊಸ ಪಕ್ಷ ಸ್ಥಾಪನೆ ಕುರಿತು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಅವರ ಹೊಸ ಪಕ್ಷ ಸ್ಥಾಪನೆಯಿಂದ ಬಿಜೆಪಿಗೇನೂ ನಷ್ಟವಿಲ್ಲ. ಬಿಜೆಪಿ ತತ್ವ ಸಿದ್ಧಾಂತಗಳ ಮೇಲೆ ಚುನಾವಣೆ ಎದುರಿಸುತ್ತದೆ. ರಾಜ್ಯದಲ್ಲಿ ಯಾವುದೇ ಪ್ರಾದೇಶಿಕ ಯಶಸ್ಸು ಕಂಡಿಲ್ಲ' ಎಂದರು.

ಒಳ್ಳೆಯ ಬೆಳವಣಿಗೆಯಲ್ಲ

ರೆಡ್ಡಿ ಹೊಸ ಪಕ್ಷ ಘೋಷಣೆ ಒಳ್ಳೆಯ ಬೆಳವಣಿಗೆಯಲ್ಲ. ಈ ವಿಚಾರ ವಾರದಿಂದ ಸುದ್ದಿಯಲ್ಲಿತ್ತು. ಅವರನ್ನು ಬಿಜೆಪಿಯಲ್ಲೇ ಉಳಿಸಿಕೊಳ್ಳಲು ಪ್ರಯತ್ನ ಮಾಡುತ್ತೇನೆ. ಯಾವ ಉದ್ದೇಶಕ್ಕೆ ಪಕ್ಷ ಸ್ಥಾಪಿಸಲು ಹೊರಟಿದ್ದಾರೆ ಗೊತ್ತಿಲ್ಲ.

ಜೆ.ಸಿ.ಮಾಧುಸ್ವಾಮಿ, ಸಚಿವ

ಬಿಜೆಪಿಯ ಪರವಾಗಿಯೇ ಇರಲಿದ್ದಾರೆ

ಜನಾರ್ದನ ರೆಡ್ಡಿ ಬಹಳ ವರ್ಷಗಳಿಂದ ಬಿಜೆಪಿಯಿಂದ ದೂರ ಇದ್ದರು. ಪಕ್ಷದಲ್ಲೇ ಉಳಿಯಲು ಹಲವಾರು ಬಾರಿ ನನ್ನ ಬಳಿ ಚರ್ಚೆ ಮಾಡಿದ್ದರು. ಈಗ ಹೊಸ ಪಕ್ಷ ಘೋಷಣೆ ಮಾಡಿದ್ದರೂ ಅವರು ಬಿಜೆಪಿ ಪರವಾಗಿಯೇ ಇರುತ್ತಾರೆ. ಮರಳಿ ಬಿಜೆಪಿಗೆ ಬರುತ್ತಾರೆ.

ಸಿ.ಪಿ. ಯೋಗೇಶ್ವರ್, ಎಂಎಲ್‌ಸಿ

ಹೊಸ ಪಕ್ಷ ಕಟ್ಟಿದರೆ ನಾನೇನು ಮಾಡಲಿ?

ಹರಪನಹಳ್ಳಿ (ವಿಜಯನಗರ ಜಿಲ್ಲೆ): 'ಅವರು ಹೊಸ ಪಕ್ಷ ಕಟ್ಟಿದರೆ ನಾನೇನು ಮಾಡಲಿ?'

–ಗಾಲಿ ಜನಾರ್ದನ ರೆಡ್ಡಿ ಅವರು 'ಕಲ್ಯಾಣ ರಾಜ್ಯ ಪ್ರಗತಿ ಪಕ್ಷ' ಸ್ಥಾಪಿಸುವುದಾಗಿ ಘೋಷಿಸಿದ ನಂತರ ಅವರ ಹಿರಿಯ ಸಹೋದರ, ಶಾಸಕ ಜಿ.ಕರುಣಾಕರ ರೆಡ್ಡಿ ಭಾನುವಾರ ಪ್ರತಿಕ್ರಿಯಿಸಿದ್ದು ಹೀಗೆ. 'ಜನಾರ್ದನ ರೆಡ್ಡಿ ಅವರ ಮನವೊಲಿಸಿ ಪುನಃ ಬಿಜೆಪಿಗೆ ಕರೆತರುವಿರಾ' ಎಂಬ ಪ್ರಶ್ನೆಗೆ, 'ಅದು ಪಕ್ಷದ ವರಿಷ್ಠರಿಗೆ ಬಿಟ್ಟ ವಿಚಾರ' ಎಂದಷ್ಟೇ ಹೇಳಿದರು.

ಬಿಜೆಪಿಗೆ ತೊಂದರೆ ಇಲ್ಲ

ಪ್ರಜಾಪ್ರಭುತ್ವದಲ್ಲಿ ಯಾರು ಬೇಕಾದರೂ ಪಕ್ಷ ಕಟ್ಟಬಹುದು. ಅದರಿಂದ ಬಿಜೆಪಿಗೆ ಯಾವುದೇ ತೊಂದರೆ ಆಗಲ್ಲ. ನಮ್ಮದು ಅತ್ಯಂತ ಬಲಿಷ್ಠ ಪಕ್ಷ.

ಮುನಿರತ್ನ, ಸಚಿವ

ಅನಿರೀಕ್ಷಿತ ಬೆಳವಣಿಗೆ

ರೆಡ್ಡಿ ಹೊಸ ಪಕ್ಷ ಕಟ್ಟಿರುವುದು ಅನಿರೀಕ್ಷಿತ ಬೆಳವಣಿಗೆ. ಈ ನಿರ್ಧಾರ ವಾಪಸ್ ಪಡೆಯಬೇಕು ಮತ್ತು ಬಿಜೆಪಿಯಲ್ಲಿಯೇ ಉಳಿದುಕೊಳ್ಳಬೇಕು. ಬಿಜೆಪಿ ಕಟ್ಟುವಲ್ಲಿ ಅವರು ಕಷ್ಟಪಟ್ಟಿದ್ದಾರೆ. ಭಿನ್ನಾಭಿಪ್ರಾಯ ನಿವಾರಿಸಿಕೊಳ್ಳಬಹುದು. ಪ್ರಾದೇಶಿಕ ಪಕ್ಷಗಳು ಯಶಸ್ವಿಯಾಗುವುದು ಕಷ್ಟ.

ಡಾ.ಕೆ.ಸುಧಾಕರ್

ಆರೋಗ್ಯ ಸಚಿವ



ಕಾಳಿಂಗ ನಾವಡ ಪ್ರಶಸ್ತಿ

ಕಲಾ ಕದಂಬ ಆರ್ಟ್ ಸೆಂಟರ್ ಬೆಂಗಳೂರಿನ ಉದಯಭಾನು ಕಲಾಸಂಘದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವತ, ಮದ್ದಳೆ ಹಾಗೂ ಚೆಂಡೆ ವಾದಕ ಬಿದ್ಕಲ್‌ಕಟ್ಟೆ ಕೃಷ್ಣಯ್ಯ ಆಚಾರ್ಯ ಅವರಿಗೆ 'ಕಾಳಿಂಗ ನಾವಡ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಕಲಾ ನಿರ್ದೇಶಕ ಶಶಿಧರ ಅಡಪ, ಸಂಗೀತ ನಿರ್ದೇಶಕ ಪ್ರವೀಣ್ ಡಿ. ರಾವ್, ದಕ್ಷಿಣ ಕನ್ನಡಿಗರ ಸಂಘದ ಅಧ್ಯಕ್ಷ ರಾಮಚಂದ್ರ ಉಪಾಧ್ಯ, ಡಾ. ಗಿರಿಧರ ಉಪಾಧ್ಯ, ಗುಂಡ್ಮಿ ಗಣಪಯ್ಯ ನಾವಡ, ಕಲಾ ಕದಂಬ ಆರ್ಟ್ ಸೆಂಟರ್ ನಿರ್ದೇಶಕ ರಾಧಾಕೃಷ್ಣ ಉರಾಳ ಹಾಗೂ ಕಲಾವಿದ ದೇವರಾಜ ಕರಬರ ಇದ್ದಾರೆ. ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ.

ಹೊಸ ಪಕ್ಷ ಘೋಷಿಸಿದ ಜನಾರ್ದನ ರೆಡ್ಡಿ

ಒಂದನೇ ಪುಟದಿಂದ...

'ಹಲವು ವರ್ಷಗಳ ಕಾಲ ಬಿಜೆಪಿಗಾಗಿ ರಾಜ್ಯದ ಉದ್ದಗಲಕ್ಕೆ ಸುತ್ತಾಡಿದ್ದೆ. ಮೊದಲ ಬಾರಿಗೆ ಜೆಡಿಎಸ್-ಬಿಜೆಪಿ ಸಮ್ಮಿಶ್ರ ಸರ್ಕಾರ ತರುವಲ್ಲಿ ನನ್ನ ಪಾತ್ರವೂ ಇತ್ತು. ಅಧಿಕಾರ ಹಸ್ತಾಂತರ ಮಾಡದ ಜೆಡಿಎಸ್ ವಿರುದ್ಧ ಹೋರಾಡಿ ಸ್ವತಂತ್ರವಾಗಿ ಬಿಜೆಪಿ ಸರ್ಕಾರ ತರುವಲ್ಲೂ ನನ್ನ ಶ್ರಮ ಇತ್ತು. ಆದರೆ, ನಾನು ಜೈಲಿಗೆ ಹೋದಾಗ ಯಾರೂ ಬೆಂಬಲಕ್ಕೆ ನಿಲ್ಲಲಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದ ಸಮಗ್ರ ಅಭಿವೃದ್ಧಿಯೇ ತಮ್ಮಗುರಿ. ಅದಕ್ಕೆ ಪೂರಕವಾಗಿ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ ಕೆಲಸ ಮಾಡಲಿದೆ. ಹೊಸ ರಾಜಕೀಯ ಪಕ್ಷ ಆರಂಭಿಸುತ್ತಿರುವುದರಿಂದ ಸರ್ಕಾರ ತಮ್ಮನ್ನು ಗುರಿಯಾಗಿಸಿ ಕೆಲಸ ಮಾಡಬಹುದು. ಆ ಬಗ್ಗೆ ಯೋಚಿಸುವುದಿಲ್ಲ ಎಂದು ರೆಡ್ಡಿ ಹೇಳಿದರು.

ಇತ್ತೀಚಿನ ಬೆಳವಣಿಗೆಗಳಿಂದ ಹಿತೈಷಿಗಳು, ಬೆಂಬಲಿಗರಿಗೆ ನೋವಾಗಿತ್ತು. ಇಂತಹ ಬೆಳವಣಿಗೆಗಳನ್ನು ಸಹಿಸಿಕೊಂಡು ಮುಂದುವರಿಯುವುದು ಬೇಡ ಎಂದು ಎಲ್ಲರೂ ಹೇಳಿದ್ದರು. ಸುಷ್ಮಾ ಸ್ವರಾಜ್ ಅವರಂತಹ ನಾಯಕಿಗಾಗಿ ದುಡಿದ ಕುಟುಂಬ ತಮ್ಮದು. ಈಗ ಸ್ವಂತ ಶಕ್ತಿಯ ಮೇಲೆ ವಿಶ್ವಾಸವಿದೆ. ಅದೇ ಕಾರಣಕ್ಕಾಗಿ ಪಕ್ಷ ಸ್ಥಾಪಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ಒತ್ತಡ ಹೇರುವುದಿಲ್ಲ: 'ಬಿ.ಶ್ರೀರಾಮುಲು ನಮ್ಮ ಸಹೋದರರನಿದ್ದಂತೆ. ಅವಕಾಶ ಸಿಕ್ಕ ಎಲ್ಲ ಸಂದರ್ಭಗಳಲ್ಲಿ ನನ್ನ ಬದಲಿಗೆ ಅವರಿಗೆ ಅಧಿಕಾರ ನೀಡುವಂತೆ ಪಕ್ಷದ ನಾಯಕರಲ್ಲಿ ಮನವಿ ಮಾಡಿದ್ದೆ. ಈಗಲೂ ನಮ್ಮ ಹೊಸ ಪಕ್ಷ ಸೇರುವಂತೆ ಒತ್ತಡ ಹೇರುವುದಿಲ್ಲ. ಅವರಿಗೆ ತೋಚಿದಂತೆ ನಿರ್ಧಾರ ಕೈಗೊಳ್ಳಲಿ' ಎಂದು ರೆಡ್ಡಿ ಹೇಳಿದರು.

'ಜನಾರ್ದನ ರೆಡ್ಡಿಗೂ ಬಿಜೆಪಿಗೂ ಸಂಬಂಧವಿಲ್ಲ ಎಂದು ಕೇಂದ್ರ ಗೃಹ ಗೃಹ ಸಚಿವ ಅಮಿತ್ ಶಾ ಹೇಳಿಕೆ ನೀಡಿದ್ದರು. ಅವರು ಏಕೆ ಹಾಗೆ ಹೇಳಿದ್ದರೋ ತಿಳಿಯಲಿಲ್ಲ? ಯಾರು ಹಾಗೆ ಹೇಳಿಸಿದ್ದರು ಎಂಬುದೂ ಗೊತ್ತಾಗಲಿಲ್ಲ. ಆದರೆ, ಆ ಹೇಳಿಕೆಯಿಂದ ತುಂಬಾ ನೋವಾಯಿತು. ಅದೇ ರೀತಿ ಬಿ.ಎಸ್. ಯಡಿಯೂರಪ್ಪ ಅವರಿಗೂ ಅನ್ಯಾಯವಾಗಿದೆ' ಎಂದು ಹೇಳಿದರು.

ಸಂಕಷ್ಟದ ದಿನಗಳಲ್ಲಿ ಕುಟುಂಬವನ್ನು ಮುನ್ನಡೆಸಿದ್ದ ಪತ್ನಿ ಲಕ್ಷ್ಮಿ ಅರುಣಾ ಈಗ ಹೊಸ ರಾಜಕೀಯ ಪಕ್ಷ ಮುನ್ನಡೆಸುವ ವಿಚಾರದಲ್ಲೂ ಮಹತ್ವದ ಪಾತ್ರ ನಿರ್ವಹಿಸುತ್ತಾರೆ. ಶೀಘ್ರದಲ್ಲೇ ಪಕ್ಷದ ಚಿಹ್ನೆ ಮತ್ತು ಬಾವುಟ ಅಂತಿಮಗೊಳಿಸಲಾಗುವುದು ಎಂದು ಹೇಳಿದರು.

ಕೆ–ಸೆಟ್ ಅಕ್ರಮ: ತಿಂಗಳಲ್ಲಿ ವರದಿ ಸಲ್ಲಿಕೆಗೆ ಸೂಚನೆ

ಮೈಸೂರು: ಮೈಸೂರು ವಿಶ್ವವಿದ್ಯಾಲಯದಲ್ಲಿ 2019ರಿಂದ 2021ನೇ ಸಾಲಿನಲ್ಲಿ 'ಕೆ-ಸೆಟ್' ಪರೀಕ್ಷೆ ವೇಳೆ ನಡೆದಿದೆ ಎನ್ನಲಾದ ಅಕ್ರಮದ ಕುರಿತು ತನಿಖೆ ಕೈಗೊಂಡು, ತಿಂಗಳಲ್ಲಿ ವರದಿ ಸಲ್ಲಿಸುವಂತೆ ಉನ್ನತ ಶಿಕ್ಷಣ ಇಲಾಖೆ ಸೂಚಿಸಿದೆ.

ವಿಶ್ವವಿದ್ಯಾಲಯದ ಕುಲಸಚಿವೆ ವಿ.ಆರ್. ಶೈಲಜಾ ಹಾಗೂ ಮುಖ್ಯ ಹಣಕಾಸು ಅಧಿಕಾರಿ ಡಾ.ಸಂಗೀತಾ ಗಜಾನನ ಭಟ್ ಸಮಿತಿಗೆ ತಿಂಗಳೊಳಗೆ ವರದಿ ಸಲ್ಲಿಸುವಂತೆ ಇಲಾಖೆ ಆದೇಶಿಸಿದೆ ಎಂದು ತಿಳಿದುಬಂದಿದೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕುಲಸಚಿವೆ ವಿ.ಆರ್. ಶೈಲಜಾ, 'ತನಿಖೆಗೆ ಸೂಚಿಸಿರುವ ಬಗ್ಗೆ ಗೊತ್ತಾಗಿದೆ. ಅಧಿವೇಶನದ ಕೆಲಸಕ್ಕಾಗಿ ಸದ್ಯ ಬೆಳಗಾವಿಯಲ್ಲಿದ್ದೇನೆ. ಮೈಸೂರಿಗೆ ಮರಳಿದ ಬಳಿಕ ಪರಿಶೀಲಿಸಿ, ಸರ್ಕಾರದ ಆದೇಶದಂತೆ ಕ್ರಮ ಕೈಗೊಳ್ಳಲಾಗುವುದು' ಎಂದರು.

ಕೆ-ಸೆಟ್‌ಪರೀಕ್ಷೆನಡೆಸುವಜವಾಬ್ದಾರಿಯನ್ನು ಮೈಸೂರು ವಿಶ್ವವಿದ್ಯಾಲಯದ ಬದಲಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ)ಕ್ಕೆ ವಹಿಸಿ ಸರ್ಕಾರ ಈಚೆಗೆ ಆದೇಶಿಸಿತ್ತು.

ಅತ್ಯಾಚಾರ: ಬಾಲಕ ವಶಕ್ಕೆ

ಚಿಂಚೋಳಿ (ಕಲಬುರಗಿ ಜಿಲ್ಲೆ): ಗ್ರಾಮವೊಂದರ ಮೂರೂವರೆ ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಬಾಲಕನೊಬ್ಬನನ್ನು ಭಾನುವಾರ ವಶಕ್ಕೆ ಪಡೆಯಲಾಗಿದೆ.

'ಪೋಕ್ಸೊ ಪ್ರಕರಣದಡಿ ಬಾಲಕನನ್ನು ಬಾಲ ನ್ಯಾಯಮಂಡಳಿ ಸುಪರ್ದಿಗೆ ನೀಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಅಗ್ನಿವೀರವಾಯು' ತರಬೇತಿಗೆ ಎಟಿಎಸ್ ಸನ್ನದ್ಧ

ಬೆಳಗಾವಿ: 'ಅಗ್ನಿಪಥ' ಯೋಜನೆಯಡಿ ಭಾರತೀಯ ವಾಯುಪಡೆಯಲ್ಲಿ 'ಅಗ್ನಿವೀರವಾಯು' ಹುದ್ದೆಗೆ ಆಯ್ಕೆಯಾದ ಮೊದಲ ತಂಡಕ್ಕೆ ತರಬೇತಿ ನೀಡಲು ಸಾಂಬ್ರಾದ ಏರ್‌ಮೆನ್ ತರಬೇತಿ ಶಾಲೆ (ಎಟಿಎಸ್) ಸನ್ನದ್ಧವಾಗಿದೆ.

'ಅಗ್ನಿವೀರವಾಯು' ಹುದ್ದೆಗೆ 7 ಲಕ್ಷಕ್ಕೂ ಅಧಿಕ ಮಂದಿ ಅರ್ಜಿ ಸಲ್ಲಿಸಿದ್ದರು. ಈ ಪೈಕಿ 2,850 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ಅವರಿಗೆ ಡಿ.30ರಿಂದ 6 ತಿಂಗಳು ತರಬೇತಿ ಪ್ರಕ್ರಿಯೆ ಆರಂಭವಾಗಲಿದೆ. ಭಾನುವಾರ ಬೆಳಿಗ್ಗೆ ಇಲ್ಲಿಗೆ ಬಂದಿಳಿದ ವಿವಿಧ ರಾಜ್ಯಗಳ 800 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡರು. 29ರ ವರೆಗೆ ಉಳಿದ ಅಭ್ಯರ್ಥಿಗಳು ಬರಲಿದ್ದಾರೆ.

6 ತಿಂಗಳ ನಂತರ ಮಹಿಳಾ ಅಭ್ಯರ್ಥಿಗಳಿಗೂ ಇದೇ ಮಾದರಿ ತರಬೇತಿ ಕೊಡಲು ಯೋಜಿಸಿದ್ದಾರೆ.

ಟ್ರೇಡ್ ಬೇಸ್ಡ್ ತರಬೇತಿ: '250 ಬೋಧಕರು ಜನರಲ್ ಸರ್ವೀಸ್ ನಾಲೆಡ್ಜ್ ಮತ್ತು ಟ್ರೇಡ್ ರಿಲೇಟೆಡ್ ತರಬೇತಿ ನೀಡಲಿದ್ದಾರೆ. ನಂತರ, 4 ವರ್ಷಗಳ ಸೇವೆಗೆ ಅಭ್ಯರ್ಥಿಗಳು ಹಾಜರಾಗಲಿದ್ದಾರೆ. ಆ ಪೈಕಿ ಉತ್ತಮ ಪ್ರದರ್ಶನ ತೋರಿದ ಶೇ 25 ಮಂದಿ ವಾಯುಪಡೆಯಲ್ಲೇ ಸೇವೆ ಮುಂದುವರಿಸಲಿದ್ದಾರೆ' ಎಂದು ಏರ್ ಕಮೊಡೋರ್ ಎಸ್.ಶ್ರೀಧರ್ ಸುದ್ದಿಗಾರರಿಗೆ ತಿಳಿಸಿದರು.

ಕೆಂಪಣ್ಣಗೆ ಜಾಮೀನು: ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವ ಮುನಿರತ್ನ ಶೇ 40ರಷ್ಟು ಕಮಿಷನ್ ಪಡೆದಿದ್ದಾರೆ' ಎಂಬುದಾಗಿ ಆರೋಪಿಸಿ ಮಾನಹಾನಿ ಮಾಡಿದ್ದಾರೆಂಬ ಮೊಕದ್ದಮೆಗೆ ಸಂಬಂಧಪಟ್ಟಂತೆ ಬಂಧಿಸಲಾಗಿದ್ದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಸೇರಿ ನಾಲ್ವರನ್ನು ಷರತ್ತುಬದ್ಧ ಜಾಮೀನಿನ ಮೇಲೆ ಶನಿವಾರ ರಾತ್ರಿ ಬಿಡುಗಡೆ ಮಾಡಲಾಗಿದೆ.

'ಕೆಂಪಣ್ಣ, ಸಂಘದ ಉಪಾಧ್ಯಕ್ಷ ವಿ. ಕೃಷ್ಣ ರೆಡ್ಡಿ, ಖಜಾಂಚಿ ಎಚ್.ಎಸ್. ನಟರಾಜ್, ಗುರುಸಿದ್ದಪ್ಪ ಸೇರಿದಂತೆ 19 ಮಂದಿ ನನ್ನ ವಿರುದ್ಧ ಸುಳ್ಳು ಆರೋಪ ಮಾಡಿ ಮಾನಹಾನಿ ಮಾಡಿದ್ದಾರೆ' ಎಂಬುದಾಗಿ ತೋಟಗಾರಿಕೆ ಸಚಿವ ಮುನಿರತ್ನ ಅವರು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು. ಕೆಂಪಣ್ಣ ಸೇರಿ 19 ಮಂದಿಗೆ ವಿಚಾರಣೆಗೆ ಹಾಜರಾಗುವಂತೆ ನ್ಯಾಯಾಲಯ ನೋಟಿಸ್ ಜಾರಿ ಮಾಡಿತ್ತು. ಯಾರೊಬ್ಬರೂ ವಿಚಾರಣೆಗೆ ಹಾಜರಾಗಿರಲಿಲ್ಲ. ಹೀಗಾಗಿ, ನ್ಯಾಯಾಲಯ ಜಾಮೀನುರಹಿತ ವಾರಂಟ್ ಹೊರಡಿಸಿತ್ತು.

ಮುನಿರತ್ನ ವಾಸವಿರುವ ಮನೆ ವ್ಯಾಪ್ತಿಯ ವೈಯಾಲಿಕಾವಲ್ ಠಾಣೆ ಪೊಲೀಸರಿಗೆ ವಾರಂಟ್ ಜಾರಿ ಜವಾಬ್ದಾರಿ ವಹಿಸಲಾಗಿತ್ತು. ಶೋಧ ನಡೆಸಿದ ಪೊಲೀಸರು, ಕೆಂಪಣ್ಣ, ಕೃಷ್ಣರೆಡ್ಡಿ, ನಟರಾಜ್ ಹಾಗೂ ಗುರುಸಿದ್ದಪ್ಪ ಅವರನ್ನು ಶನಿವಾರ ಬಂಧಿಸಿದ್ದರು. ಕೋರಮಂಗಲದಲ್ಲಿರುವ ನ್ಯಾಯಾಧೀಶರ ಮನೆಗೆ ಹಾಜರುಪಡಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು, ವಕಾಲತ್ತು ಸಲ್ಲಿಸಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ನಾಲ್ವರಿಗೂ ಜಾಮೀನು ಮಂಜೂರು ಮಾಡಿದರು.

'ಉದ್ದೇಶಪೂರ್ವಕ ಬಂಧನ: ಕೋರ್ಟ್‌ಗೆ ದಾಖಲೆ ಸಲ್ಲಿಕೆ'

'ವಿಚಾರಣೆಗೆ ಸಂಬಂಧಪಟ್ಟಂತೆ ಜಾರಿಯಾಗಿದ್ದ ನೋಟಿಸ್‌ಅನ್ನು ಕಚೇರಿಯಲ್ಲಿ ಕೊಟ್ಟು ಸಿಬ್ಬಂದಿಯಿಂದ ಸಹಿ ಪಡೆದುಕೊಂಡು ಹೋಗಿದ್ದರು. ವೈಯಕ್ತಿಕವಾಗಿ ಯಾವುದೇ ನೋಟಿಸ್ ತಲುಪಿಸಿರಲಿಲ್ಲ. ನಾನು ಹಾಗೂ ಇತರರು ಬೇರೆ ಊರಿನಲ್ಲಿದ್ದ ಕಾರಣ, ನೋಟಿಸ್ ಗಮನಕ್ಕೆ ಬಂದಿರಲಿಲ್ಲ' ಎಂದು ಕೆಂಪಣ್ಣ ತಿಳಿಸಿದರು.

'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, 'ನನ್ನನ್ನು ಜೈಲಿಗೆ ಕಳುಹಿಸಬೇಕೆಂಬ ಉದ್ದೇಶದಿಂದಲೇ ತರಾತುರಿಯಲ್ಲಿ ನನ್ನನ್ನು ಬಂಧಿಸಲಾಯಿತು. ಶನಿವಾರ ಹಾಗೂ ಭಾನುವಾರ ನ್ಯಾಯಾಲಯ ರಜೆ ಇದ್ದಿದ್ದರಿಂದ, ನಾನು ಜೈಲಿಗೆ ಹೋಗಬಹುದೆಂದು ತಿಳಿದುಕೊಂಡಿದ್ದರು. ನ್ಯಾಯಾಧೀಶರ ಎದುರು ವಕೀಲರ ಮೂಲಕ ಮನವಿ ಮಾಡಿಕೊಂಡೆವು. ಅದನ್ನು ಮಾನ್ಯ ಮಾಡಿ ಜಾಮೀನು ನೀಡಿದ್ದಾರೆ' ಎಂದು ಹೇಳಿದರು.

'ಸಚಿವರ ಮೊಕದ್ದಮೆಗೆ ಪ್ರತಿವಾದಿಯಾಗಿ ಈಗಾಗಲೇ ವಕಾಲತ್ತು ಸಲ್ಲಿಸಿದ್ದೇವೆ. ಆರೋಪಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಮುಂದಿನ ವಿಚಾರಣೆ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಿದ್ದೇವೆ. ಕಮಿಷನ್ ವಿರುದ್ಧ ಕಾನೂನು ಹೋರಾಟ ಆರಂಭವಾಗಿದೆ' ಎಂದು ತಿಳಿಸಿದರು.

ದಾಖಲೆ ಕೊಡದಿದ್ದರೆ ಶಿಕ್ಷೆ ಖಚಿತ: ಸಚಿವ ಮುನಿರತ್ನ

ಮಾಲೂರು (ಕೋಲಾರ ಜಿಲ್ಲೆ): 'ಕಮಿಷನ್ ಆರೋಪ ಮಾಡಿರುವ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರು ನ್ಯಾಯಾಲಯಕ್ಕೆ ದಾಖಲೆ ಕೊಡದಿದ್ದರೆ ಮುಂದಿನ ದಿನಗಳಲ್ಲಿ ಕಷ್ಟವಾಗಲಿದೆ, ಎರಡು ವರ್ಷ ಶಿಕ್ಷೆಯಾಗುತ್ತದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಮುನಿರತ್ನ ಎಚ್ಚರಿಕೆ ನೀಡಿದ್ದಾರೆ.

'ದಾಖಲೆ ಒದಗಿಸದ ಕಾರಣ ಅವರಿಗೆ ನ್ಯಾಯಾಲಯದಿಂದ ಸಮನ್ಸ್ ಬಂತು. ಸಮನ್ಸ್ ನಂತರವೂ ದಾಖಲೆ ಕೊಡದ ಕಾರಣ ವಾರಂಟ್ ಬಂತು. ಆರೋಪ ಮಾಡುವುದು ಸುಲಭ, ಅದನ್ನು ಜೀರ್ಣಿಸಿಕೊಳ್ಳುವ ಶಕ್ತಿಯೂ ಇರಬೇಕು. ಕಾನೂನು ಚೌಕಟ್ಟಿನಲ್ಲಿ ಏನು ಕ್ರಮ ಕೈಗೊಳ್ಳಬೇಕು ಅದೆಲ್ಲಾ ಮಾಡುವೆ' ಎಂದರು.

'ಶೇ 40ರಷ್ಟು ಕಮಿಷನ್ ಯಾರು ಕೇಳಿದ್ದಾರೆ? ರಾಜರಾಜೇಶ್ವರಿ ಕ್ಷೇತ್ರದಲ್ಲಿ ₹10 ಸಾವಿರ ಕೋಟಿ ಎಲ್ಲಿ ಖರ್ಚು ಆಗಿದೆ ತೋರಿಸಬೇಕು. ದಾಖಲೆ ತೋರಿಸುವವರೆಗೂ ನಾನು ಬಿಡುವುದಿಲ್ಲ. ಆದಷ್ಟು ಬೇಗ ಈ ಪ್ರಕರಣ ಮುಗಿಸಲು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸುವೆ' ಎಂದರು. 'ಕೆಂಪಣ್ಣ ಅವರು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಮಾತು ಕೇಳುತ್ತಾರೆ. ಹೀಗಾಗಿ, ಎಲ್ಲಾ ದಾಖಲೆ ಕೊಟ್ಟು ಅಧಿವೇಶನದಲ್ಲಿ ಧ್ವನಿ ಎತ್ತಲು ಅವರಿಗೆ ಹೇಳಲಿ' ಎಂದು ಸವಾಲು ಹಾಕಿದರು.

ಮೀಸಲಾತಿ ನೀಡುವುದಾಗಿ ಸಿ.ಎಂ ತಾಯಿ ಆಣೆ: ಯತ್ನಾಳ

ವಿಜಯಪುರ: 'ಮುಖ್ಯಮಂತ್ರಿ ಬೊಮ್ಮಾಯಿ ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ನೀಡುವುದಾಗಿ ತಾಯಿ ಆಣೆ ಮಾಡಿದ್ದಾರೆ. ಒಂದು ವೇಳೆ ಅವರು ವಚನಭ್ರಷ್ಟರಾದರೆ ಈ ಹಿಂದೆ ಬಿಜೆಪಿಗೆ ಅಧಿಕಾರ ನೀಡುವುದಾಗಿ ಹೇಳಿ ವಚನಭ್ರಷ್ಟರಾದ ಎಚ್.ಡಿ. ಕುಮಾರಸ್ವಾಮಿಗೆ ಆದ ಗತಿಯೇ ಇವರಿಗೂ ಆಗಲಿದೆ' ಎಂದು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಎಚ್ಚರಿಕೆ ನೀಡಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಡಿ.29ರಂದು ಮೀಸಲಾತಿ ಘೋಷಿಸುವ ವಿಶ್ವಾಸ ಇದೆ. ಬೇರೆ ಸಮಾಜಗಳು ಮೀಸಲಾತಿ ಕೇಳುತ್ತಿರುವುದಕ್ಕೆ ನಮ್ಮ ಅಭ್ಯಂತರವಿಲ್ಲ' ಎಂದರು.

Kempegowda INTERNATIONAL AIRPORT BENGALURU

ಪ್ರಸ್ತಾವಣೆ ಕೋರಿದ ಸಂಸ್ಥೆಯ ಹೆಸರು ಮತ್ತು ವಿಳಾಸ: **ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್** ಅಡ್ಮಿನಿಸ್ಟ್ರೇಶನ್ ಬ್ಲಾಕ್, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ದೇವನಹಳ್ಳಿ, ಬೆಂಗಳೂರು–560 300 ವೆಬ್‌ಸೈಟ್: www.bengaluruairport.com

ಆಸಕ್ತಿ ವ್ಯಕ್ತಪಡಿಸುವಿಕೆ (ಇಒಐ) ಪ್ರಕಟಣೆ

ಕ್ರ. ಸಂ.	ಪ್ಯಾಕೇಜ್ ಟೈಟಲ್	ಕಾಮಗಾರಿ ಸ್ವರೂಪದ ಸಂಕ್ಷಿಪ್ತ ವಿವರ
1	ಜನರಲ್ ಏವಿಯೇಶನ್ ಸರ್ವೀಸಸ್: ಬಿಐಎಎಲ್/ಇಒಐ/17	ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು ಇಲ್ಲಿನ "ಜನರಲ್ ಏವಿಯೇಶನ್‌ಗೆ ಫಿಕ್ಸೆಡ್ ಬೇಸ್ ಆಪರೇಟರ್‌ಗಾಗಿ ಸೇವಾ ಪೂರೈಕೆದಾರರ ಪೂರ್ವಾರ್ಹತೆ".

ಪೂರ್ವಾರ್ಹತೆ ಮಾನಂಡ ಹಾಗ ಇನ್ನಿತರ ಮಾಹಿತಿ: ಸದರಿ ಬಿಐಎಎಲ್ ವೆಬ್‌ಸೈಟ್‌ನಲ್ಲಿ ಲಭ್ಯ (http://www.bengaluruairport.com/ourBusiness/tender.jspx)
ದಿನಾಂಕ 26 ಡಿಸೆಂಬರ್, 2022 ರಂದು ಬೆಳಗ್ಗೆ 0900 ಗಂಟೆಯಿಂದ https://commercial.bialtenders.com/ ವೆಬ್‌ಸೈಟ್‌ನಲ್ಲಿ ಅರ್ಜಿದಾರರು ಇಒಐ ದಸ್ತಾವೇಜುಗಳನ್ನು ವೀಕ್ಷಿಸಬಹುದು/ ಡೌನ್‌ಲೋಡ್ ಮಾಡಿಕೊಳ್ಳಬಹುದು. ದಿನಾಂಕ 30 ಜನವರಿ, 2023 ರಂದು 2359 ಗಂಟೆಯೊಳಗೆ ಆನ್‌ಲೈನ್ ಮುಖಾಂತರ ಪೂರಕ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವ ಮೂಲಕ ಸದರಿ ಇಒಐ'ಗೆ ತಮ್ಮ ಪ್ರತಿಕ್ರಿಯೆಗಳನ್ನು ಸಲ್ಲಿಸಬಹುದು.
ಸೂಚನೆ: ಸದರಿ ಇಒಐ'ಗೆ ಯಾವುದೇ ತಿದ್ದುಪಡಿ/ಮಾರ್ಪಾಡು ಉಂಟಾದಲ್ಲಿ ಅಂತಹುದನ್ನು https://commercial.bialtenders.com/ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ. ಆಸಕ್ತಿಯುಳ್ಳ ಅರ್ಜಿದಾರರು ತಮ್ಮ ಆಸಕ್ತಿಯನ್ನು corpbid@bialairport.com ಮುಖಾಂತರ ಸಲ್ಲಿಸುವುದು ಮತ್ತು ಇನ್ನಿತರ ವಿಚಾರಣೆಗಳಿಗಾಗಿ **ಮುಖ್ಯಸ್ಥರು–ಖರೀದಿ ಮತ್ತು ಗುತ್ತಿಗೆಗಳು** ಇವರನ್ನು ಸಂಪರ್ಕಿಸುವುದು.

ಭಕ್ತರ ಬೆನ್ನ ಮೇಲೆ ದಲಿತ ಪೂಜಾರಿ ನಡಿಗೆ



ಹರಪನಹಳ್ಳಿ ತಾಲ್ಲೂಕಿನ ಅರಸೀಕೆರೆ ಗ್ರಾಮದಲ್ಲಿ ಭಾನುವಾರ ನಡೆದ ದಂಡಿನ ದುರ್ಗಮ್ಮ ಕಾರ್ತಿಕೋತ್ಸವದಲ್ಲಿ ದಲಿತ ಪೂಜಾರಿಗಳ ಪಾದಸ್ಪರ್ಶಕ್ಕಾಗಿ ಬೋರಲಾಗಿ ಮಲಗಿದ ಭಕ್ತರು

ಪ್ರಜಾವಾಣಿ ವಾರ್ತೆ

ಅರಸೀಕೆರೆ (ವಿಜಯನಗರ ಜಿಲ್ಲೆ): ಜಾತಿ, ಲಿಂಗಭೇದವಿಲ್ಲದೆ ಭಕ್ತರು ಇಲ್ಲಿ ಸಾಲು ಸಾಲಾಗಿ ಬೋರಲಾಗಿ ಮಲಗಿದ್ದರು. ದೇವರ ಕೇಲು (ಪೂಜಾ ಸಾಮಗ್ರಿ ಉಳ್ಳ ಮಡಿಕೆ) ಹೊತ್ತ ದಲಿತ ಪೂಜಾರಿ ಭಕ್ತರ ಬೆನ್ನ ಮೇಲೆ ಹೆಜ್ಜೆ ಹಾಕುತ್ತಿದ್ದ. ಪಾದಸ್ಪರ್ಶ ಪಡೆದ ಭಕ್ತರ ಮೊಗದಲ್ಲಿ ಕೃತಜ್ಞತಾ ಭಾವ ಕಾಣುತ್ತಿತ್ತು.

ಹರಪನಹಳ್ಳಿ ತಾಲ್ಲೂಕಿನ ಅರಸೀಕೆರೆ ಗ್ರಾಮದಲ್ಲಿ ದಂಡಿನ ದುರ್ಗಮ್ಮದೇವಿ ಕಡೆ ಕಾರ್ತಿಕೋತ್ಸವದ ಅಂಗವಾಗಿ ನಡೆದ ಜಾತ್ರೆಯ ಕೊನೆ ದಿನವಾದ ಭಾನುವಾರ ಮುಂಜಾನೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಈ ದೃಶ್ಯ ಕಂಡುಬಂತು.

ಬೆಳಗಿನ ಜಾವ 5ರ ಸುಮಾರಿಗೆ ದೇಗುಲದಿಂದ ದಂಡಿನ ದುರ್ಗಮ್ಮ ದೇವಿ ಉತ್ಸವ ಮೂರ್ತಿಯನ್ನು 1.5 ಕಿ.ಮೀ. ದೂರವಿರುವ ಹೊಂಡಕ್ಕೆ ಭಜನೆ, ಮಂಗಳವಾದ್ಯಗಳೊಂದಿಗೆ ಗಂಗಾ ಪೂಜೆಗೆ ದುಗ್ಗಮ್ಮನ ಕಟ್ಟೆಗೆ ಕರೆದೊಯ್ದರು. ಪೂಜೆ ಮುಗಿಸಿ ದೇವಿಯ ಕೇಲು ಹೊತ್ತ ಇಬ್ಬರು ಪೂಜಾರಿಗಳು ದಾರಿಯುದ್ದಕ್ಕೂ ಮಲಗಿದ್ದ ಭಕ್ತರ ಮೈಮೇಲೆ ನಡೆಯುತ್ತಾ ಸಾಗಿದರು. ದೇಗುಲದವರೆಗೂ ಪೂಜಾರಿಯ ಪಾದ ನೆಲಕ್ಕೆ ಸೋಕದಂತೆ ಭಕ್ತರು ಮಲಗಿದ್ದರು.

ಜಾತ್ರೋತ್ಸವಕ್ಕೆ ಬರುವ ಭಕ್ತರು ಹರಕೆ ರೂಪದಲ್ಲಿ ನೀಡುವ ಅಕ್ಕಿ, ಹಾಲು, ಮೊಸರು ಬಳಸಿ, ಪ್ರಸಾದ ತಯಾರಿಸಲಾಯಿತು. ದೇವಸ್ಥಾನದ ಆವರಣದಲ್ಲಿ ದುರ್ಗಿಯರ ಊಟ ಎನ್ನುವ ಹೆಸರಿನಲ್ಲಿ ಎಲ್ಲಾ ಸಮುದಾಯವರು ಸಹಪಂಕ್ತಿಯಲ್ಲಿ ಪ್ರಸಾದ ಸೇವಿಸಿದರು.

12ರಿಂದ ರಾಷ್ಟ್ರೀಯ ಯುವಜನೋತ್ಸವ: ಪ್ರಧಾನಿ ಚಾಲನೆ

ಧಾರವಾಡ: 'ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ಜ.12ರಿಂದ 16ರ ವರೆಗೆ ರಾಷ್ಟ್ರೀಯ ಯುವಜನೋತ್ಸವ ನಗರದಲ್ಲಿ ಆಯೋಜಿಸಲಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಲಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

'ದೇಶದ ವಿವಿಧೆಡೆಯಿಂದ ಸುಮಾರು 7,500 ಪ್ರತಿನಿಧಿಗಳು, ಆಯಾ ರಾಜ್ಯಗಳ ಸಾಂಸ್ಕೃತಿಕ ರಾಯಭಾರಿಗಳು ಉತ್ಸವದಲ್ಲಿ ಭಾಗವಹಿಸಲಿದ್ದಾರೆ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಯುವಜನೋತ್ಸವಕ್ಕೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ತಲಾ ₹10 ಕೋಟಿ ಅನುದಾನ ನೀಡಿವೆ. ಕರ್ನಾಟಕ ಕಲಾ ಕಾಲೇಜು ಮೈದಾನದಲ್ಲಿ ಸಂಜೆ 6ರಿಂದ 9ರವರೆಗೆ ವಿವಿಧ ರೀತಿಯ ಸಾಂಸ್ಕೃತಿಕ, ಮನರಂಜನಾ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಲಾಗಿದೆ' ಎಂದು ಜೋಶಿ ತಿಳಿಸಿದರು.

ಸಂಪುಟ ವಿಸ್ತರಣೆ, ಮೀಸಲಾತಿ ಬಗ್ಗೆ ವರಿಷ್ಠರ ಜತೆ ಚರ್ಚೆ

ಸಿ.ಎಂ ಬೊಮ್ಮಾಯಿ ಇಂದು ದೆಹಲಿಗೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮೈಸೂರಿನಲ್ಲಿ ರಾಷ್ಟ್ರೀಯ ಕಾರ್ಯಕಾರಿಣಿಗೆ ರಾಜ್ಯ ನಾಯಕರ ಒಲವು
- ಸಂಪುಟ ವಿಸ್ತರಣೆ ಸಾಧ್ಯತೆ ಕಡಿಮೆ

ಬೆಳಗಾವಿ: ಸಚಿವ ಸಂಪುಟ ವಿಸ್ತರಣೆ, ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದ ಬೇಡಿಕೆಗಳು ಮತ್ತು ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ನಡೆಸುವ ಸಂಬಂಧ ವರಿಷ್ಠರ ಜತೆ ಚರ್ಚೆ ನಡೆಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಸಂಜೆ ದೆಹಲಿಗೆ ತೆರಳಲಿದ್ದಾರೆ.

ಮಂಗಳವಾರ ಪಕ್ಷದ ವರಿಷ್ಠರ ಸಭೆಯಲ್ಲಿ ಭಾಗವಹಿಸಿ, ಮಧ್ಯಾಹ್ನದ ಬಳಿಕ ಅವರು ರಾಜ್ಯಕ್ಕೆ ವಾಪಸಾಗಲಿದ್ದಾರೆ.

ದೆಹಲಿಯಲ್ಲಿ ನಡೆಯುವ ಸಭೆಯಲ್ಲಿ ರಾಷ್ಟ್ರೀಯ ಕಾರ್ಯಕಾರಿಣಿ ಬಗ್ಗೆ ಚರ್ಚೆ ನಡೆಯಲಿದೆ. ಇದೇ ಸಂದರ್ಭದಲ್ಲಿ ಬೊಮ್ಮಾಯಿ ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಗೃಹ ಸಚಿವ ಅಮಿತ್ ಶಾ ಜತೆ ಸಚಿವ ಸಂಪುಟ ವಿಸ್ತರಣೆ ಮತ್ತು ಮೀಸಲಾತಿ ವಿಷಯದ ಬಗ್ಗೆಯೂ ಸಮಾಲೋಚನೆ ನಡೆಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯನ್ನು ಬೆಂಗಳೂರು ಅಥವಾ ಮೈಸೂರಿನಲ್ಲಿ ನಡೆಸುವ ವಿಚಾರ ಸಭೆಯಲ್ಲಿ ಚರ್ಚೆಗೆ ಬರಬಹುದು. ಮಧ್ಯಪ್ರದೇಶ ಅಥವಾ ಕರ್ನಾಟಕದಲ್ಲಿ ರಾಷ್ಟ್ರೀಯ ಕಾರ್ಯಕಾರಿಣಿ ನಡೆಸುವ ಇಂಗಿತ ಪಕ್ಷದ ವರಿಷ್ಠರದು. ಕರ್ನಾಟಕ ಮತ್ತು ಮಧ್ಯಪ್ರದೇಶ ಎರಡೂ ರಾಜ್ಯಗಳ ಬಿಜೆಪಿ ಘಟಕಗಳು ತಮ್ಮ ರಾಜ್ಯದಲ್ಲಿ ಕಾರ್ಯಕಾರಿಣಿ ನಡೆಸಲು ಕೋರಿಕೆ ಸಲ್ಲಿಸಿವೆ ಎಂದು ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಮುಂದಿನ ಏಪ್ರಿಲ್‌ನಲ್ಲಿ ಚುನಾವಣೆ ನಡೆಯುವುದರಿಂದ ಬೆಂಗಳೂರು ಅಥವಾ ಮೈಸೂರಿನಲ್ಲಿ ಕಾರ್ಯಕಾರಿಣಿ ನಡೆಸಲು ಬಿಜೆಪಿ ವರಿಷ್ಠರು ಉತ್ಸಾಹ ಹೊಂದಿದ್ದಾರೆ. ಈ ಸಂಬಂಧ ಸಿದ್ಧತೆ ನಡೆಸಿಕೊಳ್ಳುವಂತೆ ಬೊಮ್ಮಾಯಿ ಅವರಿಗೆ ವರಿಷ್ಠರು ಸೂಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಮೈಸೂರಿನಲ್ಲಿ ರಾಷ್ಟ್ರೀಯ ಕಾರ್ಯಕಾರಿಣಿ ಮಾಡಿದರೆ, ಹಳೆ ಮೈಸೂರು ಭಾಗದಲ್ಲಿ ಪಕ್ಷದ ಪ್ರಭಾವವನ್ನು ವಿಸ್ತರಿಸಲು ಸಾಧ್ಯವಾಗುತ್ತದೆ. ಅಲ್ಲದೇ, ದಕ್ಷಿಣ ಭಾರತದಲ್ಲಿ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯಕಾರಿಣಿ ನೆರವಾಗಲಿದೆ ಎಂಬ ಅಭಿಪ್ರಾಯವೂ ಕೇಳಿ ಬಂದಿದೆ.

ಸಂಪುಟ ವಿಸ್ತರಣೆ: ಸಚಿವ ಸಂಪುಟ ವಿಸ್ತರಣೆಗೆ ಸಂಬಂಧಿಸಿದಂತೆ ಪಕ್ಷದಲ್ಲಿ ಆಂತರಿಕವಾಗಿ ಬಹಳ ಒತ್ತಡ ಇದ್ದರೂ ವಿಸ್ತರಣೆ ಸಾಧ್ಯತೆ ತೀರಾ ಕಡಿಮೆ ಎಂಬ ಅಭಿಪ್ರಾಯವೂ ಕೇಳಿ ಬಂದಿದೆ. ಸಂಪುಟ ವಿಸ್ತರಣೆ ಮಾಡಿದರೆ ತಮಗೂ ಸಚಿವ ಸ್ಥಾನ ನೀಡಲೇಬೇಕು ಎಂದು ರಮೇಶ ಜಾರಕಿಹೊಳಿ ಮತ್ತು ಕೆ.ಎಸ್. ಈಶ್ವರಪ್ಪ ಒತ್ತಡ ಹೇರಿದ್ದಾರೆ.

ರಮೇಶ ಜಾರಕಿಹೊಳಿ ತಮ್ಮ ವಿರುದ್ಧದ ಪ್ರಕರಣದಲ್ಲಿ 'ಕ್ಲೀನ್ ಚಿಟ್' ಪಡೆದಿದ್ದರೂ, ಅವರಿಗೆ ಸಚಿವ ಸ್ಥಾನ ನೀಡುವ ಬಗ್ಗೆ ವರಿಷ್ಠರು ಒಲವು ಹೊಂದಿಲ್ಲ. ಒಂದು ವೇಳೆ ಸಚಿವ ಸ್ಥಾನ ನೀಡಿದರೆ, ಕಾಂಗ್ರೆಸ್ ಅದನ್ನೇ ಅಸ್ತ್ರವಾಗಿ ಪ್ರಯೋಗಿಸಲಿದ್ದು, ಅದರಿಂದ ಪಕ್ಷಕ್ಕೆ ಚುನಾವಣೆಯಲ್ಲಿ ಭಾರಿ ಹಿನ್ನಡೆಯಾಗುವ ಸಾಧ್ಯತೆ ಇದೆ. ಹೀಗಾಗಿ ಸಂಪುಟ ವಿಸ್ತರಣೆ ಪ್ರಕ್ರಿಯೆ ನಡೆಸುವ ಸಾಧ್ಯತೆಯೇ ಇಲ್ಲ ಎಂದು ಮೂಲಗಳು ಹೇಳಿವೆ.

ಚುನಾವಣೆ ಹೊಸ್ತಿನಲ್ಲಿರುವಾಗ ಸಂಪುಟ ವಿಸ್ತರಣೆ ಜೇನುಗೂಡಿಗೆ ಕಲ್ಲು ಹಾಕಿದಂತಾಗುತ್ತದೆ. ಅದರಿಂದ ಉಂಟಾಗುವ ಅಡ್ಡ ಪರಿಣಾಮಗಳನ್ನು ನಿಭಾಯಿಸುವುದು ಕಷ್ಟವಾಗಬಹುದು ಎಂಬ ಚರ್ಚೆಯೂ ನಡೆದಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ))

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ(ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ(ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	ಪೂರ್ವ–1	ಬೆಂಜಮಂ/ಕಾನಿಅ(ಪೂರ್ವ)–1/ಪಿಬಿ/2250/2022–23 ದಿನಾಂಕ: 19.12.2022	ರೂ. 17,75,833/– / ರೂ. 44,400/–	09.01.2023ರ ಸಂಜೆ 4:00 ಗಂಟೆಯವರೆಗೆ	11.01.2023ರ ಸಂಜೆ 5:00 ಗಂಟೆಯ ನಂತರ
2		ಬೆಂಜಮಂ/ಕಾನಿಅ(ಪೂರ್ವ)–1/ಪಿಬಿ/2250/2022–23 ದಿನಾಂಕ: 19.12.2022 (ಪರಿಶಿಷ್ಟ ಜಾತಿ ಪ್ರವರ್ಗಕ್ಕೆ ಮೀಸಲು)	ರೂ. 29,75,558/– / ರೂ. 29,760/–		
3		ಬೆಂಜಮಂ/ಕಾನಿಅ(ಪೂರ್ವ)–1/ಪಿಬಿ/2252/2022–23 ದಿನಾಂಕ: 19.12.2022	ರೂ. 30,13,059/– / ರೂ. 60,265/–		
4		ಬೆಂಜಮಂ/ಕಾನಿಅ(ಪೂರ್ವ)–1/ಪಿಬಿ/2285/2022–23 ದಿನಾಂಕ: 22.12.2022	ರೂ. 66,81,853/– / ರೂ. 1,33,640/–		
5		ಬೆಂಜಮಂ/ಕಾನಿಅ(ಪೂರ್ವ)–1/ಪಿಬಿ/2285/2022–23 ದಿನಾಂಕ: 22.12.2022	ರೂ. 56,91,754/– / ರೂ. 1,13,840/–		
6		ಬೆಂಜಮಂ/ಕಾನಿಅ(ಪೂರ್ವ)–1/ಪಿಬಿ/2285/2022–23 ದಿನಾಂಕ: 22.12.2022	ರೂ. 64,10,493/– / ರೂ. 1,28,210/–		
7		ಬೆಂಜಮಂ/ಕಾನಿಅ(ಪೂರ್ವ)–1/ಪಿಬಿ/2285/2022–23 ದಿನಾಂಕ: 22.12.2022	ರೂ. 63,78,982/– / ರೂ. 1,27,580/–		
8		ಬೆಂಜಮಂ/ಕಾನಿಅ(ಪೂರ್ವ)–1/ಪಿಬಿ/2285/2022–23 ದಿನಾಂಕ: 22.12.2022	ರೂ. 69,29,883/– / ರೂ. 1,38,600/–		
9		ಬೆಂಜಮಂ/ಕಾನಿಅ(ಪೂರ್ವ)–1/ಪಿಬಿ/2287/2022–23 ದಿನಾಂಕ: 22.12.2022(2ನೇ ಕರೆ)	ರೂ. 20,15,818/– / ರೂ. 50,000/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ಪೂರ್ವ)–1.

ಮುಖ್ಯ ಅಭಿಯಂತರರ ಕಚೇರಿ(ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ(ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
10	ಕೇಂದ್ರ	ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/2578/2022–23 ದಿನಾಂಕ: 22.12.2022	ರೂ. 3,73,465/– / ರೂ. 9,400/–	09.01.2023ರ ಸಂಜೆ 5:00 ಗಂಟೆಯವರೆಗೆ	10.01.2023ರ ಸಂಜೆ 5:01 ಗಂಟೆಯ ನಂತರ
11		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/2580/2022–23 ದಿನಾಂಕ: 22.12.2022	ರೂ. 4,73,844/– / ರೂ. 11,900/–		
12		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/2582/2022–23 ದಿನಾಂಕ: 22.12.2022	ರೂ. 3,72,460/– / ರೂ. 9,400/–		
13		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/2584/2022–23 ದಿನಾಂಕ: 22.12.2022	ರೂ. 7,74,028/– / ರೂ. 19,400/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ಕೇಂದ್ರ).

ಮುಖ್ಯ ಅಭಿಯಂತರರ ಕಚೇರಿ(ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ(ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
14	ದಕ್ಷಿಣ ಪಶ್ಚಿಮ–1	ಬೆಂಜಮಂ/ಕಾನಿಅ(ದಕ್ಷಿಣ ಪಶ್ಚಿಮ–1)/ತಾಂಅ/ಪಿಬಿ/1252/2022–23 ದಿನಾಂಕ: 23.12.2022	ರೂ. 15,85,421/– / ರೂ. 39,700/–	10.01.2023ರ ಸಂಜೆ 4:00 ಗಂಟೆಯವರೆಗೆ	12.01.2023ರ ಸಂಜೆ 3:00 ಗಂಟೆಯ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ದಕ್ಷಿಣ ಪಶ್ಚಿಮ–1).

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ(ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
15	ದಕ್ಷಿಣ–2	ಬೆಂಜಮಂ/ಕಾನಿಅ(ದಕ್ಷಿಣ–2)/ಪಿಬಿ/578/2022–23 ದಿನಾಂಕ: 16.12.2022	ರೂ. 31,95,526/– / ರೂ. 64,000/–	04.01.2023ರ ಸಂಜೆ 4:00 ಗಂಟೆಯವರೆಗೆ	06.01.2023ರ ಸಂಜೆ 4:00 ಗಂಟೆಯ ನಂತರ
16		ಬೆಂಜಮಂ/ಕಾನಿಅ(ದಕ್ಷಿಣ–2)/ಸಅ/580/2022–23 ದಿನಾಂಕ: 16.12.2022	ರೂ. 16,37,610/– / ರೂ. 41,000/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ದಕ್ಷಿಣ–2).

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಹೆಚ್ಚಿನ ವಿವರಗಳನ್ನು https://eproc.karnataka.gov.inಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ವಾ.ಪ್ರ/ರೆ.ಅ/3704/2022–23

ಚೀನಾದಿಂದ ಬಂದ ಆಗ್ರಾ ವ್ಯಕ್ತಿಗೆ ಕೋವಿಡ್ ದೃಢ

ಆಗ್ರಾ (ಪಿಟಿಐ): 'ಎರಡು ದಿನಗಳ ಹಿಂದೆಯಷ್ಟೇ ಚೀನಾದಿಂದ ಭಾರತಕ್ಕೆ ಮರಳಿರುವ ಆಗ್ರಾದ 40 ವರ್ಷದ ವ್ಯಕ್ತಿಯೊಬ್ಬರಿಗೆ ಕೋವಿಡ್– 19 ಇರುವುದು ಪರೀಕ್ಷೆಯಿಂದ ದೃಢಪಟ್ಟಿದ್ದು, ಅವರನ್ನು ಅವರ ಮನೆಯಲ್ಲಿಯೇ ಪ್ರತ್ಯೇಕವಾಗಿರಿಸಲಾಗಿದೆ' ಎಂದು ಇಲ್ಲಿನ ಮುಖ್ಯ ವೈದ್ಯಾಧಿಕಾರಿ ಅರುಣ್ ಶ್ರೀವಾಸ್ತವ ಭಾನುವಾರ ತಿಳಿಸಿದ್ದಾರೆ.

'ಅವರ ಕೋವಿಡ್ ಮಾದರಿಯನ್ನು ವೈರಾಣು ಸಂರಚನಾ ವಿಶ್ಲೇಷಣೆಗೆ ಕಳುಹಿಸಲಾಗಿದೆ. ಸೋಂಕಿತ ವ್ಯಕ್ತಿಯ ಸಂಪರ್ಕಕ್ಕೆ ಬಂದ ಕುಟುಂಬ ಸದಸ್ಯರು ಮತ್ತು ಇತರರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸುವಂತೆ ಆರೋಗ್ಯ ಇಲಾಖೆಯ ತಂಡಗಳಿಗೆ ಸೂಚಿಸಲಾಗಿದೆ' ಎಂದೂ ಅವರು ಹೇಳಿದ್ದಾರೆ.

'ವ್ಯಕ್ತಿಯು ಡಿ. 23ರಂದು ಚೀನಾದಿಂದ ದೆಹಲಿಯ ಮೂಲಕ ಆಗ್ರಾಕ್ಕೆ ಹಿಂತಿರುಗಿದ್ದು, ಬಳಿಕ ಖಾಸಗಿ ಪ್ರಯೋಗಾಲಯದಲ್ಲಿ ಕೋವಿಡ್ ಪರೀಕ್ಷೆ ಮಾಡಿಸಿದ್ದರು. ವರದಿಯಲ್ಲಿ ಅವರಿಗೆ ಕೋವಿಡ್ ಇರುವುದು ದೃಢಪಟ್ಟಿದೆ' ಎಂದು ಅರುಣ್ ಮಾಹಿತಿ ನೀಡಿದ್ದಾರೆ.

ನವೆಂಬರ್ 25ರ ನಂತರ ಆಗ್ರಾದಲ್ಲಿ ಪತ್ತೆಯಾದ ಮೊದಲ ಕೋವಿಡ್ ಪ್ರಕರಣ ಇದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಭಾರತದಲ್ಲಿ ಸಮುದಾಯ ಮಟ್ಟದಲ್ಲಿ ರೋಗನಿರೋಧಕ ಶಕ್ತಿ ವೃದ್ಧಿ'

ಹೈದರಾಬಾದ್ (ಪಿಟಿಐ): 'ಕೋವಿಡ್‌ಗೆ ಸಂಬಂಧಿಸಿ ಭಾರತದಲ್ಲಿ ಸಮುದಾಯ ಮಟ್ಟದಲ್ಲಿ ರೋಗನಿರೋಧಕ ಶಕ್ತಿ ವೃದ್ಧಿಯಾಗಿದೆ. ಹೀಗಾಗಿ, ಚೀನಾದಲ್ಲಿ ಈಗ ಆತಂಕಕ್ಕೆ ಕಾರಣವಾಗಿರುವ ವೈರಸ್‌ನ ಬಿಎಫ್.7 ಉಪತಳಿಯ ಸೋಂಕು ಭಾರತದಲ್ಲಿ ಗಂಭೀರ ಸ್ವರೂಪದ್ದಾಗಿರುವುದಿಲ್ಲ' ಎಂದು ವಿಜ್ಞಾನಿಗಳು ಹೇಳಿದ್ದಾರೆ.

'ಕೊರೊನಾ ವೈರಸ್‌ನ ಎಲ್ಲ ರೂಪಾಂತರಿ ತಳಿಗಳು ವ್ಯಕ್ತಿಯ ದೇಹದಲ್ಲಿನ ರೋಗನಿರೋಧಕ ಶಕ್ತಿಯಿಂದ ತಪ್ಪಿಸಿಕೊಳ್ಳುವ ಸಾಮರ್ಥ್ಯ ಹೊಂದಿರುತ್ತವೆ. ಲಸಿಕೆ ಪಡೆದವರಲ್ಲಿ ಹಾಗೂ ಈ ಮೊದಲು ಓಮೈಕ್ರಾನ್ ಸೋಂಕಿಗೆ ಒಳಗಾದವರಲ್ಲೂ ಮತ್ತೊಮ್ಮೆ ಸೋಂಕು ಕಾಣಿಸುವಂತೆ ಮಾಡುತ್ತವೆ' ಎಂದು ಸಿಎಸ್‌ಐಆರ್‌ನ ಅಂಗಸಂಸ್ಥೆ ಸೆಂಟರ್ ಫಾರ್ ಸೆಲ್ಯುಲಾರ್ ಅಂಡ್ ಮಾಲೆಕ್ಯುಲಾರ್ ಬಯೋಲಜಿಯ ನಿರ್ದೇಶಕ ವಿನಯ್.ಕೆ.ನಂದಿಕೂರಿ ಹೇಳಿದ್ದಾರೆ.

ವರ್ಷದ ಕೊನೆಯ 'ಮನ್ ಕಿ ಬಾತ್'ನಲ್ಲಿ ದೇಶದ ಹಲವು ಸಾಧನೆಗಳ ಬಣ್ಣನೆ

ಹೆಚ್ಚು ಜಾಗರೂಕರಾಗಲು ಜನತೆಗೆ ಮೋದಿ ಸಲಹೆ



ನವದೆಹಲಿ: 'ಕೊರೊನಾ ವೈರಸ್‌ನ ಸೋಂಕು ಅನೇಕ ರಾಷ್ಟ್ರಗಳಲ್ಲಿ ಹರಡುತ್ತಿದೆ. ಹೀಗಾಗಿ ಜನರು ಕೋವಿಡ್–19ಗೆ ಸಂಬಂಧಿಸಿ ಹೆಚ್ಚು ಜಾಗರೂಕತೆ ವಹಿಸಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ಈ ವರ್ಷದ ಕೊನೆಯ 'ಮನ್ ಕಿ ಬಾತ್'ನಲ್ಲಿ ಈ ವಿಷಯ ಕುರಿತು ಮಾತನಾಡಿದ ಅವರು, 'ಕ್ರಿಸಮಸ್, ಹೊಸ ವರ್ಷಾಚರಣೆ ಅಥವಾ ರಜಾಕಾಲದ ಅಂಗವಾಗಿ ಸಾಕಷ್ಟು ಜನರು ಪ್ರವಾಸಕ್ಕೆ ತೆರಳುತ್ತಾರೆ. ಈ ಸಂದರ್ಭದಲ್ಲಿ ಮಾಸ್ಕ್ ಧರಿಸುವುದು, ಕೈಗಳನ್ನು ತೊಳೆದುಕೊಳ್ಳುವುದು ಸೇರಿದಂತೆಕೋವಿಡ್‌ಗೆಸಂಬಂಧಿಸಿದಮಾರ್ಗಸೂಚಿಗಳನ್ನು ಪಾಲಿಸಬೇಕು' ಎಂದರು.

'ಸ್ಫೂರ್ತಿದಾಯಕ ವರ್ಷ': ಇನ್ನು ಕೆಲವೇ ದಿನಗಳಲ್ಲಿ ಕೊನೆಗೊಳ್ಳುತ್ತಿರುವ 2022, ಭಾರತದ ಪಾಲಿಗೆ ಅನೇಕ ವಿಷಯಗಳಲ್ಲಿ ಸ್ಫೂರ್ತಿದಾಯಕವಾಗಿತ್ತು ಎಂದು ಮೋದಿ ಹೇಳಿದರು.

'ದೇಶವು ಐದನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. 220 ಕೋಟಿಗೂ ಅಧಿಕ ಡೋಸ್‌ಗಳಷ್ಟು ಕೋವಿಡ್ ಲಸಿಕೆ ನೀಡುವ ಮೂಲಕ ಅಗಾಧ ಸಾಧನೆ ಮಾಡಿದೆ' ಎಂದರು.

'ರಫ್ತು ಕ್ಷೇತ್ರದಲ್ಲಿನ ಸಾಧನೆಯೂ ದೊಡ್ಡದು. 400 ಶತಕೋಟಿ ಡಾಲರ್ ಮೌಲ್ಯದಷ್ಟು ರಫ್ತು ವ್ಯವಹಾರ ಮಾಡಲಾಗಿದೆ. ಬಾಹ್ಯಾಕಾಶ, ರಕ್ಷಣೆ, ಡ್ರೋನ್ ಕ್ಷೇತ್ರಗಳಲ್ಲಿ ಸಹ ಭಾರತ ಅದ್ಭುತ ಸಾಧನೆ ಮಾಡಿದೆ' ಎಂದರು.

'ಪಾರಂಪರಿಕ ಚಿಕಿತ್ಸಾ ಪದ್ಧತಿ ಸಾಮರ್ಥ್ಯಕ್ಕೆ ಮನ್ನಣೆ'

'ದೇಶದ ಪಾರಂಪರಿಕ ವೈದ್ಯ ಹಾಗೂ ಚಿಕಿತ್ಸಾ ಪದ್ಧತಿಯ ಸಾಮರ್ಥ್ಯಕ್ಕೆ ಮನ್ನಣೆ ದೊರೆತಿದೆ. 2022ರಲ್ಲಿ ನಡೆದ ಹಲವಾರು ಸಂಶೋಧನೆಗಳು, ಸಾಧನೆಗಳಿಂದಾಗಿ ಭಾರತ ಹೊಸ ಎತ್ತರಕ್ಕೆ ಏರಿದಂತಾಗಿದೆ' ಎಂದು ಮೋದಿ 'ಮನ್ ಕಿ ಬಾತ್'ನಲ್ಲಿ ಹೇಳಿದರು.

'ಯೋಗ ಮತ್ತು ಆಯುರ್ವೇದ ಚಿಕಿತ್ಸಾ ಪದ್ಧತಿ ಪರಿಣಾಮಕಾರಿ. ಆಧುನಿಕ ಔಷಧಗಳಂತೆಯೇ ಇವುಗಳ ಪರಿಣಾಮಕಾರಿತ್ವ ಕೂಡ ಪರೀಕ್ಷಾ–ಪ್ರಯೋಗಗಳ ಮೂಲಕ ಸಾಬೀತಾಗಿದೆ' ಎಂದರು.

'ಟಾಟಾ ಮೆಮೋರಿಯಲ್ ಸೆಂಟರ್, ಆಯುರ್ವೇದ ಹಾಗೂ ಯೋಗ ಪದ್ಧತಿಯ ಸಾಮರ್ಥ್ಯವನ್ನು ಒರೆಗಲ್ಲಿಗೆ ಹಚ್ಚಿತ್ತು. ಪುರಾವೆಗಳ ಸಮೇತ ಈ ಪದ್ಧತಿಗಳ ಸಾಮರ್ಥ್ಯವನ್ನು ಪುರಸ್ಕರಿಸಿದೆ' ಎಂದರು.

'ಸ್ತನ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಯೋಗ ಪರಿಣಾಮಕಾರಿ ಎಂಬುದು ಸಂಸ್ಥೆ ನಡೆಸಿದ ಸಂಶೋಧನೆಯಿಂದ ತಿಳಿದುಬಂದಿದೆ. ಸಂಶೋಧನೆಯ ಫಲಿತಾಂಶಗಳನ್ನು ಯುರೋಪಿಯನ್ ಸೊಸೈಟಿ ಆಫ್ ಮೆಡಿಕಲ್ ಆಂಕಾಲಜಿ ಸಮಾವೇಶದಲ್ಲಿ ಸಂಸ್ಥೆಯು ಪ್ರಸ್ತುತಪಡಿಸಿದೆ' ಎಂದು ಹೇಳಿದರು.

'ಸ್ವಾವಲಂಬನೆಗೆ ಭಾರತ ಒತ್ತು ನೀಡಿದೆ. ದೇಶೀಯವಾಗಿಯೇ ನಿರ್ಮಿಸಲಾದ, ಯುದ್ಧವಿಮಾನ ವಾಹಕ ನೌಕೆ ಐಎನ್‌ಎಸ್ ವಿಕ್ರಾಂತ್ ಅನ್ನು ನೌಕಾಪಡೆಗೆ ಸೇರ್ಪಡೆ ಮಾಡಲಾಯಿತು.

ಕ್ರೀಡಾ ಕ್ಷೇತ್ರದಲ್ಲಿ ಭಾರತದ ಸಾಧನೆ ಅನನ್ಯ. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಅಥವಾ ಮಹಿಳಾ ಹಾಕಿ ತಂಡದ ಸಾಧನೆ ಉಲ್ಲೇಖಾರ್ಹ' ಎಂದರು.

'ಗುಜರಾತ್‌ನಲ್ಲಿ ಮಾಧವಪುರ ಮೇಳಾ, ವಾರಾಣಸಿಯಲ್ಲಿ ಕಾಶಿ–ತಮಿಳು ಸಂಗಮಮ್ ನಂತಹ ಕಾರ್ಯಕ್ರಮಗಳು 'ಏಕ ಭಾರತ–ಶ್ರೇಷ್ಠ ಭಾರತ'ದ ಪರಿಕಲ್ಪನೆಗೆ ಹೊಸ ಶಕ್ತಿಗೆ ತುಂಬಿದವು' ಎಂದು ಮೋದಿ ವಿವರಿಸಿದರು.

ಸುದ್ದಿ 2 ನಿಮಿಷ

ಜಮ್ಮು–ಕಾಶ್ಮೀರ: ಗಡಿ ಬಳಿ ರಕ್ಷಣಾ ಮೂಲಸೌಕರ್ಯಗಳ ಆಧುನೀಕರಣ

ನವದೆಹಲಿ (ಪಿಟಿಐ): ಪಾಕಿಸ್ತಾನಕ್ಕೆ ಹೊಂದಿಕೊಂಡಿರುವ ಅಂತರರಾಷ್ಟ್ರೀಯ ಗಡಿ ಬಳಿ ರಕ್ಷಣಾ ಮೂಲಸೌಕರ್ಯಗಳನ್ನು ಆಧುನೀಕರಣಗೊಳಿಸುವ ಕಾರ್ಯವನ್ನು ಭದ್ರತಾಪಡೆಗಳು ಕೈಗೆತ್ತಿಕೊಂಡಿವೆ.

2021ರಲ್ಲಿ ಉಭಯ ದೇಶಗಳು ಕದನ ವಿರಾಮ ಘೋಷಣೆ ಮಾಡಿದ ನಂತರ, ಭಾರತವು ಈಗ ರಕ್ಷಣಾ ಮೂಲಸೌಕರ್ಯಗಳಿಗೆ ಹೊಸರೂಪ ನೀಡುವುದಕ್ಕೆ ಮುಂದಾಗಿದೆ.

ಸೇನಾ ಟ್ಯಾಂಕ್‌ಗಳ ಸುಗಮ ಸಂಚಾರಕ್ಕೆ ಅನುಕೂಲವಾಗುಂತೆ ಇಳಿಜಾರುಗಳನ್ನು ನಿರ್ಮಿಸಲಾಗಿದೆ, ಬಿಎಸ್‌ಎಫ್‌ನ ಬಂಕರ್‌ಗಳನ್ನು ಸದೃಢಗೊಳಿಸಲಾಗಿದೆ. ಜಮ್ಮು ಪ್ರದೇಶದಲ್ಲಿ ಗಡಿಗುಂಟ 26 ಕಿ.ಮೀ. ಉದ್ದಕ್ಕೂ ಮೂಲಸೌಕರ್ಯಗಳ ನವೀಕರಣ ಕಾಮಗಾರಿ ಈಗಾಗಲೇ ಪೂರ್ಣಗೊಂಡಿದೆ. ಇದೇ ಭಾಗದಲ್ಲಿ ಇನ್ನೂ 33 ಕಿ.ಮೀ.ಉದ್ದಕ್ಕೂ ನವೀಕರಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ಮೂಲಗಳು ಪಿಟಿಐಗೆ ತಿಳಿಸಿವೆ.

ಗಡಿ ಬೇಲಿಗಳ ನಿರ್ವಹಣೆ, ಕಣ್ಗಾವಲು ವ್ಯವಸ್ಥೆ ಸ್ಥಾಪಿಸಿರುವ ಸ್ಥಳಗಳನ್ನು ಮೇಲ್ದರ್ಜೆಗೇರಿಸುವಂತಹ ಕಾಮಗಾರಿಗಳನ್ನು ಸಹ ಕೈಗೊಳ್ಳಲಾಗಿದೆ ಎಂದು ತಿಳಿಸಿವೆ.

ಬಾರಾಮುಲ್ಲಾದಲ್ಲಿ ಅಪಾರ ಶಸ್ತ್ರಾಸ್ತ್ರ, ಯುದ್ಧಸಾಮಗ್ರಿ ವಶ



ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಬಾರಾಮುಲ್ಲಾ ಹಾಗೂ ಉರಿ ಸೆಕ್ಟರ್‌ನ ಗಡಿನಿಯಂತ್ರಣ ರೇಖೆ (ಎಲ್‌ಒಸಿ) ಬಳಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಹಾಗೂ ಯುದ್ಧ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸೇನಾಧಿಕಾರಿ ತಿಳಿಸಿದ್ದಾರೆ.

ಎಕೆ–74 ರೈಫಲ್‌ಗಳು, ಪಾಕಿಸ್ತಾನದಲ್ಲಿ ತಯಾರಿಸಲಾದ ಗ್ರೆನೇಡ್‌ಗಳು, 'ಐ ಲವ್ ಪಾಕಿಸ್ತಾನ' ಎಂಬ ಬರಹಗಳಿರುವ ಬಲೂನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

'ದೇಶದ ಗಡಿಯೊಳಗೆ ಉಗ್ರರ ನುಸುಳುವಿಕೆ ಹಾಗೂ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲಾಗುತ್ತಿರುವ ಬಗ್ಗೆ ಕಳೆದ ಎರಡು ವಾರಗಳ ಕಾಲ ಗುಪ್ತಚರ ಸಂಸ್ಥೆಗಳು ಮಾಹಿತಿ ನೀಡಿದ್ದವು. ಈ ಚಟುವಟಿಕೆಗಳ ಪತ್ತೆಗಾಗಿ, ಎಲ್‌ಒಸಿಗುಂಟ ಶೋಧ ಕಾರ್ಯಾಚರಣೆ ಆರಂಭಿಸಲಾಗಿತ್ತು' ಎಂದು ಮೇಜರ್ ಜನರಲ್ ಅಜಯ್ ಚಾಂದಪುರಿಯಾ ಹೇಳಿದ್ದಾರೆ.

'ಹಥ್‌ಲಂಗಾ ಪ್ರದೇಶದಲ್ಲಿ ಶುಕ್ರವಾರ ಎಂಟು ಗಂಟೆಗಳ ಕಾಲ ಶೋಧ ಕಾರ್ಯಾಚರಣೆ ನಡೆಸಿ, ಈ ಶಸ್ತ್ರಾಸ್ತ್ರ ಹಾಗೂ ಇತರ ಯುದ್ಧಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಯಿತು' ಎಂದು ಅವರು ತಿಳಿಸಿದ್ದಾರೆ.

'ಕಾವೆಂಶ್ರೀ' ಕಲಾಸೇವೆ ಮೆಚ್ಚಿದ ಮೋದಿ

ಪ್ರಜಾವಾಣಿ ವಾರ್ತೆ



ಕಾವೆಂಶ್ರೀ

ಗದಗ: ಪ್ರಧಾನಿ ನರೇಂದ್ರ ಮೋದಿ ಅವರು ಡಿ.25ರ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ನಗರದ 'ಕಲಾಚೇತನ' ಸಂಸ್ಥೆಯ ಕಾವೆಂಶ್ರೀ ಅವರ ಕಲಾಸೇವೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಕರ್ನಾಟಕದ ಕಲೆ ಮತ್ತು ಸಂಸ್ಕೃತಿ ಪುನರುಜ್ಜೀವನಗೊಳಿಸುವಲ್ಲಿ ಕಾಳಮಂಜಿ ವೆಂಕಟಗಿರಿಯಪ್ಪ ಶ್ರೀನಿವಾಸ (ಕಾವೆಂಶ್ರೀ) 25 ವರ್ಷಗಳಿಂದ ಪಟ್ಟುಬಿಡದ ರೀತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ಕಲಾಪೋಷಣೆ ತಪಸ್ಸಿನಂತೆ ಮುಂದುವರಿಯುತ್ತಿದೆ' ಎಂದು ಮೋದಿ ಅವರು ಹೇಳಿದ್ದಾರೆ.

'ಕಾವೆಂಶ್ರೀ ಆರಂಭದಲ್ಲಿ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಬಳಿಕ ಹೋಟೆಲ್ ಉದ್ಯಮಿಯಾಗಿ 'ಕಲಾಚೇತನ' ಸಂಸ್ಥೆ ಹುಟ್ಟುಹಾಕಿದರು. ಅಂದಿನಿಂದಲೂ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಕಲಾವಿದರ ಕಾರ್ಯಕ್ರಮಗಳನ್ನು ಆಯೋಜಿಸಿ ಕರ್ನಾಟಕದ ಸಂಸ್ಕೃತಿ ಮತ್ತು ಮತ್ತು ಕಲಾಪರಂಪರೆ ಪೋಷಿಸುವ ಬದ್ಧತೆ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಕಲಾಚೇತನ ಅಕಾಡೆಮಿ ಕೆಲಸವನ್ನು 'ಮನ್ ಕಿ ಬಾತ್'ನಲ್ಲಿ ಪ್ರಸ್ತಾಪಿಸಿದ್ದು ಹಾಗೂ ನಮ್ಮ ಕೆಲಸವನ್ನು ಇಡೀ ದೇಶವೇ ಗುರುತಿಸುವಂತೆ ಮಾಡಿದ್ದು ಸಂಸ್ಥೆಗೆ ಸಿಕ್ಕ ಗೌರವವೆಂದೇ ಭಾವಿಸಿದ್ದೇವೆ. ಇದರಿಂದ ನಮ್ಮ ಜವಾಬ್ದಾರಿ ಹೆಚ್ಚಾಗಿದೆ' ಎಂದು ಕಾವೆಂಶ್ರೀ ಸಂತಸ ವ್ಯಕ್ತಪಡಿಸಿದ್ದಾರೆ.

ಮಾಜಿ ಪ್ರಧಾನಿ ವಾಜಪೇಯಿ ಜನ್ಮದಿನ ಅಂಗವಾಗಿ 'ಸುಶಾಸನ ದಿನ'

10 ಸಾವಿರ ಯುವಕರಿಗೆ ಉದ್ಯೋಗಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಪ್ರಧಾನಿ ವಾಜಪೇಯಿ ಜನ್ಮದಿನ 'ಸುಶಾಸನ ದಿನ'ದ ಭಾಗವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 10 ಸಾವಿರ ಯುವಕರಿಗೆ ಉದ್ಯೋಗ ಪತ್ರ ವಿತರಿಸಿದರು.

ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ ಅಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಗಳು ಸಂಯುಕ್ತವಾಗಿ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಬಸವರಾಜ ಬೊಮ್ಮಾಯಿ ಸಾಂಕೇತಿಕವಾಗಿ ಎಂಟು ಅಭ್ಯರ್ಥಿಗಳಿಗೆ ಉದ್ಯೋಗಾದೇಶಗಳನ್ನು ನೀಡಿದರು.

'ಕರ್ನಾಟಕವನ್ನು ಬಿಟ್ಟರೆ ಬೇರ್‍ಯಾವ ರಾಜ್ಯದಲ್ಲೂ ಉದ್ಯೋಗ ನೀತಿ ಇಲ್ಲ. ಇದಕ್ಕೆ ಪೂರಕವಾಗಿ ಸಂಶೋಧನೆ ಮತ್ತು ಅಭಿವೃದ್ಧಿ ನೀತಿಯನ್ನೂ ತರಲಾಗಿದೆ. ಸ್ಥಳೀಯರಿಗೆ ಉದ್ಯೋಗ ಸಿಗಬೇಕೆನ್ನುವುದು ಗುರಿಯಾಗಿದ್ದು, ನೇಮಕಾತಿಗೆ ತಕ್ಕ ಪ್ರೋತ್ಸಾಹ ಕೊಡಲಾಗುತ್ತಿದೆ. 'ಸ್ವಾಮಿ ವಿವೇಕಾನಂದ ಯೋಜನೆ' ಮೂಲಕ ಗ್ರಾಮೀಣ ಭಾಗಗಳ 5 ಲಕ್ಷ ಯುವಜನರಿಗೆ ಉದ್ಯೋಗ ಕೊಡಲಾಗುವುದು' ಎಂದರು.

ರಾಜ್ಯ ಕೌಶಲ ಅಭಿವೃದ್ಧಿ ಇಲಾಖೆಯ ಈ ಉಪಕ್ರಮದಡಿ, ಮಾಸಿಕ ಕನಿಷ್ಠ ₹18 ಸಾವಿರದಿಂದ ಗರಿಷ್ಠ ₹45 ಸಾವಿರ ವೇತನದವರೆಗಿನ ಉದ್ಯೋಗ ಲಭ್ಯವಾಗಿದೆ. ಎಂಜಿನಿಯರಿಂಗ್, ಬಿ.ಎಸ್ಸಿ, ಬಿ.ಕಾಂ., ನರ್ಸಿಂಗ್, ಡಿಪ್ಲೊಮಾ, ಪಾಲಿಟೆಕ್ನಿಕ್ ಪದವೀಧರರಿದ್ದಾರೆ ಎಂದರು.

ಐಟಿ-ಬಿಟಿ ಮತ್ತು ಕೌಶಲ ಅಭಿವೃದ್ಧಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, 'ಈ ವರ್ಷದಿಂದ ಬೆಂಗಳೂರು ವಿವಿ ವ್ಯಾಪ್ತಿಯಲ್ಲಿ ವೃತ್ತಿ ತರಬೇತಿ ಪದವಿಯನ್ನು (ಬಿ.ವೋಕ್) ಪ್ರಾರಂಭಿಸಲಾಗುವುದು. ಇದಕ್ಕಾಗಿ ಜಿಟಿಟಿಸಿ ಮತ್ತು ವಿವಿ ನಡುವೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಇದರ ಮೂಲಕ 'ಸರ್ವರಿಗೂ ಉದ್ಯೋಗ' ನೀತಿಯ ಸಾಕಾರ ಮಾಡಲಾಗುವುದು' ಎಂದು ಹೇಳಿದರು.

ಉನ್ನತ ಶಿಕ್ಷಣ ಇಲಾಖೆಯ ಬೋಧಕೇತರ ಸಿಬ್ಬಂದಿ ಕುಂದುಕೊರತೆ ನಿವಾರಣೆಗೆ ರೂಪಿಸಿರುವ 'ಶಿಕ್ಷಣ ಸ್ಪಂದನ' ಉಪಕ್ರಮ ಮತ್ತು ಜಿಟಿಟಿಸಿ ಪುನಾರಚನೆ ವರದಿಗಳನ್ನು ಬಿಡುಗಡೆ ಮಾಡಲಾಯಿತು.

ಕೌಶಲ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್ ಸೆಲ್ವಕುಮಾರ್, ರಾಜ್ಯ ಕೌಶಲ ಅಭಿವೃದ್ಧಿ ನಿಗಮದ ಎಂ.ಡಿ ಅಶ್ವಿನ್ ಗೌಡ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ, ಜೀವನೋಪಾಯ ಮಿಷನ್ ವ್ಯವಸ್ಥಾಪಕ ನಿರ್ದೇಶಕಿ ರಾಗಪ್ರಿಯಾ, ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಆಯುಕ್ತೆ ಜ್ಯೋತಿ ಇದ್ದರು.



ಬೆಂಗಳೂರಿನಲ್ಲಿ ನಡೆದ 'ಸುಶಾಸನ ದಿನ' ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉದ್ಯೋಗ ಪತ್ರ ವಿತರಿಸಿದರು. ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್ ಅಶ್ವತ್ಥನಾರಾಯಣ, ಕೌಶಲ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ. ತಿಮ್ಮೇಗೌಡ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪ್ರದೀಪ್, ರಾಜ್ಯ ಕೌಶಲ ಅಭಿವೃದ್ಧಿ ನಿಗಮದ ಎಂ.ಡಿ ಅಶ್ವಿನ್ ಗೌಡ, ಜಿಟಿಸಿಸಿ ವ್ಯವಸ್ಥಾಪಕ ನಿರ್ದೇಶಕ ರಾಘವೇಂದ್ರ ಇದ್ದರು

ಸಂಸ್ಥೆಗಳು, ವಿದ್ಯಾರ್ಥಿಗಳಿಗೆ ಬಹುಮಾನ

ಹಾವೇರಿಯ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು (ಅತ್ಯುತ್ತಮ ಎಂಜಿನಿಯರಿಂಗ್ ಕಾಲೇಜು), ಬೆಂಗಳೂರಿನ ಸರ್ಕಾರಿ ಆರ್.ಸಿ ವಾಣಿಜ್ಯ ಕಾಲೇಜು (ಅತ್ಯುತ್ತಮ ಪ್ರಥಮ ದರ್ಜೆ ಕಾಲೇಜು), ತೆಂಕನಿಡಿಯೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಅತ್ಯುತ್ತಮ ಫಲಿತಾಂಶ) ಬೆಳಗಾವಿ ಜಿಟಿಟಿಸಿ (ಅತ್ಯುತ್ತಮ ಜಿಟಿಟಿಸಿ), ಮಂಗಳೂರಿನ ಸರ್ಕಾರಿ ಮಹಿಳಾ ಐಟಿಐಗಳಿಗೆ (ಅತ್ಯುತ್ತಮ ಐಟಿಐ) ಪುರಸ್ಕಾರಗಳನ್ನು ಪ್ರದಾನ ಮಾಡಲಾಯಿತು.

ಝಳಕಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿವೇದಿತಾ ಎಸ್. ಕಾಟ್ಕರ್ (ಪ್ರಬಂಧ), ಪುಂಜಾಲಕಟ್ಟೆ ಕಾಲೇಜಿನ ವಿದ್ಯಾರ್ಥಿನಿ ರಫಿಯಾ (ಭಾಷಣ) ಮತ್ತು ಕಾರವಾರ ಪ್ರಥಮ ದರ್ಜೆ ಕಾಲೇಜಿನ ಡಿ.ಎಚ್. ಭಾವನಾ (ಪೋಸ್ಟರ್ ರಚನೆ) ಅವರಿಗೆ ಆಯಾ ವಿಭಾಗಗಳಲ್ಲಿ ಪ್ರಥಮ ಬಹುಮಾನವನ್ನು ವಿತರಿಸಲಾಯಿತು.

ಸ್ಮಾರಕ: ಮಧ್ಯಪ್ರದೇಶ ಸರ್ಕಾರದಿಂದ 4,050 ಹೆಕ್ಟೇರ್ ಭೂಮಿ

ಗ್ವಾಲಿಯರ್, ಮಧ್ಯಪ್ರದೇಶ (ಪಿಟಿಐ): 'ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಸ್ಮಾರಕವನ್ನು ಗ್ವಾಲಿಯರ್‌ನಲ್ಲಿ ನಿರ್ಮಾಣ ಮಾಡಲು ಮಧ್ಯಪ್ರದೇಶ ಸರ್ಕಾರ 4,050 ಹೆಕ್ಟೇರ್ ಭೂಮಿ ಮಂಜೂರು ಮಾಡಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಜಿಲ್ಲಾಧಿಕಾರಿ ಸಲ್ಲಿಸಿದ ಪ್ರಸ್ತಾವನೆಗೆ ಅನುಗುಣವಾಗಿ ಸಿರೋಲ್ ಪ್ರದೇಶದಲ್ಲಿ ಸ್ಮಾರಕ ನಿರ್ಮಿಸಲು ಜಮೀನು ನೀಡಲಾಗಿದೆ' ಎಂದರು.

ವಾಜಪೇಯಿ ಅವರು 1924ರ ಡಿಸೆಂಬರ್ 25ರಂದು ಗ್ವಾಲಿಯರ್‌ನಲ್ಲಿ ಜನಿಸಿದ್ದರು.

ವಾಜಪೇಯಿಗೆ ಇಂದು ರಾಹುಲ್ ಗೌರವ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಸಮಾಧಿ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ ಗೌರವ ಸಲ್ಲಿಸಲಿದ್ದಾರೆ.

ರಾಹುಲ್ ಅವರು ಬೆಳಿಗ್ಗೆ 7.30 ರಿಂದ 8.30ರೊಳಗೆ ವಾಜಪೇಯಿ ಅವರ ಸ್ಮಾರಕ 'ಸದೈವ್ ಅಟಲ್'ಗೆ ಭೇಟಿ ನೀಡಿ ನಮನ ಸಲ್ಲಿಸಲಿದ್ದಾರೆ. ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರೂ, ಲಾಲ್ ಬಹದ್ದೂರ್ ಶಾಸ್ತ್ರಿ, ಇಂದಿರಾ ಗಾಂಧಿ ಅವರ ಸ್ಮಾರಕಗಳಿಗೂ ಗೌರವ ಅರ್ಪಿಸಲಿದ್ದಾರೆ.

ರಾಹುಲ್ ಶನಿವಾರವೇ ಈ ಸ್ಮಾರಕಗಳಿಗೆ ಭೇಟಿ ನೀಡಬೇಕಿತ್ತು. ಭಾರತ್ ಜೋಡೊ ಯಾತ್ರೆ ತಡವಾಗಿ ಮುಕ್ತಾಯವಾಗಿದ್ದರಿಂದ ಇದು ಸಾಧ್ಯವಾಗಿರಲಿಲ್ಲ.

ರಾಹುಲ್ ನಿರ್ಣಯ ಎಐಸಿಸಿ ಸಂಯೋಜಕ ಗೌರವ್ ಪಾಂಡಿ ಗುಂಪಿಗೆ ಇರುಸು–ಮುರುಸು ಉಂಟುಮಾಡಿದೆ.

'ವಾಜಪೇಯಿ ಅವರು ಕ್ವಿಟ್ ಇಂಡಿಯಾ ಚಳವಳಿ ಬಹಿಷ್ಕರಿಸಿದ್ದರು. ಅವರು ಬ್ರಿಟಿಷರ ಮಾಹಿತಿದಾರರಾಗಿ ಕೆಲಸ ಮಾಡಿದ್ದರು. ಬಾಬ್ರಿ ಮಸೀದಿ ಧ್ವಂಸಗೊಳಿಸುವಂತೆ ನಿರ್ದಿಷ್ಟ ಗುಂಪನ್ನು ಪ್ರಚೋದಿಸುವಲ್ಲಿ ಪ್ರಮುಖ ಪಾತ್ರ ನಿಭಾಯಿಸಿದ್ದರು' ಎಂದು ಗೌರವ್ ಭಾನುವಾರ ಟ್ವೀಟ್ ಮಾಡಿದ್ದಾರೆ.

ಅತ್ಯಾಚಾರದ ತನಿಖೆ ಎನ್‌ಐಎಗೆ ಒಪ್ಪಿಸಲು ಶೆವಾಲೆ ಒತ್ತಾಯ

ಮುಂಬೈ (ಪಿಟಿಐ): ತಮ್ಮ ವಿರುದ್ಧ ಮಹಿಳೆಯೊಬ್ಬರು ದಾಖಲಿಸಿರುವ ಅತ್ಯಾಚಾರ ಪ್ರಕರಣದ ತನಿಖೆಯ ಹೊಣೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ ಒಪ್ಪಿಸಬೇಕು ಎಂದು ಮಹಾರಾಷ್ಟ್ರ-ಮುಖ್ಯಮಂತ್ರಿ ಏಕನಾಥ ಶಿಂದೆ ಬಣದ ಶಿವಸೇನಾ ಸಂಸದ ರಾಹುಲ್ ಶೆವಾಲೆ ಅವರು ಭಾನುವಾರ ಒತ್ತಾಯಿಸಿದ್ದಾರೆ.

'ದೂರುದಾರ ಮಹಿಳೆಯು ಪಾಕಿಸ್ತಾನ ಮತ್ತು ಭೂಗತ ಪಾತಕಿ ದಾವೂದ್ ಇಬ್ರಾಹಿಂ ಅವರೊಡನೆ ನಂಟು ಹೊಂದಿದ್ದಾರೆ' ಎಂದಿದ್ದಾರೆ.

'5, 8ನೇ ತರಗತಿಗೆ ಕೇಂದ್ರೀಕೃತ ಪರೀಕ್ಷೆ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '5 ಮತ್ತು 8ನೇ ತರಗತಿಯ ಉದ್ದೇಶಿತ ಕೇಂದ್ರೀಕೃತ ಪರೀಕ್ಷೆಯನ್ನು ಮಕ್ಕಳ ಹಿತದೃಷ್ಟಿಯಿಂದ ಕೈ ಬಿಡಬೇಕು' ಎಂದು ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಆಗ್ರಹಿಸಿದ್ದಾರೆ.

'ತುಮಕೂರಿನ ಸಮಾವೇಶವೊಂದರಲ್ಲಿ ಮಾತನಾಡುವಾಗ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು, 5 ಮತ್ತು 8ನೇ ತರಗತಿಗಳಿಗೆ ನಡೆಸುತ್ತಿರುವ ಪರೀಕ್ಷೆಗಳನ್ನು ಸಮರ್ಥಿಸಿದ್ದಾರೆ. ಇದು ಪಬ್ಲಿಕ್ ಪರೀಕ್ಷೆಯಲ್ಲ, ಮಕ್ಕಳ ಕಲಿಕೆಯ ಮೌಲ್ಯಮಾಪನ ಮಾಡುವುದಷ್ಟೇ ಎಂದಿದ್ದಾರೆ. ಸ್ವತಃ ಸಚಿವರೇ ಮೌಲ್ಯಮಾಪನದ ಬಗ್ಗೆ ಸರಿಯಾಗಿ ಅರ್ಥಮಾಡಿಕೊಳ್ಳದೆ ತಮ್ಮ ಅವೈಜ್ಞಾನಿಕ ಹಾಗೂ ಮಕ್ಕಳ ವಿರೋಧಿ ತೀರ್ಮಾನ ಸಮರ್ಥಿಸಿಕೊಳ್ಳುವ ಭರದಲ್ಲಿ ಬೇರೆಯವರನ್ನು ದೂಷಿಸುವ ಕೆಲಸದಲ್ಲಿ ತೊಡಗಿದ್ದಾರೆ. ಇದು ಅವರ ಘನತೆಗೆ ಶೋಭೆ ತರುವುದಿಲ್ಲ' ಎಂದಿದ್ದಾರೆ.

'ಕೇಂದ್ರೀಕೃತ ಪ್ರಶ್ನೆಪತ್ರಿಕೆಯನ್ನು ಆಧರಿಸಿ ಮಾಡುವ ಯಾವುದೇ ಪರೀಕ್ಷೆ ಸಾರ್ವತ್ರಿಕ ಪರೀಕ್ಷೆ. ಮಕ್ಕಳ ಕಲಿಕೆಯನ್ನು ವರ್ಷಕ್ಕೊಮ್ಮೆ ಅಳೆದು ಅವರನ್ನು ದೂಷಿಸುವ ಬದಲು ಮಕ್ಕಳ ಕಲಿಕೆಯನ್ನು ನಿರಂತರವಾಗಿ ಮತ್ತು ವಿಸ್ತೃತವಾಗಿ ಮೌಲ್ಯಮಾಪನ ಮಾಡುತ್ತಾ ಮಕ್ಕಳು ಕಲಿಕೆಯಲ್ಲಿ ಎಲ್ಲಿದ್ದಾರೆ ಎಂದು ತಿಳಿದು, ಅದರ ಆಧಾರದಲ್ಲಿ ಕಲಿಕೆಯನ್ನು ಸಂಘಟಿಸುವ ಆಶಯದಿಂದ ಶಿಕ್ಷಣ ಹಕ್ಕು ಕಾಯ್ದೆ ಜಾರಿಗೆ ಬಂದಿದೆ. ಆ ಮೂಲಕ, ಸಮಗ್ರ ಹಾಗೂ ನಿರಂತರ ಮೌಲ್ಯಮಾಪನವನ್ನು ಜಾರಿಗೊಳಿಸಲಾಗಿದ್ದು, ಈ ಕಾಯ್ದೆಯನ್ನು ಸಚಿವರು ಅಧ್ಯಯನ ಮಾಡಬೇಕು' ಎಂದಿದ್ದಾರೆ.

ಇಡಬ್ಲ್ಯುಎಸ್ ಶೇ 10 ಹಂಚಿಕೆ?

ಒಂದನೇ ಪುಟದಿಂದ....

ಈ ಪ್ರವರ್ಗವನ್ನು 'ಪ್ರವರ್ಗ 2ಸಿ' ಎಂದು ಬದಲಿಸಿ, ಇಡಬ್ಲ್ಯುಎಸ್ ಮೀಸಲಾತಿಯಿಂದ ಶೇ 3ರಷ್ಟನ್ನು ಮರುಹಂಚಿಕೆ ಮಾಡಿ, ಈ ಹೊಸ ಪ್ರವರ್ಗಕ್ಕೆ ಮೀಸಲಾತಿ ಪ್ರಮಾಣವನ್ನು ಶೇ 7ಕ್ಕೆ ಹೆಚ್ಚಿಸಲು ಚಿಂತನೆ ನಡೆದಿದೆ. 'ಪ್ರವರ್ಗ–3ಎ'ಯಲ್ಲಿರುವ ಎಲ್ಲ ಜಾತಿಗಳು ಹೊಸ ಪ್ರವರ್ಗದ ವ್ಯಾಪ್ತಿಗೆ ಒಳಪಡಲಿವೆ.

'ಪ್ರವರ್ಗ–3ಬಿ'ಯಲ್ಲಿರುವ ಲಿಂಗಾಯತ ಪಂಚಮಸಾಲಿ ಸಮುದಾಯವು ತಮ್ಮನ್ನು 'ಪ್ರವರ್ಗ 2ಎ'ಗೆ ಸೇರಿಸಬೇಕೆಂದು ಪಟ್ಟು ಹಿಡಿದಿದೆ. ಪ್ರವರ್ಗ 3ಬಿಗೆ ಸದ್ಯ ಶೇ 5ರಷ್ಟು ಮೀಸಲಾತಿಯಿದೆ. ಪ್ರಬಲ ಸಮುದಾಯವಾದ ಲಿಂಗಾಯತ ಪಂಚಮಸಾಲಿಗಳ ಈ ಬೇಡಿಕೆಗೆ ಪ್ರವರ್ಗ 2ಎಯಲ್ಲಿರುವ ಇತರ ಹಿಂದುಳಿದ ಸಮುದಾಯವರು ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಅದಕ್ಕೆ ಪರಿಹಾರವೆಂಬಂತೆ, 'ಪ್ರವರ್ಗ–3ಬಿ'ಯನ್ನೇ ತೆಗೆದುಹಾಕಿ, ಅದರ ಬದಲು 'ಪ್ರವರ್ಗ 2ಡಿ' ರಚಿಸಿ, ಇಡಬ್ಲ್ಯುಎಸ್ ಮೀಸಲಾತಿಯಿಂದ ಶೇ 4ರಷ್ಟನ್ನು ಮರುಹಂಚಿಕೆ ಮಾಡಿ, ಹೊಸ ಪ್ರವರ್ಗ ಮಾಡಿದರೆ ಒಟ್ಟು ಮೀಸಲಾತಿ ಪ್ರಮಾಣ ಶೇ 9ರಷ್ಟಾಗಲಿದೆ. ಪ್ರವರ್ಗ 3ಬಿಯಲ್ಲಿರುವ ಎಲ್ಲ ಜಾತಿಗಳು ಹೊಸ ಪ್ರವರ್ಗದ ವ್ಯಾಪ್ತಿಗೆ ಒಳಪಡಲಿವೆ.

ರಾಜ್ಯದ 16 ಜಿಲ್ಲೆಗಳಲ್ಲಿ ಲಿಂಗಾಯತ ಪಂಚಮಸಾಲಿ ಸಮುದಾಯದ ಸ್ಥಿತಿಗತಿ ಬಗ್ಗೆ ಈಗಾಗಲೇ ಅಧ್ಯಯನ ನಡೆಸಿರುವ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮಧ್ಯಂತರ ವರದಿ ಸಲ್ಲಿಸಿದೆ. ಆ ವರದಿಯಲ್ಲೂ ಪ್ರತ್ಯೇಕ ಪ್ರವರ್ಗ ರಚಿಸಿ ಮೀಸಲಾತಿ ಪ್ರಮಾಣ ಹಂಚಿಕೆ ಬಗ್ಗೆ ಶಿಫಾರಸು ಮಾಡಲಾಗಿದೆ ಎಂದೂ ಸರ್ಕಾರ ಮೂಲಗಳು ತಿಳಿಸಿವೆ.

'ಸರ್ಕಾರಕ್ಕೆ ಸಾಂವಿಧಾನಿಕ ಅಧಿಕಾರ ಇದೆ'

ಇಡಬ್ಲ್ಯುಎಸ್‌ನವರಿಗಾಗಿಯೇ ಇರುವ ಶೇ 10ರಷ್ಟು ಮೀಸಲಾತಿಯನ್ನು ಪಾಲು ಮಾಡಿ ಪಂಚಮಸಾಲಿಗಳಿಗೆ ಶೇ 4, ಒಕ್ಕಲಿಗರಿಗೆ ಶೇ 3ರಷ್ಟು ಹಂಚುವುದು ಒಪ್ಪಬಹುದಾದ ವಿಚಾರವೇ ಸರಿ. ಈ ನಿಟ್ಟಿನಲ್ಲಿ ಸರ್ಕಾರಕ್ಕೆ ಸಾಂವಿಧಾನಿಕ ಅಧಿಕಾರವೂ ಇದೆ. ಕಾನೂನಾತ್ಮಕವಾಗಿಯೂ ಮಾನ್ಯ. ಆದರೆ, ಬ್ರಾಹ್ಮಣರು ತಮಗಾಗಿಯೇ ಇರಿಸಿಕೊಂಡಿರುವ ಶೇ 10ರಷ್ಟನ್ನು ಅದು ಹೇಗೆ ತಾನೇ ಬಿಟ್ಟುಕೊಡುತ್ತಾರೆ. ಖಂಡಿತಾ ಇದು ಅಸಾಧ್ಯವಾದದ್ದು.

ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿಯವರಿಗೆ ಯಾರೂ ಸರಿಯಾಗಿ ಕಾನೂನು ಸಲಹೆ ಕೊಟ್ಟಂತಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಂತೂ ಪಂಚಮಸಾಲಿಗಳನ್ನು ದಾರಿ ತಪ್ಪಿಸುತ್ತಿದ್ದಾರೆ. ಆ ಸಮಾಜದ ಮೂಗಿಗೆ ತುಪ್ಪ ಸವರಿ ಕೂರಿಸಿದ್ದಾರೆ. ಬೊಮ್ಮಾಯಿಯವರ ಅಧಿಕಾರಾವಧಿ 2023ರ ಮೇ ತನಕ ಇದೆ. ಅವರೇನಾದರೂ ಆದಷ್ಟು ಬೇಗ ಅಧಿಕಾರ ಕಳೆದುಕೊಳ್ಳಬೇಕು ಎಂದರೆ ಈ ರೀತಿಯ ಕೆಲಸಕ್ಕೆ ಮುಂದಾಗಬೇಕು. ಮೀಸಲಾತಿ ವಿಷಯದಲ್ಲಿ ಕೈ ಹಾಕಿ ರಾಮಕೃಷ್ಣ ಹೆಗಡೆ ಮತ್ತು ಎಂ.ವೀರಪ್ಪ ಮೊಯಿಲಿ ತಮ್ಮ ಮುಖ್ಯಮಂತ್ರಿ ಅಧಿಕಾರ ಕಳೆದುಕೊಂಡ ನಿದರ್ಶನ ನಮ್ಮ ಕಣ್ಣ ಮುಂದಿದೆ.

'ಒಂದು ವೇಳೆ ಲಿಂಗಾಯತರ 102 ಉಪಜಾತಿಗಳಿಗೂ ಪ್ರತ್ಯೇಕ ಮೀಸಲಾತಿ ನಿಗದಿಪಡಿಸಬಹುದೇ' ಎಂಬ ಪ್ರಶ್ನೆಗೆ, 'ಆ ರೀತಿ ಮಾಡಲು ಸಾಧ್ಯವಿಲ್ಲ. ತಮಿಳುನಾಡಿನಲ್ಲಿ ವಣ್ಣಿಯಾರ್ ಹಾಗೂ ಮಹಾರಾಷ್ಟ್ರದಲ್ಲಿ ಮರಾಠರಿಗೆ ಈ ರೀತಿ ಪ್ರತ್ಯೇಕ ಮೀಸಲಾತಿ ಘೋಷಿಸಿದ್ದನ್ನು ಹೈಕೋರ್ಟ್, ಸುಪ್ರೀಂ ಕೋರ್ಟ್ ಈಗಾಗಲೇ ರದ್ದುಗೊಳಿಸಿವೆ. ವಣ್ಣಿಯಾರ್ ಪ್ರಕರಣದಲ್ಲಿ ನಾನೇ ವಾದ ಮಂಡಿಸಿದ್ದೇನೆ. ಇವೆಲ್ಲಾ ಆಗದ ಕೆಲಸ'

ರವಿವರ್ಮ ಕುಮಾರ್, ಹಿರಿಯ ವಕೀಲ, ಹೈಕೋರ್ಟ್

'ಶೇ 32ರಷ್ಟು ಮೀಸಲಾತಿ ಅವೈಜ್ಞಾನಿಕ'

ಬೆಂಗಳೂರು: 'ಸದ್ಯ ಎಲ್ಲ ಹಿಂದುಳಿದ ವರ್ಗಗಳಿಗೆ ಒಟ್ಟು ಶೇ 32ರಷ್ಟು ಮೀಸಲಾತಿಯಿದ್ದು, ಇದು ಅವೈಜ್ಞಾನಿಕವಾಗಿದೆ. ಅದನ್ನು ಪುನರ್ ಪರಿಶೀಲಿಸಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನಿಗದಿಪಡಿಸಬೇಕು' ಎಂದು ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಒತ್ತಾಯಿಸಿದೆ.

ಮುಖ್ಯಮಂತ್ರಿ ಬೊಮ್ಮಾಯಿಗೆ ಮನವಿ ಸಲ್ಲಿಸಿರುವ ವೇದಿಕೆ, 'ಅತಿ ಹಿಂದುಳಿದ ಎಲ್ಲ ಜಾತಿಗಳಿಗೆ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ರಾಜಕೀಯ ಪ್ರಾತಿನಿಧ್ಯ ಕಲ್ಪಿಸುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಬೇಕು' ಎಂದು ಆಗ್ರಹಿಸಿದೆ.

'ಒಟ್ಟು ಶೇ 32 ಮೀಸಲಾತಿ ಯಾವುದೇ ಮಾನದಂಡಗಳನ್ನು ಅನುಸರಿಸದೆ, ಯಾವುದೇ ಆಯೋಗದ ಶಿಫಾರಸು ಇಲ್ಲದೆ, ಕೇವಲ ರಾಜಕೀಯ ಉದ್ದೇಶಗಳಿಗಾಗಿ ಹಿಂದಿನ ಸರ್ಕಾರಗಳು ನೀಡಿವೆ. ಆಯಾ ಜಾತಿಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡದಿರುವುದರಿಂದ ಶೇ 90ರಷ್ಟು ಜಾತಿಗಳು ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಯಾವುದೇ ಸವಲತ್ತು ಸಿಗದೆ ವಂಚಿತವಾಗಿವೆ' ಎಂದೂ ಹೇಳಿದೆ.

'ಪ್ರವರ್ಗ 1ರಲ್ಲಿರುವ 95 ಮತ್ತು ಪ್ರವರ್ಗ 2ಎಯಲ್ಲಿರುವ 102 ಸೇರಿ ಒಟ್ಟು 197 ಅತಿ ಹಿಂದುಳಿದ ಸಮುದಾಯಗಳ ಸಾಂವಿಧಾನಿಕ ಮೀಸಲಾತಿಯನ್ನು ರಕ್ಷಿಸಬೇಕು. ನೈತಿಕ ಮತ್ತು ನ್ಯಾಯಬದ್ಧವಾದ ನಮ್ಮ ಮನವಿಯನ್ನು ಸರ್ಕಾರ ಮಾನ್ಯ ಮಾಡದಿದ್ದರೆ, ಸಂಘಟಿತರಾಗಿ ಬೀದಿಗಿಳಿದು ಹೋರಾಟ ಮಾಡುತ್ತೇವೆ. ಅಗತ್ಯಬಿದ್ದರೆ ಕಾನೂನು ಹೋರಾಟಕ್ಕೂ ಸಿದ್ಧರಾಗಿದ್ದೇವೆ' ಎಂದು ಎಚ್ಚರಿಕೆ ನೀಡಿದೆ.

'ಬಲಿಷ್ಠರ ಅನ್ಯಾಯದ ಬೇಡಿಕೆಯನ್ನು ತೀವ್ರವಾಗಿ ವಿರೋಧಿಸುತ್ತೇವೆ. ಹಿಂದುಳಿದ ವರ್ಗಗಳ ಆಯೋಗ ಮಾಡಿರುವ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ತಕ್ಷಣ ಬಿಡುಗಡೆ ಮಾಡಬೇಕು' ಎಂದೂ ವೇದಿಕೆಯ ಅಧ್ಯಕ್ಷ ಎಂ.ಸಿ. ವೇಣುಗೋಪಾಲ್, ಪ್ರಧಾನ ಕಾರ್ಯದರ್ಶಿ ಎಂ. ನಾಗರಾಜು, ಖಜಾಂಚಿ ಎಲ್.ಎ. ಮಂಜುನಾಥ್ ಮನವಿಯಲ್ಲಿ ಆಗ್ರಹಿಸಿದ್ದಾರೆ.

'ಕೇಂದ್ರದ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕು'

ಇಡಬ್ಲ್ಯುಎಸ್ ಕೇಂದ್ರದ ಕೋಟಾ. ಇದು ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದವರಿಗಾಗಿಯೇ ಇರುವಂಥದ್ದು. ಇದರಲ್ಲಿ ಪಾಲು ಮಾಡುವ ಮುನ್ನ ರಾಜ್ಯ ಸರ್ಕಾರ ಕೇಂದ್ರದ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕು. ಈ ರೀತಿ ಅವಕಾಶ ಸಿಗುತ್ತದೆ ಎನ್ನುವುದು ಅನುಮಾನವೇ ಸರಿ.

ಇಂದು ಎಲ್ಲರೂ ಮೀಸಲಾತಿ ಕೇಳುವಂತಾಗಿದೆ. ಪರಿಶಿಷ್ಟ ಜಾತಿಯ ವರ್ಗ ಮತ್ತು ಇತರೆ ಹಿಂದುಳಿದ ವರ್ಗಗಳಲ್ಲಿ ಈಗಾಗಲೇ ಮೀಸಲಾತಿ ಪ್ರಯೋಜನ ಪಡೆದ, ಕೆನೆಪದರದವರ ಮೀಸಲು ಮುಂದುವರಿಕೆ ಬಗ್ಗೆ ಪುನರಾವಲೋಕನ ಅಗತ್ಯವಿದೆ. ಕೆನೆಪದರದಲ್ಲಿರುವ ಐಎಎಸ್, ಐಪಿಎಸ್ ನಂಥವರೇ ಇಲ್ಲೂ ಶೋಷಿತರ ಮೀಸಲು ಕಬಳಿಸುತ್ತಿದ್ದಾರೆ. ಅಸಲಿಗೆ ಯಾರು ಮೀಸಲಾತಿಗೆ ಅರ್ಹರಿದ್ದಾರೋ ಅವರೆಲ್ಲಾ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕವಾಗಿ ಇನ್ನೂ ಮೇಲೇಳುತ್ತಲೇ ಇಲ್ಲ.

ಬಿ.ವಿ. ಆಚಾರ್ಯ, ಹಿರಿಯ ವಕೀಲ, ಹೈಕೋರ್ಟ್

ಪ್ರಜಾವಾಣಿ@75 & ವೀರಲೋಕ ಸಹಯೋಗದಲ್ಲಿ
ಅಮೃತ ಮಹೋತ್ಸವದ ಸಂಭ್ರಮದಲ್ಲಿ....
ಕಾವ್ಯ ಸಂಕ್ರಾಂತಿ 2023
ಕವನ ಸ್ಪರ್ಧೆಯ ಮೊದಲ ಬಹುಮಾನ
₹ 50,000
ಸಂಕ್ರಾಂತಿ ಕವಿತೆ ಸ್ಪರ್ಧೆಯ ಪ್ರವೇಶಗಳಿಗೆ ಇದೋ ಆಹ್ವಾನ



ಕನ್ನಡ ಸಾಹಿತ್ಯ ಲೋಕದಲ್ಲಿ ಅತ್ಯಂತ ದೊಡ್ಡ ಬಹುಮಾನದ ಕವನ ಸ್ಪರ್ಧೆ



ಸ್ಪರ್ಧೆಯ ನಿಯಮಗಳು
- ಸ್ಪರ್ಧೆಗೆ ಕಳುಹಿಸುವ ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ... ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು
- ಕವನಗಳು ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಇಲ್ಲವೆ ಯೂನಿಕೋಡ್‌ನಲ್ಲಿ ಇರಬೇಕು
- ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ-ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು
- ಪ್ರವೇಶಗಳ ಲಕೋಟೆಯ ಮೇಲೆ ಕಾವ್ಯ ಸಂಕ್ರಾಂತಿ ಸ್ಪರ್ಧೆಗಾಗಿ ಎಂದು ಸ್ಪಷ್ಟವಾಗಿ ನಮೂದಿಸಬೇಕು
- 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'ನ ಸಿಬ್ಬಂದಿ ಹಾಗೂ ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಿಲ್ಲ.
- ಸ್ಪರ್ಧೆಗೆ ಕಳುಹಿಸಿರುವ ರಚನೆಗಳನ್ನು ಹಿಂದಿರುಗಿಸುವುದಿಲ್ಲ
- ಬಹುಮಾನಿತ ಕವನಗಳನ್ನು ಯಾವುದೇ ಸ್ವರೂಪದಲ್ಲಿ ಯಾವಾಗ ಬೇಕಾದರೂ ಬಳಸುವ ಹಕ್ಕುಗಳನ್ನು 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್' ಕಾಯ್ದಿರಿಸಿಕೊಂಡಿದೆ
- ಸಂಪಾದಕರ ತೀರ್ಮಾನವೇ ಅಂತಿಮ

ತೀರ್ಪುಗಾರರ ಮೆಚ್ಚುಗೆ ಪಡೆದ ಇತರ ಮೂರು ಕವಿತೆಗಳಿಗೆ ತಲಾ ₹5,000

ಇ– ಮೇಲ್: sankranthi@prajavani.co.in

ವಿಳಾಸ: ಸಂಪಾದಕರು, ಕಾವ್ಯ ಸಂಕ್ರಾಂತಿ ಸ್ಪರ್ಧೆ ವಿಭಾಗ, 'ಪ್ರಜಾವಾಣಿ', ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು–560001

ಪ್ರವೇಶಗಳು ನಮಗೆ ತಲುಪಲು ಕೊನೆಯ ದಿನಾಂಕ: ಸಂಕ್ರಾಂತಿ ದಿನ ಜನವರಿ 15, 2023

ಈ ಪ್ರಪಂಚ ದೊಡ್ಡ ಗರಡಿ ಮನೆ. ನಾವಿಲ್ಲಿ ಬಲಿಷ್ಠರಾಗಲು ಬಂದಿದ್ದೇವೆ
-ಸ್ವಾಮಿ ವಿವೇಕಾನಂದ

ಪಠ್ಯ ಕಲಿಕೆಗೆ ರಂಗರೂಪ

ಮಕ್ಕಳ ಕಲಿಕಾ ಜ್ಞಾನ ವೃದ್ಧಿಗೆ ನವೀನ ಪ್ರಯೋಗ



'ಭಾರತದ ಮಣ್ಣುಗಳು' ಪಾಠದ ನಾಟಕ ಅಭಿನಯ

ಓದಿದ್ದು ಸುಲಭವಾಗಿ ಮನಸ್ಸಿನಲ್ಲಿ ಉಳಿಯುವಂತಾಗಲು ಪಠ್ಯಗಳನ್ನು ನಾಟಕ ರೂಪಕ್ಕಿಳಿಸಿ, ಅದನ್ನು ಮಕ್ಕಳಿಂದಲೇ ಅಭಿನಯಿಸುವಂತಹ ಪ್ರಯೋಗವನ್ನು ಕೊಪ್ಪಳ ಜಿಲ್ಲೆ ಹನುಮಸಾಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ (ಪ್ರೌಢ ಶಾಲಾ ವಿಭಾಗ) ಸಮಾಜವಿಜ್ಞಾನ ಸಹಶಿಕ್ಷಕ ಕಿಶನರಾವ್ ಕುಲಕರ್ಣಿ ನಡೆಸಿದ್ದಾರೆ. ಅವರ ಅನುಭವದ ಮಾತುಗಳು ಇಲ್ಲಿವೆ.

ವಿದ್ಯಾರ್ಥಿಗಳಲ್ಲಿ ಓದುವ, ಬರೆಯುವ ಹವ್ಯಾಸ ಬೆಳೆಸಬೇಕು. ಓದಿದ್ದನ್ನು ಸಿನಿಮಾ ಕಥೆಯಂತೆಯೋ, ಕೇಳಿದ ಹಾಡಿನಂತೆಯೋ ನೆನೆಪಿಟ್ಟುಕೊಳ್ಳಬೇಕು. ಹೀಗೆ ಆಗಬೇಕೆಂದರೆ ಏನು ಮಾಡಬಹುದು ಎಂದು ಯೋಚಿಸುತ್ತಿದ್ದಾಗ, ಹೊಳೆದಿದ್ದೇ 'ಅಭಿನಯದ ಮೂಲಕ ಮಕ್ಕಳಿಗೆ ಪಠ್ಯ ಕಲಿಸುವ' ವಿಧಾನ. ಇದನ್ನು ಹೊಸ ಪ್ರಯೋಗದ ರೀತಿ ಆರಂಭಿಸಿದೆ. ಈ ಪ್ರಯೋಗದಲ್ಲಿ ಪಠ್ಯಗಳನ್ನು ನಾಟಕದ ರೂಪಕ್ಕೆ ಪರಿವರ್ತಿಸಿ, ಮಕ್ಕಳಿಂದಲೇ ಸಂಭಾಷಣೆ(ಡೈಲಾಗ್) ಬರೆಸಿ, ಅವರಿಂದಲೇ ಅಭಿನಯ ಮಾಡಿಸುವುದು ನನ್ನ ಉದ್ದೇಶವಾಗಿತ್ತು.

ಹೀಗೆ ಆರಂಭವಾಯಿತು..

ನಾಟಕ ಮಾಡಿಸುವ ಯೋಚನೆ ಬಂದ ನಂತರವೇ, ಆ ಕುರಿತ ನೀಲನಕ್ಷೆಯೊಂದು ಮನಸ್ಸಿನಲ್ಲಿ ಸಿದ್ಧವಾಯಿತು. ನಂತರ ಮಕ್ಕಳನ್ನು ಕೇಳಿದೆ; 'ಇತಿಹಾಸದ ಒಂದು ಪಾಠವನ್ನು ನಿಮ್ಮಿಂದ ನಾಟಕ ಮಾಡಿಸಬೇಕು ಅಂತ ಅಂದುಕೊಂಡಿದ್ದೇನೆ. ಯಾರು ಪಾತ್ರಧಾರಿಗಳಾಗುತ್ತೀರಿ' ಎಂದು. ಬಹುತೇಕ ಮಕ್ಕಳು 'ನಾನ್ ಮಾಡ್ತೀನಿ' ಎಂದು ಕೈ ಮೇಲೆ ಮಾಡಿದರು. 'ಸರಿ, ಯಾರು ಯಾವ್ಯಾವ ಪಾತ್ರಗಳನ್ನು ಮಾಡ್ತೀರೋ ಅವರು, ಆಯಾ ಪಾತ್ರದ ಪಾಠವನ್ನು ಓದಿಕೊಂಡು, ಸಂಭಾಷಣೆ ಬರೆದುಕೊಡಬೇಕು' ಎಂದು ಸೂಚಿಸಿದೆ.

ಸೂಚನೆ ಪ್ರಕಾರ ಇಪ್ಪತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು, ತಮ್ಮದೇ ಶೈಲಿಯಲ್ಲಿ ಡೈಲಾಗ್‌ಗಳನ್ನು ಬರೆದುಕೊಂಡು ಬಂದರು. ಎಲ್ಲರ ಬರಹಗಳನ್ನು ಓದಿದೆ. 'ಇವ್ಯಾಕೋ ಸರಿಯಿಲ್ಲವಲ್ಲ. ಮತ್ತೊಮ್ಮೆ ಬರೆದು ತನ್ನಿ' ಎಂದೆ. ಹೀಗೆ ಒಂದೆರಡು ಬಾರಿ ಅವರ ಬಳಿಯೇ ತಿದ್ದಿಸಿದೆ. ಒಂದೆರಡು ದಿನಗಳ ಬಳಿಕ ಮಕ್ಕಳಿಂದ ಸುಧಾರಿಸಿದ ಬರಹಗಳು ಬಂದವು. ಆ ಬರಹಗಳನ್ನು ಪರಿಶೀಲಿಸಿ, ಅವುಗಳಲ್ಲಿ ಉತ್ತಮವಾಗಿರುವ ಒಂದು ಬರಹವನ್ನು (ಸಂಭಾಷಣೆ) ಆಯ್ದುಕೊಂಡೆ. ಅದನ್ನೇ ಬಳಸಿಕೊಂಡು ಮಕ್ಕಳಿಗೆ ಅಭಿನಯ ತರಬೇತಿ ನೀಡಿದೆ. ಆ ನಾಟಕವನ್ನು ವಿಡಿಯೊ ಮಾಡಿ, ಸಣ್ಣದಾಗಿ ಹಿನ್ನೆಲೆ ಸಂಗೀತ ಜೋಡಿಸಿದೆ. ಅರ್ಧ ಗಂಟೆಯ ಪಠ್ಯ ನಾಟಕ ಸಿದ್ಧವಾಯಿತು. ಎಲ್ಲ ಮಕ್ಕಳು ನೋಡುವಂತೆ ಸ್ಕ್ರೀನ್ ಮೇಲೆ ಪ್ರದರ್ಶನ ಮಾಡಿದೆ.

ಉತ್ತಮ ಪ್ರತಿಕ್ರಿಯೆ

ನಾಟಕದ ವಿಡಿಯೊ ತುಣಕನ್ನು ಸಾಮಾಜಿಕ ಜಾಲತಾಣಕ್ಕೆ ಹಾಕಿದೆ. ಮಾರನೆಯ ದಿನ, ಕೆಲವು ಪೋಷಕರು ಶಾಲೆಗೆ ಬಂದು, 'ನಮ್ಮ ಮಕ್ಕಳನ್ನು ಏಕೆ ನಾಟಕಕ್ಕೆ ಸೇರಿಸಿಕೊಂಡಿಲ್ಲ' ಎಂದು ಕೇಳಿದರು. ಅವರು ಮಾತುಗಳಿಂದ ನನ್ನ ಅಭಿನಯದ ಮೂಲಕ ಕಲಿಕೆ ಪ್ರಯೋಗ ಯಶಸ್ವಿಯಾಗಿದೆ ಎಂದು ಖಾತರಿಯಾಯಿತು. ಆ ಪೋಷಕರಿಗೆ 'ಮುಂದಿನ ಸಾರಿ ನಿಮ್ಮ ಮಕ್ಕಳನ್ನು ಸೇರಿಸಿಕೊಳ್ಳುವೆ' ಎಂದು ಸಮಾಧಾನ ಮಾಡಿ ಕಳಿಸಿದೆ.

ಈ ಪಠ್ಯದ ನಾಟಕದ ನಂತರ, ಇದೇ ಪಠ್ಯದ ಮೇಲೆ ನಡೆದ ಕಿರುಪರೀಕ್ಷೆಯಲ್ಲಿ ಎಲ್ಲ ಮಕ್ಕಳು ಉತ್ತಮವಾಗಿ ಉತ್ತರ ಬರೆದಿದ್ದರು. ಅಷ್ಟೇ ಅಲ್ಲ, ಆ ನಾಟಕ ನೋಡಿದ 8 ಹಾಗೂ 9ನೇ ತರಗತಿಯ ವಿದ್ಯಾರ್ಥಿಗಳೂ ಈಗ ಪ್ರಶ್ನೆಗಳಿಗೆ ಉತ್ತರ ಹೇಳುವಷ್ಟು ತಯಾರಾಗಿದ್ದರು. ಈ ಬೆಳವಣಿಗೆ ನಂತರ, ವಿದ್ಯಾರ್ಥಿಗಳು ತಾವೇ ಸಮಾಜ ವಿಜ್ಞಾನದ ಪಠ್ಯ ವಿಷಯವನ್ನೇ ನಾಟಕ, ಹಾಡು, ಕಥೆ, ಕವನದ ರೂಪಕ್ಕೆ ಬದಲಾಯಿಸಿಕೊಂಡು ಕಲಿಕೆಯನ್ನು ಸರಳಗೊಳಿಸಿ ಅಭ್ಯಾಸ ಮಾಡುತ್ತಿದ್ದಾರೆ. ಆ ಮಟ್ಟಿಗೆ, 'ಅಭಿನಯದ ಮೂಲಕ ಕಲಿಕೆ' ಎಂಬ ಪ್ರಯೋಗ ಯಶಸ್ವಿಯಾಗಿದೆ.

ಕಲಿಕೆ ದೃಢೀಕರಣ

ನಾಟಕದಿಂದಾಗಿ, ಮಕ್ಕಳಲ್ಲಿ ಕಲಿಕೆಯ ಹೊಸ ದಾರಿಗಳ ಅನ್ವೇಷಣೆ ಸಾಧ್ಯವಾಯಿತು. ಸಂವಹನ, ಹೊಸ ಅನುಭವಗಳನ್ನು ಪಡೆದರು. ದೈಹಿಕ ಮತ್ತು ಮಾನಸಿಕ ಸವಾಲುಗಳನ್ನು ಎದುರಿಸುವುದು ಹೇಗೆಂದು ಕಲಿತರು. ಅಷ್ಟೇ ಅಲ್ಲ, ಮಕ್ಕಳಲ್ಲಿ, ಜೀವನ ಕೌಶಲಗಳ ಬಗ್ಗೆಯೂ ಅರಿವು ಮೂಡಿದೆ. ಸೃಜನಶೀಲತೆ, ಆತ್ಮವಿಶ್ವಾಸ, ಸಂವಹನ, ತಂಡವಾಗಿ ಕೆಲಸ ಮಾಡುವುದು ಮತ್ತು ಸಾಮರ್ಥ್ಯ ಹೆಚ್ಚಿರುವುದರ ಜೊತೆಗೆ ಭಾವನಾತ್ಮಕ ಮತ್ತು ಸಾಮಾಜಿಕ ನಿಯಂತ್ರಣ, ವಿಮರ್ಶಾತ್ಮಕ ಚಿಂತನೆ ಸಹಜವಾಗಿಯೇ ಅಭಿವೃದ್ಧಿಯಾಗಿವೆ. ಇವೆಲ್ಲವನ್ನೂ ಗಮನಿಸಿದ್ದೇನೆ. ಈಗ ಪ್ರತಿ ಘಟಕವನ್ನೂ ಅಭಿನಯ, ನಾಟಕ, ಸಂದರ್ಶನ ಮಾದರಿ, ಜನಪದ ಪ್ರಕಾರಗಳ ಮೂಲಕ ಕಲಿಕಾಂಶಗಳನ್ನು ಬಳಸಿಕೊಂಡು ಮಕ್ಕಳಿಂದಲೇ ಪ್ರಸ್ತುತಪಡಿಸಲಾಗುತ್ತಿದೆ.

ಖರ್ಚಿಲ್ಲದ ಚಟುವಟಿಕೆ

ಯಾವುದೇ ಖರ್ಚಿಲ್ಲದೆ ವಿವಿಧ ತಂತ್ರಜ್ಞಾನಗಳನ್ನು ಬಳಸಿಕೊಂಡು ಪಠ್ಯ ಬೋಧನೆ ಮಾಡುತ್ತ, ಹೊಸ ತಂತ್ರಗಳನ್ನು ಪರಿಚಯಿಸಲಾಗುತ್ತಿದೆ. ಇದೀಗ ಈ ಪದ್ಧತಿಯನ್ನು ಸುತ್ತಲಿನ ಹಲವು ಶಿಕ್ಷಕರು ಅನುಸರಿಸುತ್ತಿದ್ದಾರೆ. ಇದಕ್ಕಾಗಿ ನಾನು ಏನೂ ಖರ್ಚು ಮಾಡಿಲ್ಲ. ನನ್ನದೇ ಕ್ಯಾಮೆರಾ, ಒಂದು ಪ್ಲಾಸ್ಟಿಕ್ ಸ್ಟ್ಯಾಂಡ್, ಒಂದು ವೈರ್ ಮೈಕ್, ನನ್ನ ಹಳೆಯ ಲ್ಯಾಪ್‌ಟಾಪ್ ಇವಿಷ್ಟೇ 'ಡ್ರಾಮಾ ಶೂಟಿಂಗ್' ಸಾಧನಗಳು. ಈ ಹೊಸ ಪ್ರಯೋಗಗಳನ್ನು ಮಾಡುತ್ತಿರುವ ಕಾರಣಕ್ಕಾಗಿ ನಮ್ಮ ಶಾಲೆಯ ವಿದ್ಯಾರ್ಥಿಗಳ ಕಲಿಕೆಯಲ್ಲಿ ಪ್ರಗತಿಯಾಗುತ್ತಿದೆ, ಜೊತೆಗೆ ಹಾಜರಾತಿ ಹೆಚ್ಚಾಗುತ್ತಿದೆ, ವಿಶೇಷವಾಗಿ ಶಾಲೆಯ ಮೇಲೆ ಪಾಲಕರ ಪ್ರೀತಿ ಹೆಚ್ಚಿದೆ.

ಅಂದ ಹಾಗೆ ಈ ನಾಟಕ ಅಭಿನಯ, ಅದಕ್ಕೆ ಬೇಕಾದ ತಾಲೀಮು, ಶೂಟಿಂಗ್, ಮಕ್ಕಳಿಗೆ ಡೈಲಾಗ್ ಬರವಣಿಗೆ ಅಭ್ಯಾಸ ಎಲ್ಲವನ್ನೂ ಶಾಲೆಯ ರಜಾ ದಿನ ಹಾಗೂ ಶಾಲಾ ಅವಧಿ ಮುಗಿದ ನಂತರವೇ ನಡೆಸಿದ್ದೇನೆ.

ಇನ್ನೇಕೆ, ತಡ. ನೀವೂ ಶುರು ಮಾಡಿ, ಅಭಿನಯದ ಮೂಲಕ ಕಲಿಕೆಯನ್ನು...!



'ಭಾರತದ ಸ್ಥಾನ ಮಾನ' – ಪಠ್ಯವನ್ನು ನಾಟಕದ ಮೂಲಕ ಪ್ರಸ್ತುತಪಡಿಸಿದ ವಿದ್ಯಾರ್ಥಿಗಳು ಚಿತ್ರಗಳು: ಲೇಖಕರವು

ಪಠ್ಯ ಕಲಿಸುವ 'ನಾಟಕಗಳು'

ನಾಟಕಕ್ಕಾಗಿ ಆಯ್ಕೆ ಮಾಡಿಕೊಂಡಿದ್ದು ಬಹುತೇಕ 10 ನೇ ತರಗತಿಯ ಪಠ್ಯಗಳಲ್ಲಿರುವ ವಿಷಯಗಳನ್ನು. ವಿಶೇಷವಾಗಿ ಸಮಾಜ ವಿಜ್ಞಾನ ವಿಷಯದ ಭೂಗೋಳ ವಿಭಾಗದಲ್ಲಿ ದೇಶದಲ್ಲಿರುವ ವೈವಿಧ್ಯಮಯ ಮಣ್ಣುಗಳ ಬಗ್ಗೆ ಮಾಹಿತಿ ನೀಡುವ 'ಭಾರತದಲ್ಲಿನ ಮಣ್ಣುಗಳು', ಅಣಕು ಸಂಸತ್ತು, ಭಾರತದ ಸ್ಥಾನ ಮತ್ತು ವಿಸ್ತೀರ್ಣ, ಭಾರತಕ್ಕೆ ಯುರೋಪಿಯನ್ನರ ಆಗಮನ, ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು, ಸಂವಿಧಾನ.. ಸೇರಿದಂತೆ ವಿವಿಧ ಪಠ್ಯಗಳನ್ನು ನಾಟಕ ರೂಪಕ್ಕೆ ತಂದಿದ್ದೇವೆ. ಸಂದರ್ಶನ ರೂಪದಲ್ಲೂ ಪಠ್ಯಗಳನ್ನು ತಲುಪಿಸುವ ಪ್ರಯತ್ನ ಮಾಡಿದ್ದೇವೆ.

ನೀವೂ ಮಾಡಿ ನೋಡಿ..

ನೀವೂ ಕೂಡ ಇಂಥ ಪ್ರಯೋಗಗಳನ್ನು ನಿಮ್ಮ ನಿಮ್ಮ ಶಾಲೆಗಳಲ್ಲಿ ಪ್ರಯತ್ನಿಸಬಹುದು. ನಿಮಗೆ ಸಹಾಯವಾಗಲಿ ಎಂಬ ಉದ್ದೇಶದಿಂದ ಒಂದು ಪಾಠದ ತುಣುಕಿನ ವಿಡಿಯೊ ಕ್ಲಿಪ್ ಅನ್ನು ಇಲ್ಲಿ ಹಾಕಿದ್ದೇನೆ. ಕೆಳಗಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ ವಿಡಿಯೊ ನೋಡಬಹುದು. ನಂತರ ನೀವು ಪ್ರಯತ್ನಿಸಬಹುದು.

ಪ್ರಜಾವಾಣಿ ನೋಡಿಯೊ

ಕೆಎಎಸ್ ಪರೀಕ್ಷೆಗೆ ಸಿದ್ಧತೆ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ನಾನು ಎಂ.ಎಸ್ಸಿ (ಸಸ್ಯಶಾಸ್ತ್ರ) ಪೂರ್ಣಗೊಳಿಸಿದ್ದೇನೆ. ಕೆಎಎಸ್ ಅಧಿಕಾರಿಯಾಗುವ ಆಸೆ ಇದೆ. ಆದರೆ, ಸದ್ಯಕ್ಕೆ ಉದ್ಯೋಗದ ಅವಶ್ಯಕತೆ ಇದ್ದು, ಅದಕ್ಕಾಗಿ, ಬಿ.ಇಡಿ ಮಾಡಿ ಶಿಕ್ಷಕ ವೃತ್ತಿಗೆ ಸೇರಿ, ಸ್ವಂತ ದುಡಿಮೆಯ ಮೇಲೆ ನಿಂತು, ನಂತರ ಕೆಎಎಸ್ ತಯಾರಿ ಮಾಡಬೇಕು ಎಂದುಕೊಂಡಿದ್ದೇನೆ. ಹೇಗೆ ಮಾಡಬಹುದು ? ಮಾರ್ಗದರ್ಶನ ನೀಡಿ.

ಹೆಸರು, ಊರು ತಿಳಿಸಿಲ್ಲ.

ಶಿಕ್ಷಕ ವೃತ್ತಿಗೂ ಕೆಎಎಸ್ ವೃತ್ತಿಗೂ ಅಗತ್ಯವಾದ ಜ್ಞಾನ, ಕೌಶಲ ಮತ್ತು ಮನೋ ಧೋರಣೆಗಳಲ್ಲಿ ಪ್ರಮುಖ ವ್ಯತ್ಯಾಸಗಳಿವೆ. ಒಬ್ಬ ದಕ್ಷ ಕೆಎಎಸ್ ಆಡಳಿತಾಧಿಕಾರಿಗೆ ಇರಬೇಕಾದ ಪರಿಪೂರ್ಣ ಜ್ಞಾನ, ನಾಯಕತ್ವದ ಸಾಮರ್ಥ್ಯ, ಮನೋಧೋರಣೆ, ನೈತಿಕತೆ, ಪಾರದರ್ಶಕತೆ, ಸಮಯದ ನಿರ್ವಹಣೆ, ಶಿಸ್ತು, ಬದ್ಧತೆ, ಸಂವಹನಾ ಸಾಮರ್ಥ್ಯ, ತಾರ್ಕಿಕ ಯೋಚನಾ ಸಾಮರ್ಥ್ಯ, ಪ್ರೇರಣಾ ಕೌಶಲ ಇತ್ಯಾದಿಗಳನ್ನು ಆಯ್ಕೆಯ ಪ್ರಕ್ರಿಯೆಯಲ್ಲಿ ಕೂಲಂಕಶವಾಗಿ ಪರೀಕ್ಷಿಸಲಾಗುತ್ತದೆ. ಹಾಗಾಗಿ, ನಿಮ್ಮ ಶಕ್ತಿ, ಸಾಮರ್ಥ್ಯ, ಆಸಕ್ತಿ ಮತ್ತು ಅಭಿರುಚಿಯ ಆಧಾರದ ಮೇಲೆ ಕೆಎಎಸ್ ವೃತ್ತಿ ನಿಮಗೆ ಸರಿಹೊಂದುವುದೇ ಎಂದು ಸ್ವಯಂವಿಮರ್ಶೆ ಮಾಡುವುದು ಒಳ್ಳೆಯದು. ಆನಂತರ ಪರೀಕ್ಷೆಗಳ ಮಾದರಿ, ಪಠ್ಯಕ್ರಮ, ವಿಷಯದ ಅನುಸಾರ ಶಿಫಾರಸು ಮಾಡಿರುವ ಪುಸ್ತಕಗಳನ್ನು ತಿಳಿದುಕೊಂಡು ನಿಮ್ಮ ವೃತ್ತಿ ಯೋಜನೆಯ ಅನುಗುಣವಾಗಿ ಕಾರ್ಯತಂತ್ರವನ್ನು ರೂಪಿಸಬೇಕು. ಕೆಎಎಸ್ ಆಯ್ಕೆ ಪ್ರಕ್ರಿಯೆ ಕಠಿಣವಾಗಿರುವುದರಿಂದ, ನಿಮ್ಮ ಎಲ್ಲಾ ಪ್ರಯತ್ನಗಳನ್ನು ಈ ನಿಟ್ಟಿನಲ್ಲಿ ಕೇಂದ್ರೀಕರಿಸುವುದು ಅಗತ್ಯ. ಆದ್ದರಿಂದ, ಬಿ.ಇಡಿ ಮಾಡುವುದು ಸೂಕ್ತವಲ್ಲವೆನ್ನುವುದು ನಮ್ಮ ಅಭಿಪ್ರಾಯ.

ನೀವು ಎಂ.ಎಸ್ಸಿ (ಸಸ್ಯಶಾಸ್ತ್ರ) ಮಾಡಿರುವುದರಿಂದ ಹಾಗೂ ಸದ್ಯಕ್ಕೆ ಉದ್ಯೋಗದ ಅವಶ್ಯಕತೆಯೂ ಇರುವುದರಿಂದ, ಬಯೋಟೆಕ್ನಾಲಜಿ, ಔಷಧ, ಆಹಾರ, ನರ್ಸರಿಗಳು, ಪರಿಸರ, ಪ್ರಯೋಗಾಲಯಗಳು, ಸಂಶೋಧನೆ ಮುಂತಾದ ವಲಯಗಳಲ್ಲಿ ವೃತ್ತಿಯನ್ನು ಅರಸಬಹುದು. ವೃತ್ತಿಯೋಜನೆ ಮಾಡುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/@ExpertCareerConsultantAuthor

ಹೆಚ್ಚಿನ ಪ್ರಶ್ನೋತ್ತರಗಳಿಗೆ https://www.prajavani.net/education-career ಜಾಲತಾಣ ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಜಿಸಿಐಎಲ್ ಅಪ್ರೆಂಟಿಸ್‌ಷಿಪ್‌ಗೆ ಅರ್ಜಿ ಆಹ್ವಾನ

ಗ್ರಿಡ್ ಕಂಟ್ರೋಲರ್ ಆಫ್ ಇಂಡಿಯಾ ಲಿಮಿಟೆಡ್(ಜಿಸಿಐಎಲ್- ಕೇಂದ್ರ ವಿದ್ಯುತ್ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಕಂಪನಿ) ಕಂಪನಿಯು ಬಿ.ಇ/ಬಿ.ಟೆಕ್ ಪದವಿಧರರಿಂದ ಅಪ್ರೆಂಟಿಸ್ ಹುದ್ದೆಗಳಿಗಾಗಿ ಅರ್ಜಿ ಆಹ್ವಾನಿಸಿದೆ.

ಅರ್ಹತೆ: ಭಾರತ ಸರ್ಕಾರದ ಎಐಸಿಟಿಐನಿಂದ ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಯಲ್ಲಿ ಬಿ.ಇ/ಬಿ.ಟೆಕ್ – ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಷಯದಲ್ಲಿ ಪದವಿ ಪಡೆದಿರಬೇಕು. ಒಂದು ವರ್ಷ ಯಾವುದೇ ಕಂಪನಿಯಲ್ಲಿ ಅಪ್ರೆಂಟಿಸ್ ತರಬೇತಿ ಪೂರ್ಣಗೊಳಿಸಿರಬೇಕು.

ಆರ್ಥಿಕ ನೆರವು: ಮಾಸಿಕ ₹15 ಸಾವಿರ ಸ್ಟೈಫಂಡ್

ಅರ್ಜಿ ಸಲ್ಲಿಕೆಗೆ ಕೊನೆ ದಿನ: 08/01/2022

ಅರ್ಜಿ ಸಲ್ಲಿಕೆ ವಿಧಾನ: nerldchr@posoco.in; nerldchr@grid-india.in – ಈ ಮೇಲ್ ಮೂಲಕ ಮಾತ್ರ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ: www.b4s.in/praja/GPIL2

ಕೃಪೆ: www.buddy4study.com

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ

ವಿಜ್ಞಾನ

19) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) 1817ರಲ್ಲಿ ಜರ್ಮನಿಯ ರಸಾಯನ ತಜ್ಞರಾದ .... ಒಂದೇ ರೀತಿಯ ಗುಣಗಳನ್ನು ಹೊಂದಿರುವ ಧಾತುಗಳನ್ನು ವರ್ಗೀಕರಿಸಲು ಪ್ರಯತ್ನಿಸಿದರು

ಎ) ವೋಲ್ಫ್ ಗ್ಯಾಂಗ್ ಡೋಬರೈನರ್
ಬಿ) ಡಿಮಿಟ್ರಿ ಇವಾನೋವಿಚ್ ಮೆಂಡಲೀವ್
ಸಿ) ಗ್ರೆಗರ್ ಜೋಹಾನ್ ಮೆಂಡಲಿವ್
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಎ) ವೋಲ್ಫ್ ಗ್ಯಾಂಗ್ ಡೋಬರೈನರ್

2) ಧಾತುಗಳ ಗುಣಗಳು ಅವುಗಳ ಪರಮಾಣು ಸಂಖ್ಯೆಯ ಆವರ್ತನೀಯ ಪುನರಾವರ್ತನೆಗಳು' ಇದು............. ನಿಯಮವಾಗಿದೆ.

ಎ) ಪ್ರಾಚೀನ ಆವರ್ತಕ ನಿಯಮ
ಬಿ) ಆಧುನಿಕ ಆವರ್ತಕ ನಿಯಮ
ಸಿ) ಅಲಿಂಗ ಸಂತಾನೋತ್ಪತ್ತಿಯ ನಿಯಮ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಬಿ)ಆಧುನಿಕ ಆವರ್ತಕ ನಿಯಮ

3) ಈ ಕೆಳಗಿನವುಗಳಲ್ಲಿ ಯಾವುದು ಮನುಷ್ಯರಲ್ಲಿ ಹೆಣ್ಣು ಸಂತಾನೋತ್ಪತ್ತಿ ವ್ಯೂಹದ ಭಾಗವಲ್ಲ

ಎ) ಅಂಡಾಶಯ ಬಿ) ಗರ್ಭಕೋಶ ಸಿ) ವೀರ್ಯನಾಳ
ಡಿ) ಅಂಡನಾಳ

ಉತ್ತರ:- (ಸಿ) ವೀರ್ಯನಾಳ

4) ಕೆಳಗಿನ ಯಾರು ತಳಿಶಾಸ್ತ್ರದ ಪಿತಾಮಹ?

ಎ) ಡಾರ್ವಿನ್ ಬಿ) ಮೆಂಡಲ್ ಸಿ) ಮೆಂಡಲಿವ್ ಡಿ) ಬೇಟ್ಸನ್

ಉತ್ತರ:- (ಬಿ) ಮೆಂಡಲ್

5) ಸ್ನೆಲ್‌ನ ನಿಯಮಕ್ಕೆ (Snell's law)ಸಂಬಂಧಿಸಿದ್ದು.............

ಎ) ಬೆಳಕಿನ ಪ್ರತಿಫಲನ ಬಿ) ಬೆಳಕಿನ ವಕ್ರೀಭವನ
ಸಿ) ಬೆಳಕಿನ ಪ್ರಸರಣೆ ಡಿ) ಬೆಳಕಿನ ಕೋರಿಕೆ

ಉತ್ತರ:- (ಬಿ) ಬೆಳಕಿನ ವಕ್ರೀಭವನ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

20) ಟಿಂಡಾಲ್ ಪರಿಣಾಮ ಎಂದರೇನು?

ಉತ್ತರ:- ಕಲಿಲ ಪದಾರ್ಥಗಳಿಂದ ಬೆಳಕಿನ ಚದುರುವಿಕೆಯ ವಿದ್ಯಮಾನವನ್ನು ಟಿಂಡಾಲ್ ಪರಿಣಾಮ ಎನ್ನುತ್ತೇವೆ.

21) ಸೌದೆಗಿಂತ ಇದ್ದಿಲು ಉತ್ತಮ ಹೇಗೆ?

ಉತ್ತರ:-

(1) ಇದ್ದಿಲು ಯಾವುದೇ ಹೊಗೆಯನ್ನು ಉಂಟು ಮಾಡುವುದಿಲ್ಲ
(2) ಇದ್ದಿಲು ಹೆಚ್ಚು ಉಷ್ಣವನ್ನುಂಟು ಮಾಡುವ ಸಾಮರ್ಥ್ಯವನ್ನು ಹೊಂದಿದೆ.


22) 'ಮಾನವನಲ್ಲಿ ಆಲೋಚನೆ ಮಾಡಲು ಸಹಾಯ ಮಾಡುತ್ತದೆ. ವಿವಿಧ ಭಾಗಳಿಂದ ಸಂವೇದನಾ ಆವೇಗಗಳನ್ನು ಸ್ವೀಕರಿಸುತ್ತದೆ. ಈ ಪ್ರದೇಶ ಶ್ರವಣ, ವಾಸನೆ, ದೃಷ್ಟಿ ಮತ್ತಿತ್ತರ ಕಾರ್ಯ ನಡೆಸಲು ಅನುಕೂಲವಾಗಿದೆ'

ಇದು ಯಾವುದಕ್ಕೆ ಸಂಬಂಧಿಸಿದ ವಿವರಣೆಯಾಗಿದೆ?

ಉತ್ತರ:- ಮುಮ್ಮೆದಳು

23) ಮಾನವನ ಕಣ್ಣಿನ ನೀಳ ಛೇದ ನೋಟದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.


ಉತ್ತರ:-



ಮಾನವನ ಕಣ್ಣಿನ ನೀಳ ಛೇದನೋಟ

24) ಅಮೀಬಾ ಜೀವ ಪೋಷಣೆಯ ಕುರಿತು ಬರೆಯಿರಿ

ಉತ್ತರ:- ಕಾರ್ಯಗಳನ್ನು ನಿರ್ವಹಿಸುವ ವೈಶಿಷ್ಟತೆಯನ್ನು ಪಡೆಯುತ್ತವೆ. ಅಮೀಬಾವು ತಾತ್ಕಾಲಿಕ ಬೆರಳಿನಂತಹ ಜೀವಕೋಶದ ಮೇಲ್ಮೈ ಹೊರಚಾಚಿಕೆಗಳನ್ನು ಬಳಸಿ ಆಹಾರ ಒಳತೆಗೆದುಕೊಳ್ಳುತ್ತದೆ. ಈ ರಚನೆಗಳು ಆಹಾರ ಕಣಗಳನ್ನು ಆವರಿಸಿ ಬೆಸೆದು ಆಹಾರ ರಸದಾನಿಯನ್ನು ಉಂಟುಮಾಡುತ್ತದೆ. ಆಹಾರ ರಸದಾನಿಯೊಳಗೆ ಸಂಕೀರ್ಣ ಆಹಾರ ಪದಾರ್ಥಗಳು ವಿಭಜನೆಗೊಂಡು ಸರಳ ಆಹಾರ ಪದಾರ್ಥಗಳಾಗುತ್ತವೆ. ನಂತರ ಅವು ಕೋಶದ್ರವ್ಯಕ್ಕೆ ವಿಸರಣೆಗೊಳ್ಳುತ್ತವೆ. ಜೀರ್ಣವಾಗದೇ ಉಳಿದ ಪದಾರ್ಥಗಳು ಜೀವಕೋಶದ ಮೇಲ್ಮೈಗೆ ಚಲಿಸಿ ಹೊರಹಾಕಲ್ಪಡುತ್ತದೆ.



25) ಗ್ರಹಗಳು ಮಿನುಗುವುದಿಲ್ಲ ಏಕೆ?

ಉತ್ತರ:- ಗ್ರಹಗಳು ಭೂಮಿಗೆ ತುಂಬಾ ಹತ್ತಿರದಲ್ಲಿವೆ ಮತ್ತು ವಿಸ್ತರಿಸಿದ ಬೆಳಕಿನ ಮೂಲಗಳಂತೆ ಕಾಣುತ್ತವೆ. ನಾವು ಒಂದು ಗ್ರಹವನ್ನು ಹಲವಾರು ಬಿಂದು ಗಾತ್ರದ ಬೆಳಕಿನ ಮೂಲದ ಒಂದು ಸಂಗ್ರಹ ಎಂದು ಭಾವಿಸಿದರೆ ಒಟ್ಟು ಎಲ್ಲಾ ಬಿಂದುಗಳಿಂದ ನಮ್ಮ ಕಣ್ಣನ್ನು ತಲುಪುವ ಬೆಳಕಿನ ವ್ಯತ್ಯಾಸವು ಎಲ್ಲಾ ಬಿಂದುಗಳ ಬೆಳಕಿನ ಸರಾಸರಿ ಹತ್ತಿರವಾಗುತ್ತದೆ. ಇದರಿಂದಾಗಿ ಗ್ರಹಗಳ ಮಿನುಗುವಿಕೆ ಶೂನ್ಯವಾಗಿದೆ.

26) ಪಳೆಯುಳಿಕೆ ಇಂಧನವನ್ನು ಉರಿಸಿದಾಗ ಬಿಡುಗಡೆಯಾಗುವ ವಿಷಕಾರಿ ಅನಿಲಗಳು ಯಾವುವು?

ಉತ್ತರ:- ಸಲ್ಫರ್ ಆಕ್ಸೈಡ್, ನೈಟ್ರೋಜನ್ ಆಕ್ಸೈಡ್‌ಗಳು, ಕಾರ್ಬನ್ ಡೈ ಆಕ್ಸೈಡ್‌ಗಳು, ಕಾರ್ಬನ್ ಮೊನಾಕ್ಸೈಡ್‌ಗಳು

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಪಿಯು ರಸಾಯನ ವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮಾದರಿ ಪ್ರಶ್ನೆಗಳು

ಪಿಯುಸಿ

ಗಣಿತ

25) ಒಂದು ತೊಟ್ಟಿಯಲ್ಲಿ 1000ಲೀ ಉಪ್ಪಿನ ದ್ರಾವಣವಿದ್ದು ಅದರಲ್ಲಿರುವ ಉಪ್ಪಿನ ಅಂಶ 250ಗ್ರಾಂ ಪ್ರತಿ ಲೀಟರ್ ನಷ್ಟಿರುತ್ತವೆ ಪ್ರತಿ ನಿಮಿಷಕ್ಕೆ 25ಲೀ/ಮೀಟರ್‌ನಂತೆ 200ಗ್ರಾಂ/ಲೀ ಉಪ್ಪಿನ ಸಾಂದ್ರತೆ ಇರುವ ಉಪ್ಪಿನ ದ್ರಾವಣವು ತೊಟ್ಟಿಗೆ ಹರಿಯುತ್ತಿದೆ ಹಾಗೆಯೇ ಅಷ್ಟೇ ಪ್ರಮಾಣದ ಹೊರ ಹರಿವು ಇರುತ್ತದೆ. ದ್ರಾವಣವನ್ನು ಕಲಕುತ್ತಾ ಸಮರೂಪಿಯಾಗಿಟ್ಟರೆ 't' ಸಮಯದಲ್ಲಿ ತೊಟ್ಟಿಯಲ್ಲಿರುವ ಉಪ್ಪಿನ ಪ್ರಮಾಣವೆಷ್ಟು?

ಪರಿಹಾರ:

ಹಂತ 1: ಸಂದರ್ಭ, ಪರಿಸ್ಥಿತಿಯನ್ನು ಸುಲಭವಾಗಿ ಗುರುತಿಸಬಹುದು.

ಹಂತ 2: ಒಳ ಹರಿವು ಮತ್ತು ಹೊರ ಹರಿವು ಆರಂಭವಾದ ನಂತರ 't' ನಿಮಿಷಗಳಲ್ಲಿ $y = y(t)$ ಎನ್ನುವುದು ತೊಟ್ಟಿಯಲ್ಲಿರುವ ಉಪ್ಪಿನ ದ್ರಾವಣದಲ್ಲಿರುವ ಉಪ್ಪನ್ನು (ಕಿ.ಗ್ರಾಂಗಳಲ್ಲಿ) ಸೂಚಿಸಲಿ. 'y' ಉತ್ಪನ್ನವು ಒಂದು ನಿಷ್ಪನ್ನ ಉತ್ಪನ್ನವಾಗಿರಲಿ $t = 0$ ಆದಾಗ, ಅಂದರೆ ಒಳ ಮತ್ತು ಹೊರ ಹರಿವಿನ ಆರಂಭಕ್ಕೆ ಮುನ್ನ

$y = 250$ ಗ್ರಾಂ x $1000 = 250$ ಕಿ.ಗ್ರಾಂ

ಒಳ ಮತ್ತು ಹೊರ ಹರಿವಿನಿಂದ y ನಲ್ಲಿ ವ್ಯತ್ಯಾಸ ಕಂಡುಬರುವುದು. ಉಪ್ಪಿನ ದ್ರಾವಣದ ಒಳ ಹರಿವಿನಿಂದ ತೊಟ್ಟಿಗೆ ಪ್ರತಿನಿಮಿಷಕ್ಕೆ 5 ಕಿ.ಗ್ರಾಂನಂತೆ ಉಪ್ಪು ಬರುತ್ತಿರುತ್ತದೆ. (25x200 ಗ್ರಾಂ = 5 ಕಿ.ಗ್ರಾಂ) ಮತ್ತು ಹೊರ ಹರಿವಿನಿಂದ ಪ್ರತಿ ನಿಮಿಷಕ್ಕೆ $25\left(\frac{y}{100}\right) = \frac{y}{40}$ ಕ್ರಿ.ಗ್ರಾಂನಂತೆ ಉಪ್ಪು ಹೊರಹೋಗುತ್ತಿರುತ್ತದೆ.

('t' ಸಮಯದಲ್ಲಿ ತೊಟ್ಟಿಯಲ್ಲಿರುವ ಉಪ್ಪಿನ ಪ್ರಮಾಣ $\frac{y}{1000}$ ಕ್ರಿ.ಗ್ರಾಂ ಆಗಿರುತ್ತದೆ.)

't' ಗೆ ಅನುಗುಣವಾಗಿ ಉಪ್ಪಿನ ವ್ಯತ್ಯಾಸದ ದರ

$$\frac{dy}{dt} = 5 - \frac{y}{40} \text{ ಅಥವಾ } \frac{dy}{dt} + \frac{1}{40}y = 5 \quad \text{.........(1)}$$

ಇದು ದತ್ತ ಸಮಸ್ಯೆಗೆ ಗಣಿತೀಯ ಮಾದರಿಯಾಗುತ್ತದೆ.

ಹಂತ 3: ಸಮೀಕರಣ (1) ಸರಳ ರೇಖಾತ್ಮಕ ಸಮೀಕರಣವಾಗಿದ್ದು ಇದನ್ನು ಸುಲಭವಾಗಿ ಬಿಡಿಸಬಹುದು. (1)ರ ಪರಿಹಾರ ಕೆಳಗಿನಂತಿದೆ.

$$ye^{\frac{t}{40}} = 200e^{\frac{t}{40}} + C \text{ ಅಥವಾ } y(t) = 200 + Ce^{\frac{t}{40}} \quad \text{... (2)}$$

C ಎನ್ನುವುದು ಅವಕಲನದ ನಿಯತಾಂಕ, $t = 0$ ಆದಾಗ $y = 250$ ಎನ್ನುವುದನ್ನು ಗಮನಿಸಿ. ಆದ್ದರಿಂದ, $250 = 200 + C$ ಅಥವಾ $C = 50$

ಸಮೀಕರಣ (2) $$y = 200 + 50e^{-\frac{t}{40}} \quad \text{...... (3)}$$

ಆಗುವುದು

ಅಥವಾ $$\frac{y-200}{50} = e^{-\frac{t}{40}} \text{ ಅಥವಾ } e^{\frac{t}{40}} = \frac{50}{y-200}$$

ಆದ್ದರಿಂದ

$$t = 40\log_e\left(\frac{50}{y-200}\right)$$ ಆಗುವುದು........ (4)

ಸಮೀಕರಣ (3) 't' ಸಮಯದಲ್ಲಿ ತೊಟ್ಟಿಯಲ್ಲಿರುವ 'y' ಉಪ್ಪಿನ ಅಂಶವನ್ನು ಕೊಡುತ್ತದೆ.

ಹಂತ 4: $e^{-\frac{t}{40}}$ ಯಾವಾಗಲು ಧನಾತ್ಮಕವಾಗಿರುವುದದರಿಂದ ಸಮೀಕರಣ (3)ರಂತೆ ಯಾವುದೇ ಸಮಯ 't'ನಲ್ಲಿ $y > 200$ ಆಗಿರುತ್ತದೆ. ಹಾಗಾಗಿ ತೊಟ್ಟಿಯಲ್ಲಿನ ದ್ರಾವಣದಲ್ಲಿನ ಕನಿಷ್ಠ ಉಪ್ಪಿನ ಪ್ರಮಾಣ 200 ಕಿ.ಗ್ರಾಂ ಆಗಿರುವುದು.

ಸಮೀಕರಣ (4)ರಂತೆ, $t > 0$, $0 < y - 200 < 50$ ಅಂದರೆ $200 < y < 250$ ಆಗಿದ್ದರೆ, ಆಗ ಬೇಕಾಗಿದ್ದರೆ ಒಳ ಮತ್ತು ಹೊರ ಹರಿವಿನ ನಂತರ ದ್ರಾವಣದಲ್ಲಿರುವ ಉಪ್ಪಿನ ಅಂಶ 200 ರಿಂದ 250 ಕಿ.ಗ್ರಾಂ ಒಳಗಿರುತ್ತದೆ

26) $*: R \times R \rightarrow R$ **ನ್ನು** $a * b = a + 2b$ **ಎಂದು ವ್ಯಾಖ್ಯಾನಿಸಿದಾಗ ಪರಿವರ್ತನೀಯವಾಗಿಲ್ಲ ಎಂದು ತೋರಿಸಿ.**

ಪರಿಹಾರ:

$3 * 4 = 3 + 8 = 11$ ಮತ್ತು $4 * 3 = 4 + 6 = 10$ ಆದ ಕಾರಣ ಕ್ರಿಯೆ $*$ ಪರಿವರ್ತನೀಯವಾಗಿಲ್ಲ ಎಂದು ತೋರಿಸುತ್ತದೆ ನಾವು Xನ ಮೇಲೆ ದ್ವಿಮಾನ ಕ್ರಿಯೆ ಮೂಲಕ, Xನಲ್ಲಿರುವ ಮೂರು ಗಣಾಂಶಗಳ ಸಹಯೋಗವನ್ನು ಮಾಡಬೇಕಾದಲ್ಲಿ ಸ್ವಾಭಾವಿಕ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. $a*b*c$ ಉಕ್ತಿಯನ್ನು $(a*b)*c$ ಅಥವಾ $a*(b*c)$ ಎಂದು ಪ್ರಸ್ತುತ ಪಡಿಸಬಹುದು ಮತ್ತು ಈ ಎರಡು ಉಕ್ತಿಗಳು ಅವಶ್ಯವಾಗಿ ಒಂದೇ ಇರಬೇಕಾಗಿಲ್ಲ. ಉದಾಹರಣೆಗಾಗಿ $(8-5)-2 \neq 8-(5-2)$. ಆವರಣಗಳನ್ನು ಉಪಯೋಗಿಸಕೊಳ್ಳದಿದ್ದಲ್ಲಿ ಮೂರು ಸಂಖ್ಯೆಗಳಾದ 8. 5 ಮತ್ತು 3ರ ಸಹವರ್ತನೀಯದ ವ್ಯವಕಲನ ದ್ವಿಮಾನ ಕ್ರಿಯೆ ಅರ್ಥಪೂರ್ಣವಾಗಿರುವುದಿಲ್ಲ. ಆದರೆ ಸಂಕಲನ ಪ್ರಕರಣದಲ್ಲಿ $8+5+2$, ಎಂಬುದು $(8+5)+2$ ಅಥವಾ $8+(5+2)$ ಗಳಿಗೆ ಒಂದೇ ಮೌಲ್ಯವಾಗಿದೆ. ಆವರಣಗಳನ್ನು ಬಳಸದಿದ್ದರೂ ಸಹ 3 ಅಥವಾ 3ಕ್ಕಿಂತ ಹೆಚ್ಚು ಸಂಖ್ಯೆಗಳಿಗೆ ಸಂಕಲನ ಪರಿವರ್ತನೀಯವು ಅರ್ಥಪೂರ್ಣವಾಗಿರುತ್ತದೆ.



❦ ಸುಭಾಷಿತ ❦

ಕನ್ನಡಿಯು ನನ್ನ ಉತ್ತಮ ಸ್ನೇಹಿತ. ಏಕೆಂದರೆ ನಾನು ಅಳುವಾಗ ಅದು ಎಂದಿಗೂ ನಗುವುದಿಲ್ಲ.

-ಚಾರ್ಲಿ ಚಾಪ್ಲಿನ್

ಜೀವವೈವಿಧ್ಯ ಸಂರಕ್ಷಣೆಯ ಕಡೆ ಒಂದು ಹೆಜ್ಜೆ ಮುಂದಿರಿಸಿದ ವಿಶ್ವ

ಕೆನಡಾದ ಮಾಂಟ್ರಿಯಲ್‌ನಲ್ಲಿ ಈಚೆಗೆ ನಡೆದ ವಿಶ್ವಸಂಸ್ಥೆಯ ಜೀವವೈವಿಧ್ಯ ಸಮಾವೇಶದಲ್ಲಿ ಒಪ್ಪಂದವೊಂದಕ್ಕೆ ವಿವಿಧ ದೇಶಗಳು ಸಹಿ ಮಾಡಿವೆ. ವಿಶ್ವದ ಸಸ್ಯಸಂಪತ್ತು ಹಾಗೂ ಪ್ರಾಣಿಸಂಪತ್ತು ಇನ್ನಷ್ಟು ಹಾಳಾಗಬಾರದು ಎಂಬ ಉದ್ದೇಶವನ್ನು ಇರಿಸಿಕೊಂಡು ನಡೆಸಿದ ಮಾತುಕತೆಗಳ ಅಂತಿಮ ರೂಪವಾಗಿ ದೇಶಗಳು ಈ ಸಹಿ ಹಾಕಿವೆ. ಹವಾಮಾನ ಬದಲಾವಣೆಯನ್ನು ತಡೆಯುವ ಉದ್ದೇಶದಿಂದ ಮಾಡಿಕೊಂಡ ಪ್ಯಾರಿಸ್ ಒಪ್ಪಂದಕ್ಕೆ ಈ ಒಪ್ಪಂದವನ್ನು ಹೋಲಿಸಿ ನೋಡಲಾಗುತ್ತಿದೆ. ಹೀಗಿದ್ದರೂ ಇದು ಹೆಚ್ಚು ಜನರ ಗಮನ ಸೆಳೆದಿಲ್ಲ. ಮನುಷ್ಯನ ಮೇಲೆ ಹೆಚ್ಚಿನ ಪರಿಣಾಮ ಬೀರುವುದು ಹವಾಮಾನ ಬದಲಾವಣೆಯೇ ವಿನಾ, ಜೀವವೈವಿಧ್ಯದ ನಾಶವು ಹೆಚ್ಚು ಪರಿಣಾಮ ಉಂಟುಮಾಡುವುದಿಲ್ಲ ಎಂಬ ತಪ್ಪುಗ್ರಹಿಕೆಯ ಕಾರಣದಿಂದಾಗಿ ಈ ಒಪ್ಪಂದವು ಹೆಚ್ಚು ಜನರ ಗಮನ ಸೆಳೆದಿಲ್ಲದಿರಬಹುದು. ಸಸ್ಯಸಂಕುಲ, ಪ್ರಾಣಿಗಳು- ಕ್ರಿಮಿಕೀಟಗಳು ಕಣ್ಮರೆಯಾಗಿರುವುದು ಚಂಡಮಾರುತಗಳು ಹಾಗೂ ಅತಿವೃಷ್ಟಿಯಂತೆ ಎದ್ದು ಕಾಣುವುದಿಲ್ಲ. ಆದರೆ ಜೀವವೈವಿಧ್ಯವು ನಾಶವಾಗುತ್ತಿರುವುದರ ಪರಿಣಾಮಗಳ ಬಗ್ಗೆ ಬಹುಕಾಲದಿಂದ ಚರ್ಚೆ ನಡೆದಿದೆ ಎಂಬುದು ನಿಜ. ಒಟ್ಟು 196 ದೇಶಗಳು ಈಗ ಈ ಒಪ್ಪಂದಕ್ಕೆ ಸಹಿ ಮಾಡಿವೆ. 2030ರೊಳಗೆ ಭೂಮಿಯ ಶೇಕಡ 30ರಷ್ಟು ನಿಸರ್ಗವನ್ನು ರಕ್ಷಿಸಲು ಕ್ರಮ ಕೈಗೊಳ್ಳುವ, ನಿಸರ್ಗದ ಮೇಲೆ ಕೆಟ್ಟ ಪರಿಣಾಮ ಬೀರುವ ಸಬ್ಸಿಡಿಗಳನ್ನು ಪ್ರತಿವರ್ಷ 500 ಬಿಲಿಯನ್ ಡಾಲರ್‌ಗಳಷ್ಟು (ಸರಿಸುಮಾರು ₹ 41 ಲಕ್ಷ ಕೋಟಿ) ಕಡಿಮೆ ಮಾಡುವ ಹಾಗೂ ಈಗಾಗಲೇ ಹಾಳಾಗಿರುವ ಪರಿಸರ ವ್ಯವಸ್ಥೆಯ ಶೇಕಡ 30ರಷ್ಟನ್ನು ಸರಿಪಡಿಸುವ ಅಂಶಗಳು ಈ ಒಪ್ಪಂದದಲ್ಲಿ ಇವೆ.



ವಿಶ್ವಸಂಸ್ಥೆಯ ಜೀವವೈವಿಧ್ಯ ಸಮಾವೇಶದಲ್ಲಿ ವಿವಿಧ ದೇಶಗಳು ಸಹಿ ಮಾಡಿರುವ ಒಪ್ಪಂದವು ಆಡಳಿತ, ನೀತಿಗಳು ಮತ್ತು ರಾಜಕಾರಣವು ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬುದನ್ನು ತೋರಿಸಿಕೊಡುತ್ತದೆ

ಜೀವಿಗಳ ಸಾಮೂಹಿಕ ಅಂತರ್ಧಾನವನ್ನು ಈ ಭೂಮಿಯು ಈಗಾಗಲೇ ಐದು ಬಾರಿ ಕಂಡಿದೆ ಎನ್ನಲಾಗಿದೆ. ಭೂಮಿಯು ತನ್ನ ಮೇಲಿನ ಜೀವಿಗಳು ಮತ್ತೊಮ್ಮೆ ಸಂಪೂರ್ಣವಾಗಿ ಅಳಿದುಹೋಗುವ ಸ್ಥಿತಿಯತ್ತ ಮತ್ತೆ ಸಾಗುತ್ತಿದೆ ಎಂಬ ವಾದ ಇದೆ. ಭೂಮಿಯ ಮೇಲ್ಮೈನಲ್ಲಿ ಹಾಗೂ ಸಮುದ್ರದಲ್ಲಿ ಒಟ್ಟು ಸರಿಸುಮಾರು ಹತ್ತು ಲಕ್ಷ ಜೀವಿಗಳು ಅಳಿವಿನಂಚಿನಲ್ಲಿವೆ ಎನ್ನಲಾಗಿದೆ. ಜೀವಿಗಳು ಅಳಿದುಹೋಗುವ ಪ್ರಮಾಣವು ಕಳೆದ ಐವತ್ತು ವರ್ಷಗಳಲ್ಲಿ ವೇಗ ಪಡೆದುಕೊಂಡಿದೆ. ಕೈಗಾರಿಕೆ ಹಾಗೂ ಕೃಷಿ ಚಟುವಟಿಕೆಗಳ ಕಾರಣದಿಂದಾಗಿ ಕಾಡು ಭಾರಿ ಪ್ರಮಾಣದಲ್ಲಿ ನಾಶವಾಗಿದೆ. ವಿಶ್ವದ ಶೇ 40ರಷ್ಟು ಜಮೀನು ಗುಣಮಟ್ಟ ಕಳೆದುಕೊಂಡಿದೆ. ನಷ್ಟವನ್ನು ತಡೆಯಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕಿದೆ. ಏಕೆಂದರೆ ಒಮ್ಮೆ ನಾಶವಾಗಿರುವುದನ್ನು ಮರಳಿ ಪಡೆಯಲು ಸಾಧ್ಯವಿಲ್ಲ. ಇತರ ಜೀವಿಗಳು ಹಾಗೂ ಇಡೀ ನಿಸರ್ಗವನ್ನು ಆಧರಿಸಿ ನಿಂತಿದೆ ಮನುಷ್ಯನ ಜೀವನ. ಅವು ಸುಸ್ಥಿತಿಯಲ್ಲಿ ಇಲ್ಲದಿದ್ದರೆ ಮನುಷ್ಯನ ಬದುಕೂ ಸುಸ್ಥಿತಿಯಲ್ಲಿ ಇರಲಾರದು. ವಿಶ್ವವು 2030ರೊಳಗೆ ನಾಲ್ಕು ಪ್ರಮುಖ ಗುರಿಗಳನ್ನು ಈಡೇರಿಸಬೇಕು, 23 ಕಿರು ಗುರಿಗಳನ್ನು ಈಡೇರಿಸಬೇಕು ಎಂಬ ನಿಬಂಧನೆಯು ಒಪ್ಪಂದದ ಭಾಗ. ಭೂಮಿ ಹಾಗೂ ಸಮುದ್ರದ ಶೇ 30ರಷ್ಟು ಭಾಗವನ್ನು 2030ರೊಳಗೆ ರಕ್ಷಿಸಬೇಕು ಎಂಬುದು ಪ್ರಮುಖ ಗುರಿಗಳ ಪೈಕಿ ಒಂದು. ಈಗ ಭೂಮಿಯ ಶೇ 17ರಷ್ಟು ಹಾಗೂ ಸಮುದ್ರದ ಶೇ 8ರಷ್ಟು ಮಾತ್ರ ಸಂರಕ್ಷಿತವಾಗಿದೆ. ಸಂರಕ್ಷಣೆಯ ಉದ್ದೇಶಕ್ಕೆ ವಾರ್ಷಿಕ 200 ಬಿಲಿಯನ್ ಡಾಲರ್ (₹ 16.52 ಲಕ್ಷ ಕೋಟಿ) ಹಣವನ್ನು ಒಗ್ಗೂಡಿಸುವ ಅಂಶವೂ ಒಪ್ಪಂದದ ಭಾಗ. ರಾಷ್ಟ್ರೀಯ ಜೀವವೈವಿಧ್ಯ ಯೋಜನೆಗಳನ್ನು ಹಮ್ಮಿಕೊಳ್ಳುವ ಪ್ರಸ್ತಾವ ಕೂಡ ಒಪ್ಪಂದದಲ್ಲಿ ಇದೆ. ಹವಾಮಾನ ಬದಲಾವಣೆಯನ್ನು ತಡೆಯುವ ಉದ್ದೇಶದೊಂದಿಗೆ ರಾಷ್ಟ್ರಮಟ್ಟದಲ್ಲಿ ಕೆಲವು ಕಾರ್ಯತಂತ್ರಗಳನ್ನು ಹಮ್ಮಿಕೊಳ್ಳುವಂತಹ ರೀತಿಯವು ಇವು.

ಆದರೆ ಕೀಟನಾಶಕಗಳ ಬಳಕೆಯನ್ನು ಕಡಿಮೆ ಮಾಡುವ ಹಾಗೂ ಕೃಷಿ ಸಬ್ಸಿಡಿಗಳನ್ನು ಕಡಿಮೆ ಮಾಡುವ ಅಂಶಗಳು ವಿವಾದಕ್ಕೆ ಎಡೆಮಾಡಿಕೊಡುವಂತೆ ಇವೆ. ಕೀಟನಾಶಕಗಳ ಬಳಕೆ ಕಡಿಮೆ ಮಾಡುವ ವಿಚಾರದಲ್ಲಿ ಗುರಿ ನಿಗದಿ ಮಾಡುವುದರ ಪರವಾಗಿ ಭಾರತ ಇರಲಿಲ್ಲ. ಬೇರೆ ಬೇರೆ ದೇಶಗಳಿಗೆ ಇರುವ ಜವಾಬ್ದಾರಿ ಮಟ್ಟ ಬೇರೆ ಬೇರೆ ರೀತಿಯದ್ದು. ಹಾಗಾಗಿ, ಜೀವವೈವಿಧ್ಯ ಸಂರಕ್ಷಣೆಯ ವಿಚಾರದಲ್ಲಿಯೂ ಬೇರೆ ಬೇರೆ ಕಾರ್ಯತಂತ್ರಗಳನ್ನು ಅವು ರೂಪಿಸಬಹುದು ಎಂದು ಭಾರತ ವಾದಿಸಿತ್ತು. ಇದಲ್ಲದೆ, ಬೇರೆ ಅಭಿಪ್ರಾಯಗಳೂ ಇದ್ದವು. ಆಫ್ರಿಕಾ ಖಂಡದ ದೇಶಗಳು, ಅದರಲ್ಲೂ ಮುಖ್ಯವಾಗಿ ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೊ ದೇಶವು ಒಪ್ಪಂದದ ಆರ್ಥಿಕ ಆಯಾಮಗಳ ಬಗ್ಗೆ ತಕರಾರು ತೆಗೆದಿದೆ. ಆರ್ಥಿಕ ವಿಚಾರ ಮಾತ್ರವಲ್ಲದೆ ಆ ದೇಶವು ಇತರ ಕೆಲವು ಅಂಶಗಳ ಬಗ್ಗೆಯೂ ಆಕ್ಷೇಪಗಳನ್ನು ವ್ಯಕ್ತಪಡಿಸಿದೆ. ಒಪ್ಪಂದವನ್ನು ತಮ್ಮ ಮೇಲೆ ಹೇರಲಾಗಿದೆ ಎಂದು ಆಫ್ರಿಕಾದ ಕೆಲವು ದೇಶಗಳು ದೂರಿವೆ. ಅಮೆರಿಕವು ಈ ಒಪ್ಪಂದದಲ್ಲಿ ಇಲ್ಲ. ಒಪ್ಪಂದವನ್ನು ಪಾಲಿಸಲೇಬೇಕು ಎಂಬ ಕಾನೂನು ಇಲ್ಲ. ಇವೆಲ್ಲ ಏನೇ ಇದ್ದರೂ, ಈ ಒಪ್ಪಂದವು ಒಂದು ಹೆಜ್ಜೆ ಮುಂದಿರಿಸಿರುವುದಕ್ಕೆ ಸಮ. ಆಡಳಿತ, ನೀತಿಗಳು ಮತ್ತು ರಾಜಕಾರಣವು ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬುದನ್ನು ಇದು ತೋರಿಸಿಕೊಡುತ್ತದೆ.

ದಿನದ ಟ್ವೀಟ್

ಏನು ಪ್ರಯೋಜನ?



ಚುನಾವಣೆಗೆ ನಾಲ್ಕು ತಿಂಗಳು ಇರುವಾಗ ಸಚಿವ ಸಂಪುಟ ವಿಸ್ತರಿಸುವುದರ ಔಚಿತ್ಯವಾದರೂ ಏನು? ಜವಾಬ್ದಾರಿಯ ಹಂಚಿಕೆಯೋ ಅಥವಾ ಅವಕಾಶದ ಹಂಚಿಕೆಯೋ?

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ



ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನ ಇಂದು (ಡಿ. 25). ಅವರು ಮೊದಲನೇ ಬಾರಿಗೆ ಸಂಸದರಾಗಿದ್ದಾಗ, ಚೀನಾ ಆಕ್ರಮಣದ ಬಗ್ಗೆ ಚರ್ಚಿಸುವ ಸಲುವಾಗಿ ನಿಗದಿತ ಅವಧಿಗೆ ಮುನ್ನವೇ ಸಂಸತ್ ಅಧಿವೇಶನವನ್ನು ಕರೆಯಬೇಕೆಂದು ಕೋರಿ ನೆಹರೂ ಅವರಿಗೆ ಬರೆದಿದ್ದ ಪತ್ರಕ್ಕೆ ಸಹಿ ಹಾಕಿದ್ದವರಲ್ಲಿ ಅವರೂ ಒಬ್ಬರಾಗಿದ್ದರು. ನೆಹರೂ ಆ ಪತ್ರಕ್ಕೆ ಮನ್ನಣೆ ನೀಡಿದ್ದರು. ಆದರೆ ಈಗ ಪರಿಸ್ಥಿತಿ ಹೇಗಿದೆಯೆಂದರೆ, ಚೀನಾ ಆಕ್ರಮಣದ ಬಗ್ಗೆ ಸಂಸದರು ಚರ್ಚಿಸುವ ಸ್ಥಿತಿಯಲ್ಲೂ ಇಲ್ಲ.

ಜೈರಾಮ್ ರಮೇಶ್, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಶುಕ್ರವಾರ, 26-12-1997

• **ವಿಧಾನಸಭೆ ವಿಸರ್ಜನೆ: ಬಿಜೆಪಿಗೆ ನಿರಾಸೆ**

ಗಾಂಧಿನಗರ, ಡಿಸೆಂಬರ್ 25 (ಪಿಟಿಐ, ಯುಎನ್‌ಐ)– ಲೋಕಸಭಾ ಚುನಾವಣೆ ಜತೆಯಲ್ಲೆ ರಾಜ್ಯ ವಿಧಾನಸಭೆಗೂ ಚುನಾವಣೆ ನಡೆಸಲು ಅನುವಾಗುವಂತೆ ವಿಧಾನಸಭೆ ವಿಸರ್ಜನೆ ಮಾಡಬೇಕೆಂದು ಗುಜರಾತಿನ ಮುಖ್ಯಮಂತ್ರಿ ದಿಲೀಪ್ ಪಾರೀಖ್ ಅವರ ಮಂತ್ರಿಮಂಡಲದ ಶಿಫಾರಸಿಗೆ ಅನುಗುಣವಾಗಿ ರಾಜ್ಯಪಾಲ ಕೃಷ್ಣಪಾಲ್ ಸಿಂಗ್ ಅವರು ಇಂದು ರಾತ್ರಿ ವಿಧಾನಸಭೆಯನ್ನು ವಿಸರ್ಜಿಸಿದರು. ಇದರಿಂದಾಗಿ ರಾಜ್ಯದಲ್ಲಿ ಉಂಟಾಗಿದ್ದ ರಾಜಕೀಯ ಬಿಕ್ಕಟ್ಟು ಅಂತ್ಯಗೊಂಡಿದೆ.

ರಾಜ್ಯಪಾಲರು ಎಲ್ಲಾ ರಾಜಕೀಯ ಪಕ್ಷಗಳ ಜೊತೆ ಚರ್ಚೆ ನಡೆಸಿದ ನಂತರ ಗುಜರಾತ್ ಜನರ ಹಿತಾಸಕ್ತಿಯಿಂದ ವಿಧಾನಸಭೆ ವಿಸರ್ಜಿಸುವ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ರಾಜಭವನದ ಮೂಲಗಳು ತಿಳಿಸಿವೆ.

• **ಬೊಮ್ಮಾಯಿಗೆ ಅತೃಪ್ತ ಶಾಸಕರ ಸವಾಲು**

ಹುಬ್ಬಳ್ಳಿ, ಡಿಸೆಂಬರ್ 25– ಕೇಂದ್ರದ ಮಾನವ ಸಂಪನ್ಮೂಲ ಖಾತೆ ಸಚಿವ ಎಸ್. ಆರ್. ಬೊಮ್ಮಾಯಿ ಅವರು ತಾವು ಅಧಿಕಾರದಲ್ಲಿ ಇದ್ದಾಗ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಮಾಡಿರುವ ಕಾರ್ಯಕ್ರಮಗಳ ಕುರಿತು ಶ್ವೇತಪತ್ರವೊಂದನ್ನು ಪ್ರಕಟಿಸಿ ಜನತೆ ಮುಂದೆ ಮಂಡಿಸುವಂತೆ ಜನತಾದಳದ ಇಬ್ಬರು ಅತೃಪ್ತ ಶಾಸಕರಾದ ಪಿ.ಸಿ. ಸಿದ್ಧನಗೌಡರ ಹಾಗೂ ಬಿ.ಆರ್. ಯಾವಗಲ್ ಅವರು ಇಂದು ಇಲ್ಲಿ ಸವಾಲು ಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಬೊಮ್ಮಾಯಿ ಅವರು ರಾಜ್ಯದಲ್ಲಿ ಹಲವಾರು ಪ್ರಮುಖ ಸ್ಥಾನಗಳಲ್ಲಿದ್ದವರು. ಅವರ ಅಧಿಕಾರಾವಧಿಯಲ್ಲಿ ಈ ಭಾಗದ ಜನತೆಗೆ ಮಾಡಿರುವ ಸೇವೆ ಯಾವುವು ಎನ್ನುವುದನ್ನು ಪೂರ್ಣವಾಗಿ ಪಟ್ಟಿ ಮಾಡಿ ತಿಳಿಸಲಿ ಎಂದರು.

• **ಬಿಜೆಪಿಗೆ ನಿವೃತ್ತ ಸೇನಾಧಿಕಾರಿಗಳು**

ನವದೆಹಲಿ, ಡಿಸೆಂಬರ್ 25 (ಪಿಟಿಐ)– ಏಳು ಮಂದಿ ನಿವೃತ್ತ ಮೇಜರ್ ಜನರಲ್‌ಗಳು, ಹಲವಾರು ನಿವೃತ್ತ ಬ್ರಿಗೇಡಿಯರ್‌ಗಳು ಹಾಗೂ ಕರ್ನಲ್‌ಗಳು ಸೇರಿ 90 ನಿವೃತ್ತ ಸೈನಿಕರು ಇಂದು ಭಾರತೀಯ ಜನತಾ ಪಕ್ಷವನ್ನು ಸೇರಿದರು. 'ಪಕ್ಷಕ್ಕೆ ಇದಕ್ಕಿಂತ ಕ್ರಿಸ್‌ಮಸ್ ಕೊಡುಗೆ ಬೇರೆ ಇಲ್ಲ. ಇಂದು ಹುಟ್ಟುಹಬ್ಬ ಆಚರಿಸುತ್ತಿರುವ ಎ.ಬಿ. ವಾಜಪೇಯಿ ಅವರಿಗೂ ಇದು ಉಡುಗೊರೆ' ಎಂದು ಮಾಜಿ ಸೈನಿಕರನ್ನು ಪಕ್ಷಕ್ಕೆ ಸ್ವಾಗತಿಸಿದ ಎಲ್.ಕೆ. ಅಡ್ವಾಣಿ ಹೇಳಿದರು.

ಕರ್ನಾಟಕದ ರಾಜಕೀಯ ನಾಯಕರಿಗಿದೆ ಉಪಯುಕ್ತ ಒಳನೋಟ

ಮೂರು ಫಲಿತಾಂಶ ಆರು ಪಾಠ



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಗುಜರಾತ್, ಹಿಮಾಚಲ ಪ್ರದೇಶ ರಾಜ್ಯಗಳು ಹಾಗೂ ದೆಹಲಿ ಮಹಾನಗರಪಾಲಿಕೆಯ ಮತದಾರರ ಆದ್ಯತೆಗಳ ಬಗ್ಗೆ ಈಗಾಗಲೇ ಬಹಳಷ್ಟು ಚರ್ಚೆ ಆಗಿದೆ. ಭಾರತದಲ್ಲಿ ಸಂಕೀರ್ಣವಾದ ಒಗಟಿನ ಚಿತ್ರದಂತಹ ಪರಿಸ್ಥಿತಿ ಇದ್ದು, ಪ್ರತಿಯೊಂದು ರಾಜ್ಯವೂ ತನ್ನದೇ ಆದ ವಿಶಿಷ್ಟ ಹಾಗೂ ವಿಭಿನ್ನ ಗುಣಗಳಿಂದ ಕೂಡಿದೆ. ದೇಶದ 28 ರಾಜ್ಯಗಳ ಚುನಾವಣಾ ಫಲಿತಾಂಶಗಳು ಕೂಡ ತಮ್ಮದೇ ವಿಶಿಷ್ಟವಾದ ಅಂಶಗಳನ್ನು ಆಧರಿಸಿರುತ್ತವೆ. ವಸ್ತುಸ್ಥಿತಿ ಹೀಗಿರುವಾಗ, ಈಗಿನ ಚುನಾವಣಾ ಫಲಿತಾಂಶಗಳಿಂದ ಕರ್ನಾಟಕದ ರಾಜಕೀಯ ಪಕ್ಷಗಳು ಮತ್ತು ಚುನಾವಣಾ ಕಾರ್ಯನೀತಿ ತಜ್ಞರು ಕಲಿಯಬಹುದಾದ ಪಾಠಗಳೇನಾದರೂ ಇವೆಯೇ?

2022ರ ಕೊನೆಯಲ್ಲಿ ನಡೆದ ಚುನಾವಣೆಗಳಿಂದ ಕರ್ನಾಟಕ ಕಲಿಯಬಹುದಾದ ಆರು ಪ್ರಮುಖ ಪಾಠಗಳನ್ನು ಈ ಲೇಖನದಲ್ಲಿ ಪರಿಶೀಲಿಸಲಾಗಿದೆ. ಈ ವಿಶ್ಲೇಷಣೆಯು ಸರಾಸರಿ ಮಾಹಿತಿಯನ್ನಷ್ಟೇ ಆಧರಿಸಿಲ್ಲ; ಗುಜರಾತ್ ಮತ್ತು ಹಿಮಾಚಲ ಪ್ರದೇಶದಲ್ಲಿನ ಲೋಕನೀತಿ- ಸಿಎಸ್‌ಡಿಎಸ್ ಚುನಾವಣೋತ್ತರ ಸಮೀಕ್ಷಾ ಅಧ್ಯಯನಗಳನ್ನು ಸಹ ಆಧರಿಸಿದೆ.


ಇಲ್ಲಿ ಗಮನಿಸಬೇಕಾದ ಬಹಳ ಮುಖ್ಯವಾದ ಮೊದಲ ಪಾಠವೆಂದರೆ, ಒಂದು ಆಡಳಿತಾರೂಢ ಪಕ್ಷಕ್ಕೆ ಚುನಾವಣೆಯಲ್ಲಿ ಗೆಲ್ಲಲು ಇರುವ ಅನುಕೂಲಗಳೇನು ಮತ್ತು ಸವಾಲುಗಳೇನು ಎಂಬುದು. ಕರ್ನಾಟಕದಂತೆಯೇ ಗುಜರಾತ್, ಹಿಮಾಚಲ ಪ್ರದೇಶ ಮತ್ತು ದೆಹಲಿ ಮಹಾನಗರಪಾಲಿಕೆಯಲ್ಲಿಯೂ ಬಿಜೆಪಿಯೇ ಆಡಳಿತಾರೂಢ ಪಕ್ಷವಾಗಿತ್ತು. ಇವುಗಳಲ್ಲಿ ಅದು ಒಂದು ರಾಜ್ಯವನ್ನು ಉಳಿಸಿಕೊಂಡಿತು, ಇನ್ನೊಂದನ್ನು ಕಾಂಗ್ರೆಸ್ಸಿಗೂ ಮಹಾನಗರಪಾಲಿಕೆಯನ್ನು ಎಎಪಿಗೂ ಬಿಟ್ಟುಕೊಟ್ಟಿತು. ಆಡಳಿತಾರೂಢ ಪಕ್ಷವು ರಾಜ್ಯದಲ್ಲಿ ಅಧಿಕಾರವನ್ನು ಉಳಿಸಿಕೊಳ್ಳಬೇಕೆಂದರೆ, ಸರ್ಕಾರದ ಕಾರ್ಯವೈಖರಿಯತ್ತ ಅದು ವಿಶೇಷ ಗಮನ ಹರಿಸಬೇಕಾಗುತ್ತದೆ. ಒಂದು, 'ಡಬಲ್ ಎಂಜಿನ್' ಸರ್ಕಾರದಿಂದ ಏನೆಲ್ಲ ಅನುಕೂಲಗಳಾಗಬಹುದೋ ಆ ಎಲ್ಲವುಗಳ ಬಗ್ಗೆ ಬಿಜೆಪಿಯು ಗಮನ ಕೇಂದ್ರೀಕರಿಸಿತು. ಕೇಂದ್ರದ ಎಂಜಿನ್ ಗುಜರಾತಿನ ಮಟ್ಟಿಗೆ ರಾಜ್ಯದ ಎಂಜಿನ್ ಅನ್ನು ಎಳೆಯಬಲ್ಲಷ್ಟು ಶಕ್ತಿಶಾಲಿಯಾಗಿತ್ತು. ಆದರೆ ಹಿಮಾಚಲ ಪ್ರದೇಶದ ಎಂಜಿನ್ ಅನ್ನು ಗುರಿ ಮುಟ್ಟಿಸಲು ಕೇಂದ್ರದ ಎಂಜಿನ್‌ಗೆ ಸಾಧ್ಯವಾಗಲಿಲ್ಲ. ಇನ್ನು, ದೆಹಲಿ ಮಹಾನಗರಪಾಲಿಕೆಯಲ್ಲಿ ಎಎಪಿಯ 'ಡಬಲ್ ಎಂಜಿನ್' ಗುರಿ ಸಫಲವಾಯಿತು ಎಂದು ಕೆಲವರು ವಿಶ್ಲೇಷಿಸುತ್ತಾರೆ.

ಎರಡನೆಯ ಪಾಠವೆಂದರೆ, ಹಿಮಾಚಲ ಪ್ರದೇಶ ಮತ್ತು ಕರ್ನಾಟಕದ ಮತದಾರರಲ್ಲಿ ಕಂಡುಬರುವ ಒಂದು ಸಮಾನ ಪ್ರವೃತ್ತಿಯ ಹಿನ್ನೆಲೆಯಲ್ಲೂ ಹಿಮಾಚಲದ ಮತದಾರರ ತೀರ್ಪಿನಿಂದ ಕರ್ನಾಟಕ ಪ್ರಮುಖವಾದುದನ್ನು ಕಲಿಯಬಹುದಾಗಿದೆ. ಎರಡೂ ರಾಜ್ಯಗಳ ಮತದಾರರು ಚುನಾವಣೆ ಬಂದಾಗ ಆಡಳಿತಾರೂಢ ಪಕ್ಷವನ್ನು ಸ್ಪಷ್ಟ ಬಹುಮತದೊಂದಿಗೆ ಆಶೀರ್ವದಿಸುವುದಿಲ್ಲ. 1985ರ ನಂತರ ಕರ್ನಾಟಕದಲ್ಲಿ ಈ ಬೆಳವಣಿಗೆ ಕಾಣಿಸಿದರೆ, ಹಿಮಾಚಲ ಪ್ರದೇಶದಲ್ಲಿ ಆ ರಾಜ್ಯವು ಅಸ್ತಿತ್ವಕ್ಕೆ ಬಂದ 1971ರಿಂದಲೂ ಈ ಪ್ರವೃತ್ತಿ ಇದ್ದೇ ಇದೆ (ಒಂದು ಸಂದರ್ಭವನ್ನು ಹೊರತುಪಡಿಸಿ). ಅಲ್ಲಿನ ಈ ರೂಢಿಗೆ ಭಂಗ ತರಲು ಬಿಜೆಪಿ ಸರ್ವಪ್ರಯತ್ನ ಮಾಡಿತಾದರೂ ಅದು ಸಫಲವಾಗಲಿಲ್ಲ. ಅಲ್ಲಿ ಬಿಜೆಪಿ ಎದುರಿಸಿದ ಸವಾಲುಗಳು ಕರ್ನಾಟಕದ ಆಡಳಿತಾರೂಢ ಬಿಜೆಪಿಗೂ ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ಸಿಗೂ ಮೂರನೇ ಪಕ್ಷವಾದ ಜೆಡಿಎಸ್‌ಗೂ ಕರ್ನಾಟಕದಲ್ಲಿ ಹೆಣೆಯಬಹುದಾದ ಕಾರ್ಯತಂತ್ರಗಳಿಗೆ ಹಲವು ಸುಳಿವು-ಸೂಚನೆಗಳನ್ನು ಒದಗಿಸಬಹುದು.

ಮೂರನೇ ಮಹತ್ವದ ಅಂಶವೆಂದರೆ, ಪಕ್ಷ ಮತ್ತು ಅಭ್ಯರ್ಥಿಗೆ ಸಂಬಂಧಿಸಿದ್ದು. ಈ ಎರಡೂ ರಾಜ್ಯಗಳ ಚುನಾವಣಾ ಪ್ರಚಾರದುದ್ದಕ್ಕೂ ಬಿಜೆಪಿಯು ಮುಖ್ಯವಾಗಿ ಪಕ್ಷ ಮತ್ತು ಕೇಂದ್ರ ನಾಯಕತ್ವದತ್ತ ಗಮನ ಕೇಂದ್ರೀಕರಿಸಿತ್ತು. ಹಿಮಾಚಲ ಪ್ರದೇಶದಲ್ಲಿ ಬಿಜೆಪಿಯು ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಲಿಲ್ಲ; ಇನ್ನು ಗುಜರಾತ್‌ನಲ್ಲಿ ಅಂಥದೊಂದು ಘೋಷಣೆ ಮುಖ್ಯವಾಗಲಿಲ್ಲ. ಗುಜರಾತಿನಲ್ಲಿ ಪಕ್ಷವು ಕೇಂದ್ರ ನಾಯಕತ್ವದ ಬಲದ ಮೇಲೆ ಅಧಿಕಾರಕ್ಕೆ ಏರಿತು. ಅಲ್ಲಿ ಪ್ರತಿಯೊಬ್ಬ ಬಿಜೆಪಿ ಅಭ್ಯರ್ಥಿಯೂ ಮತದಾರರೆದುರು ಪ್ರಧಾನಿ ಹೆಸರು ಹೇಳಿಕೊಂಡು ಬೆಂಬಲ ಯಾಚಿಸಿದರು.

ಹಿಮಾಚಲ ಪ್ರದೇಶದ ಕಾಂಗ್ರೆಸ್ಸಿನ ಚುನಾವಣಾ ಪ್ರಚಾರದಲ್ಲಿ ಮತದಾರರು ಪಕ್ಷಕ್ಕೆ ನೀಡಿದಷ್ಟೇ ಮಹತ್ವವನ್ನು ಅಭ್ಯರ್ಥಿಗೂ ನೀಡಿದರು. ಪ್ರತೀ ಹತ್ತು ಮತದಾರರ ಪೈಕಿ ಒಂಬತ್ತು ಮಂದಿ ಅಭ್ಯರ್ಥಿಗೆ ಪ್ರಾಮುಖ್ಯ ನೀಡಿದ್ದಾರೆ ಎಂದು ಲೋಕನೀತಿ-ಸಿಎಸ್‌ಡಿಎಸ್ ಸಮೀಕ್ಷೆ ಬೊಟ್ಟು ಮಾಡಿದೆ. ಕರ್ನಾಟಕದಲ್ಲಿ ರಾಜಕೀಯ ಪಕ್ಷಗಳು ಅನುಸರಿಸುವ ಕಾರ್ಯತಂತ್ರಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಮತದಾರರ ಗಮನ ಪಕ್ಷದ ಮೇಲಿದೆಯೇ ಅಥವಾ ಮತದಾರರು ಅಭ್ಯರ್ಥಿಯ ಸಾಮರ್ಥ್ಯ ಮತ್ತು ಅರ್ಹತೆಗಳನ್ನು ಪರಿಗಣಿಸುವರೇ? ಇದು ಮುಂದೆ ನಾವು ಚರ್ಚಿಸಲಿರುವ ಅಂಶದ ಮೇಲೆ ಪ್ರಭಾವ ಹೊಂದಿರುತ್ತದೆ.

ನಾಲ್ಕನೆಯ ಅಂಶವು ಪ್ರಚಾರದ ಭೂಮಿಕೆಯನ್ನು ಕುರಿತದ್ದಾಗಿದೆ. ಎರಡು ರಾಜ್ಯಗಳಲ್ಲೂ ಪ್ರಚಾರ ಪ್ರಾರಂಭವಾಗುವ ಮೊದಲೇ ಪಕ್ಷನಿಷ್ಠ ಮತದಾರರು ತಾವು ಯಾರಿಗೆ ಮತ ಹಾಕಬೇಕೆಂಬ ನಿರ್ಧಾರಕ್ಕೆ ಬಂದಿದ್ದರು ಎಂಬುದು ಲೋಕನೀತಿ-ಸಿಎಸ್‌ಡಿಎಸ್ ಸಮೀಕ್ಷೆಯಿಂದ ಸ್ಪಷ್ಟವಾಗಿದೆ. ಆದರೆ ಹಾಗೆ ನಿರ್ದಿಷ್ಟವಾಗಿ ಯಾವ ಪಕ್ಷಕ್ಕೂ ಬದ್ಧರಾಗಿರದಿದ್ದ ಮತದಾರರು ಪ್ರಚಾರ ಮುಗಿಯುತ್ತಾ ಬಂದಂತೆ ತಾವು ಯಾರಿಗೆ ಮತ ಹಾಕಬೇಕೆಂಬುದನ್ನು ನಿರ್ಧರಿಸಿದರು.



ಗುಜರಾತ್‌ನಲ್ಲಿ ಬಿಜೆಪಿ ಭಾರಿ ಜನಾದೇಶದ ಕೊಡುಗೆ ಪಡೆದರೆ, ಹಿಮಾಚಲದಲ್ಲಿ ಮತದಾರರ ಕೊನೆಯ ಕ್ಷಣದ ನಿರ್ಧಾರದಿಂದ ಜನಾದೇಶವು ಶೇ 1ರಷ್ಟು ಪ್ರಮಾಣದಲ್ಲಿ ಕಾಂಗ್ರೆಸ್ ಕಡೆಗೆ ವಾಲಿತು. ಹೀಗಾಗಿ ಪ್ರಚಾರವು ನಿರ್ಣಾಯಕವಾದುದು. ಹಿಮಾಚಲ ಪ್ರದೇಶದಲ್ಲಿ ಸ್ಥಳೀಯ ಸಮಸ್ಯೆಗಳತ್ತ ಗಮನಹರಿಸಿದ್ದು ಕಾಂಗ್ರೆಸ್‌ಗೆ ಸ್ವಲ್ಪ ಮಟ್ಟಿಗೆ ಲಾಭ ತಂದುಕೊಟ್ಟಿತು. ಬಿಜೆಪಿಯಂತೂ ಕೇಂದ್ರ ಸರ್ಕಾರದ ಸಾಧನೆಯ ದಾಖಲೆಗಳನ್ನು ಮತ್ತು ರಾಷ್ಟ್ರೀಯ ವಿಷಯಗಳನ್ನು ಮುಂದಿಟ್ಟು ಪ್ರಚಾರಕ್ಕಿಳಿದಿತ್ತು. ಕರ್ನಾಟಕದಲ್ಲಿ ರಾಜಕೀಯ ಪಕ್ಷಗಳು ಯಾವ ಭೂಮಿಕೆಯ ಮೇಲೆ ಪ್ರಚಾರ ನಡೆಸುತ್ತವೆ ಎಂಬುದು ಕುತೂಹಲಕರ ಸಂಗತಿಯಾಗಿದೆ.

ಐದನೆಯ ಅಂಶವು ಹಿಮಾಚಲ ಪ್ರದೇಶದಿಂದ ಕಲಿಯಬಹುದಾದ ಒಂದು ಪ್ರಮುಖ ಪಾಠವಾಗಿದೆ. ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ಮತಗಳ ಅಂತರ ಶೇ 1ಕ್ಕಿಂತ ಕಡಿಮೆ ಇತ್ತು. ಆದರೂ ಮತದಾರನ ಆರ್ಥಿಕ ಸ್ಥಿತಿಯ ಹಿನ್ನೆಲೆಯಿಂದ ನೋಡಿದಾಗ, ಮತದಾನದಲ್ಲಿ ಒಂದು ಸ್ಪಷ್ಟ ಮಾದರಿಯನ್ನು ಕಾಣಬಹುದಾಗಿದೆ. ಹಿಮಾಚಲ ಪ್ರದೇಶದಲ್ಲಿ ಬಿಜೆಪಿಯು ಶ್ರೀಮಂತ ಸಮುದಾಯಗಳಿಂದ ಹೆಚ್ಚು ಮತಗಳನ್ನು ಪಡೆದಿದ್ದರೆ, ಬಡ ಮತದಾರರ ನಡುವೆ ಮತಗಳಿಕೆಯ ಪ್ರಮಾಣ ಕಡಿಮೆಯಾಗುತ್ತ ಹೋಗಿರುವುದು ಕಂಡುಬರುತ್ತದೆ.

ಕಾಂಗ್ರೆಸ್ಸಿನ ಮತಗಳಿಕೆಯ ಮಾದರಿಯು ಇದಕ್ಕೆ ವ್ಯತಿರಿಕ್ತವಾಗಿದೆ. ರಾಜ್ಯದ ಒಟ್ಟಾರೆ ಮತದಾನವನ್ನು ಪರಿಗಣಿಸಿದಾಗ, ಮತಗಳಿಕೆಯ ಅಂತರದಲ್ಲಿ ಶೇ 1ಕ್ಕಿಂತ ಕಡಿಮೆ ಮತಗಳ ವ್ಯತ್ಯಾಸವಿದ್ದರೆ, ಬಡ ಮತದಾರರನ್ನು ಪರಿಗಣಿಸಿದಾಗ ಮತಗಳಿಕೆಯ ಅಂತರ ಶೇ 13ರಷ್ಟಿದೆ. ಮತದಾರರ ಅಂತಿಮ ತೀರ್ಪನ್ನು ನಿರ್ಣಯಿಸುವಲ್ಲಿ ಈ ವ್ಯತ್ಯಾಸ ಸ್ಪಷ್ಟವಾಗಿ ಕಂಡುಬರುತ್ತದೆ. ಕರ್ನಾಟಕದ ರಾಜಕೀಯ ಪಕ್ಷಗಳ ಕಾರ್ಯತಂತ್ರವನ್ನು ಹೆಣೆಯುವವರಿಗೆ ಇದರಲ್ಲಿ ಮಹತ್ವದ ಪಾಠಗಳಿವೆ.

ಇನ್ನು ಕೊನೆಯ ಅಂಶ- ಮಹಿಳಾ ಮತ. ಲೋಕನೀತಿ-ಸಿಎಸ್‌ಡಿಎಸ್‌ನ ಚುನಾವಣೋತ್ತರ ಸಮೀಕ್ಷೆಯ ಪ್ರಕಾರ, ಹಿಮಾಚಲ ಪ್ರದೇಶದಲ್ಲಿ 2017ರಲ್ಲಿ ಮಹಿಳೆಯರಿಗೆ ಹೋಲಿಸಿದರೆ ಪುರುಷರ ಮತಗಳನ್ನು ತುಸು ಹೆಚ್ಚಿಗೆ ಗಳಿಸುವಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳು ಯಶಸ್ವಿಯಾಗಿದ್ದವು. ಆದರೆ ಈ ಬಾರಿ ಮಹಿಳಾ ಮತದಾರರ ಆಶೀರ್ವಾದ ಪಡೆಯುವಲ್ಲಿ ಕಾಂಗ್ರೆಸ್ ಮತ್ತು ಪುರುಷ ಮತದಾರರಿಂದ ಜನಾದೇಶ ಪಡೆಯುವಲ್ಲಿ ಬಿಜೆಪಿ ಮುಂದಿವೆ. ಈ ಬಾರಿ ಬಿಜೆಪಿಯು ಪುರುಷರ ಮತಗಳಲ್ಲಿ ಶೇಕಡ 5ರಷ್ಟು ಕುಸಿತವನ್ನೂ ಮಹಿಳಾ ಮತಗಳಲ್ಲಿ ಶೇ 6ರಷ್ಟು ಕುಸಿತವನ್ನೂ ಕಂಡಿದೆ. ಕಾಂಗ್ರೆಸ್‌ನ ವಿಷಯಕ್ಕೆ ಬರುವುದಾದರೆ, ಪಕ್ಷವು ಹೆಚ್ಚುವರಿಯಾಗಿ ಶೇ 1ರಷ್ಟು ಪುರುಷರ ಮತಗಳ ಪಾಲನ್ನೂ ಶೇ 4ರಷ್ಟು ಮಹಿಳಾ ಮತಗಳ ನಿರ್ಣಾಯಕವಾದ ಪಾಲನ್ನೂ ಗಳಿಸಿದೆ. ಈ ಅಂಶವೂ ಪಕ್ಷದ ಗೆಲುವಿಗೆ ಕಾರಣವಾಗಿದೆ ಎಂದು ಚುನಾವಣಾ ವಿಶ್ಲೇಷಕರು ತೀರ್ಮಾನಿಸಿದ್ದಾರೆ.

ಕರ್ನಾಟಕದ ರಾಜಕೀಯ ಪಕ್ಷಗಳು ಮತ್ತು ರಾಜಕೀಯ ನಾಯಕರು ಉತ್ಸಾಹದಿಂದ ಚುನಾವಣಾ ಪ್ರಚಾರದ ಸಿದ್ಧತೆ ನಡೆಸುತ್ತಿರುವ ಈ ಸನ್ನಿವೇಶದಲ್ಲಿ, 2022ರ ಕೊನೆಯ ಚುನಾವಣೆ ಕಲಿಸಿರುವ ಈ ಎಲ್ಲಾ ಪಾಠಗಳು ಉಪಯುಕ್ತ ಒಳನೋಟಗಳನ್ನು ನೀಡಬಲ್ಲವು.

ಚುರುಮುರಿ



ಬಾಯಿಗೆ ಬೀಗ

• ಸುಮಂಗಲಾ

'ಏ... ನೀ ಲಗೂನೆ ಯಾವುದಾರ ಬ್ಯಾಂಕಿನಾಗೆ ಒಂದ್ ಐವತ್ತು ಲಕ್ಷ ಸಾಲ ತಗೋ' ಎಂದು ಬೆಕ್ಕಣ್ಣ ಅವಸರದಲ್ಲಿ ವದರಿತು.

ಬೆಕ್ಕಣ್ಣ ಏನಾದ್ರೂ ಹೊಸ ಬಿಸಿನೆಸ್ ಯೋಜನೆ ಹಾಕುತ್ತಿದೆಯಾ ಎಂದು ಅನುಮಾನವಾಯಿತು.

'ನಮ್ಮಂಥೋರಿಗೆ ಐದ್ ಸಾವ್ರ ಸಾಲ ಸಿಗೂದೂ ಕಷ್ಟ, ಇನ್ನು ಐವತ್ತು ಲಕ್ಷ ಸಾಲ ಯಾರು ಕೊಡ್ತಾರಲೇ?' ಎಂದೆ.

'ಸ್ತ್ರೀಶಕ್ತಿ ಸಂಘದ ವತಿಯಿಂದ ಕೇಳಿದರ ಕೊಡ್ತಾರ, ನೀ ಮದ್ಲು ಅರ್ಜಿ ಹಾಕು'.

'ನಾ ಯಾವುದೂ ಸ್ತ್ರೀ ಶಕ್ತಿ ಸಂಘದೊಳಗ ಇಲ್ಲಲೇ. ಹೋಗ್ಲಿ, ನೀ ಹೇಳಿದಂಗೆ ಸಾಲ ತಗೊಂಡರ, ತೀರಿಸೋರು ಯಾರು? ನಾನೆ ದುಡಿದು ತೀರಿಸಬೇಕಲ್ಲ' ಎಂದರೆ ಪಕಪಕನೆ ನಕ್ಕಿತು.

'ನೀ ಎದಕ್ಕ ತೀರಿಸಬಕು... ನಮ್ ಕುಮಾರಣ್ಣ ತೀರಸ್ತಾನ! ಕುಮಾರಣ್ಣ ಅಧಿಕಾರಕ್ಕೆ ಬಂದ ಮರುಕ್ಷಣವೇ ಹೆಣ್ಣುಮಕ್ಕಳ ಸಾಲ ಮನ್ನಾ ಮಾಡ್ತಾನಂತ ಅನಿತಕ್ಕ ಹೇಳ್ಯಾಳ' ಎದೆಯುಬ್ಬಿಸಿ ಹೇಳಿತು.

'ಅಧಿಕಾರಕ್ಕೆ ಬರಂಗಿಲ್ಲ ಅಂತ ಗೊತ್ತಿದ್ದೇ ಭರವಸೆ ಕೊಡ್ತಾರಲೇ. ಅವರು ಹೇಳ್ತಾರಂತ ಸಾಲ ಮಾಡಿ ತುಪ್ಪ ತಿನ್ನೂಣೇನು' ಎಂದು ಬೈದ್ಯೆ.

'ಪಂಚರತ್ನ ಯಾತ್ರೆ ಮಾಡಾಕತ್ತಾರ... ಹಿಂಗಾಗಿ ಗೆಲ್ಲೂ ಚಾನ್ಸ್ ಐತೇಳು'.

'ಗೌಡಜ್ಜಾರು, ರೇವಣ್ಣ, ಅವರ ಮಗ, ಕುಮಾರಣ್ಣ, ಮತ್ತವರ ಮಗ, ಪಂಚರತ್ನಗಳಾದವು. ಅನಿತಕ್ಕ, ಭವಾನಕ್ಕ ಈ ಸ್ತ್ರೀರತ್ನಗಳನ್ನು ಬಿಟ್ಟಾರ ನೋಡು, ಖರೇ ಅಂದರೆ ಸಪ್ತರತ್ನ ಯಾತ್ರೆ ಅಂತ ಕರೀಬೇಕಿತ್ತು ಹೌದಿಲ್ಲೋ'.

'ನೋಡಾ, ನೀ ತಿರುಸಿ ಮುರುಸಿ ಕುಟುಂಬ ರಾಜಕಾರಣ ಅನ್ನಬ್ಯಾಡ. ಎಲ್ಲ ಪಕ್ಷದೊಳಗೂ ಕುಟುಂಬ ರಾಜಕಾರಣ ಐತಿ ಅಂತ ನಿಖಿಲಣ್ಣ ಬರೋಬ್ಬರಿ ಹೇಳ್ಯಾನ. ಯಾವ ಪಕ್ಷದಾಗೆ ಹಂಗಿಲ್ಲ ತೋರಿಸು, ನೋಡಾಮು' ಬೆಕ್ಕಣ್ಣ ಸವಾಲೆಸೆಯಿತು.

'ಈ ಯಾತ್ರೆಗೀತ್ರೆ ಕೈಬಿಟ್ಟು, ಎಲ್ಲಾ ಪಕ್ಷದವರೂ ಬಾಯಿಗೆ ಬೀಗ ಹಾಕ್ಕೊಂಡು ಕೆಲಸ ಮಾಡಿದ್ರ ಛಲೋ ಇತ್ತು'.

'ಶ್ರೀಸಾಮಾನ್ಯರ ಬಾಯಿಗೆ ಬೀಗ ಜಡದಾರಲ್ಲ, ಸಾಕು ಬಿಡು' ಎನ್ನುತ್ತ ಬೆಕ್ಕಣ್ಣ ಮುಸಿಮುಸಿ ನಕ್ಕಿತು!

ಸಂಗತ

ರಸ್ತೆಉಬ್ಬು: ಅಪಾಯವೇ ಹೆಚ್ಚು!

ಅವೈಜ್ಞಾನಿಕವಾಗಿ ನಿರ್ಮಾಣವಾಗುವ ರಸ್ತೆಉಬ್ಬುಗಳು ವಾಹನಗಳ ಸ್ಪೀಡಿಗೆ ಬ್ರೇಕ್ ಹಾಕುವ ಬದಲು ಬದುಕಿಗೇ ಬ್ರೇಕ್ ಹಾಕುತ್ತಿವೆ

• ಡಾ. ಕೆ.ಎಸ್.ಚೈತ್ರಾ

ಬೆಂಗಳೂರಿನ ನಲವತ್ತೆಂಟು ವರ್ಷ ವಯಸ್ಸಿನ ಉದ್ಯಮಿಯೊಬ್ಬರು ಇತ್ತೀಚೆಗೆ ಸಾವನ್ನಪ್ಪಿದರು. ಕಾರಣ, ವಾಹನ ಚಲಾಯಿಸುವಾಗ ಹಂಪ್ಸ್ ಅಂದರೆ ರಸ್ತೆ ಉಬ್ಬಿನಿಂದ ಉರುಳಿ ಬಿದ್ದು ತಲೆಗೆ ಆದ ಗಂಭೀರ ಪೆಟ್ಟು. ಅತಿ ವೇಗದ ಚಾಲನೆ ಮತ್ತು ನಿರ್ಲಕ್ಷ್ಯ ಇದಕ್ಕೆ ಕಾರಣ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಆದರೆ ಅದರೊಂದಿಗೇ ಈ ರಸ್ತೆಉಬ್ಬುಗಳ ಪಾತ್ರವನ್ನೂ ಕಡೆಗಣಿಸುವಂತಿಲ್ಲ. ಏಕೆಂದರೆ ಬೆಂಗಳೂರು ಮಾತ್ರವಲ್ಲ, ಇತರ ಪ್ರಮುಖ ನಗರ, ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಹೆದ್ದಾರಿಗಳಲ್ಲಿ ದಿನವೂ ರಸ್ತೆಉಬ್ಬುಗಳಿಂದ ಸಾವು-ನೋವು ಸಂಭವಿಸುತ್ತಲೇ ಇವೆ.

ಅತಿವೇಗವನ್ನು ನಿಯಂತ್ರಿಸಿ ಆ ಮೂಲಕ ಅಪಘಾತಗಳ ಸಂಖ್ಯೆ ಕಡಿಮೆ ಮಾಡಲು, ರಸ್ತೆಸುರಕ್ಷತೆ ನಿಯಮ ಪಾಲಿಸಲು ರೂಪಿತವಾದದ್ದು ಈ ರಸ್ತೆಉಬ್ಬು. ಆದರೆ ವಿನ್ಯಾಸ, ಹಾಕಬೇಕಾದ ಜಾಗದ ಆಯ್ಕೆ ಮತ್ತು ಕಳಪೆ ನಿರ್ಮಾಣದಿಂದ ರಸ್ತೆಉಬ್ಬುಗಳೇ ಅಪಾಯಕಾರಿಯಾಗಿರುವುದು ವಿಪರ್ಯಾಸವೇ ಸರಿ. ಹಾಗಾದರೆ ಇವುಗಳಿಗೆ ಮಾನದಂಡವೇ ಇಲ್ಲವೇ? ಖಂಡಿತವಾಗಿ ಇದೆ!

ವಾಹನಗಳ ಸುರಕ್ಷಿತ ಮತ್ತು ಸುಗಮ ಸಂಚಾರಕ್ಕಾಗಿ ಇಂಡಿಯನ್ ರೋಡ್ ಕಾಂಗ್ರೆಸ್ ಸ್ಪಷ್ಟ ನಿರ್ದೇಶನವನ್ನು ನೀಡಿದೆ. ರಸ್ತೆಉಬ್ಬುಗಳ ಎತ್ತರ 0.10 ಮೀಟರ್, ಅಗಲ 3.7 ಮೀಟರ್ ಇರಬೇಕು. ಚಾಲನೆಯಲ್ಲಿರುವ ವಾಹನದ ವೇಗವನ್ನು ಗಂಟೆಗೆ 25 ಕಿ.ಮೀ.ಗಿಂತ ತಗ್ಗಿಸುವಂತೆ ಇರಬಾರದು. ಹಾಗೆಯೇ ಇವುಗಳನ್ನು ಸಣ್ಣ ರಸ್ತೆ ಮುಖ್ಯರಸ್ತೆಗಳು ಸೇರುವಲ್ಲಿ, ದಿಢೀರ್ ತಿರುವುಗಳು ಇರುವ ಕಡೆ, ಅಪಘಾತ ವಲಯಗಳು, ಜನವಸತಿ ಹೆಚ್ಚಿರುವ ನಿರ್ದಿಷ್ಟ ಪ್ರದೇಶಗಳು, ಶಾಲೆ-ಕಾಲೇಜುಗಳು ಮತ್ತು ಆಸ್ಪತ್ರೆಗಳ ಬಳಿ ನಿರ್ಮಿಸಲು ಅನುಮತಿ ಇದೆ. ಈ ಉಬ್ಬುಗಳು ನಿರ್ದಿಷ್ಟ ಆಕಾರದಲ್ಲಿದ್ದು ಅವುಗಳಿಗೆ ಕಪ್ಪು- ಬಿಳಿ ಅಥವಾ ಕಪ್ಪು- ಹಳದಿ ಬಣ್ಣವನ್ನು 'ವಿ' ಆಕಾರದಲ್ಲಿ ಸ್ಪಷ್ಟವಾಗಿ ಕಾಣುವ ರೀತಿಯಲ್ಲಿ ಬಳಿದಿರಬೇಕು. ಸೂಚನಾ ಫಲಕ ಹಾಗೂ ಗುರುತುಗಳಿಂದ ಇವುಗಳನ್ನು ಸೂಚಿಸಬೇಕು. ಆದರೆ ಈ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಪ್ರಭಾವಿ ವ್ಯಕ್ತಿಗಳು, ವಾಣಿಜ್ಯ ಸಂಕೀರ್ಣಗಳವರು ತಮ್ಮ ಅನುಕೂಲಕ್ಕೆ ತಕ್ಕಂತೆ ರಸ್ತೆಉಬ್ಬುಗಳನ್ನು ನಿರ್ಮಿಸುತ್ತಿದ್ದಾರೆ.

ಇಂಥ ರಸ್ತೆಉಬ್ಬುಗಳು ಖಂಡಿತಾ ಅಪಾಯಕಾರಿ. ಅವೈಜ್ಞಾನಿಕವಾದ ಈ ರಸ್ತೆಉಬ್ಬುಗಳಿಂದ ಬೆನ್ನುಹುರಿಗೆ ಪೆಟ್ಟು, ಕತ್ತುನೋವು, ಬೆನ್ನುನೋವು, ಸ್ಲಿಪ್ ಡಿಸ್ಕ್‌ನಂತಹ ಆರೋಗ್ಯ ಸಮಸ್ಯೆಗಳು ಉಂಟಾಗಬಹುದು. ಸ್ಪೀಡಿಗೆ ಬ್ರೇಕ್ ಹಾಕುವ ಬದಲು ಬದುಕಿಗೇ ಬ್ರೇಕ್ ಹಾಕುತ್ತಿವೆ ಈ ರಸ್ತೆಉಬ್ಬುಗಳು. ಸಣ್ಣ ಗುಡ್ಡವನ್ನೇ ಹತ್ತಿದ ಅನುಭವ ನೀಡುವ ಈಗಿರುವ ರಸ್ತೆಉಬ್ಬುಗಳು ವಾಹನಗಳ ಕೆಳಭಾಗಕ್ಕೆ ಬಹಳಷ್ಟು ಹಾನಿಯನ್ನು ಉಂಟುಮಾಡುತ್ತವೆ. ಬಳಕೆಯಾಗುವ ಇಂಧನ ಪ್ರಮಾಣವೂ ಹೆಚ್ಚು.

ಕೆಲ ವರ್ಷಗಳ ಹಿಂದೆ ಪೊಲೀಸ್ ಇಲಾಖೆಯಿಂದ ಕ್ರಮ ಕೈಗೊಂಡು, ಬೆಂಗಳೂರಿನಲ್ಲಿ ಇದ್ದ ಶೇಕಡ 60ರಷ್ಟು ಅವೈಜ್ಞಾನಿಕವಾದ ರಸ್ತೆಉಬ್ಬುಗಳನ್ನು ಮಾರ್ಪಡಿಸಲಾಗಿತ್ತು ಅಥವಾ ಸಂಪೂರ್ಣ ತೆಗೆಯಲಾಗಿತ್ತು. ಆದರೆ ಆಗಿಂದಾಗ್ಗೆ ಅಲ್ಲಲ್ಲಿ ಮತ್ತೆ ಹೊಸ ರಸ್ತೆಉಬ್ಬುಗಳು ರಾತ್ರೋರಾತ್ರಿ ನಿರ್ಮಾಣವಾಗುತ್ತಿವೆ. ಯಾರು, ಏಕೆ ಇವುಗಳನ್ನು ನಿರ್ಮಿಸಿದ್ದಾರೆ ಎಂಬ ಬಗ್ಗೆ ಪೊಲೀಸರಿಗೆ ಮಾಹಿತಿಯೇ ಇಲ್ಲ. ಆದರೆ ಸಾರ್ವಜನಿಕರಲ್ಲಿ ಈ ರಸ್ತೆಉಬ್ಬುಗಳ ಬಗ್ಗೆ ಅಸಮಾಧಾನವಿದ್ದರೂ ಪ್ರಾಣವನ್ನೇ ತೆಗೆಯುವ ಯಮದೂತರಂತೆ ಗಾಡಿ ಓಡಿಸುವ ದ್ವಿಚಕ್ರ ವಾಹನಗಳ ಸವಾರರ ಬಗ್ಗೆ ಭಯ ಬಹಳಷ್ಟಿದೆ. ಸರ್ಕಾರಿ ವ್ಯವಸ್ಥೆಯ ಬಗ್ಗೆ ಬೇಸರವಿದೆ.



'ವೇಗ ತಗ್ಗಿಸಲು ವೈಜ್ಞಾನಿಕವಾಗಿ ರಸ್ತೆಉಬ್ಬುಗಳನ್ನು ನಿರ್ಮಿಸಬೇಕು ನಿಜ. ಆದರೆ ಆ ಕೆಲಸಕ್ಕೆ ತಗಲುವ ಸಮಯದ ಬಗ್ಗೆ ಅಂದಾಜಿದೆಯೇ? ಸರ್ಕಾರದ ಪ್ರತಿನಿಧಿಗಳಿಗೆ ದೂರು ಸಲ್ಲಿಸಿದರೆ ಅರ್ಜಿ ತನ್ನಿ ಎಂಬ ಉತ್ತರ, ಅರ್ಜಿ ಸಲ್ಲಿಸಿದರೆ ನೋಡೋಣ ಎಂಬ ಪ್ರತಿಕ್ರಿಯೆ, ನಂತರ ಬೇರೆ ಬೇರೆ ವಿಭಾಗಗಳಿಗೆ ಅಲೆದಾಟ, ಕಡೆಗೆ ರಸ್ತೆಉಬ್ಬು ಹಾಕಿದರೂ ಕಳಪೆ ಕಾಮಗಾರಿ, ಇದೆಲ್ಲಕ್ಕಿಂತ ನಾವೇ ದುಡ್ಡು ಹಾಕಿ ನಿರ್ಮಿಸಿಕೊಂಡು ಒಂದಿಷ್ಟು ನೆಮ್ಮದಿ ಪಡೆಯುತ್ತೇವೆ. ಹೇಗಿದ್ದರೂ ಹೇಳುವವರು, ಕೇಳುವವರು ಯಾರೂ ಇಲ್ಲ' ಎಂಬ ಉತ್ತರ ಸಿಗುತ್ತದೆ. ಈ ಧೋರಣೆಯಿಂದ ಪ್ರತೀ ಬೀದಿಯಲ್ಲೂ ಹತ್ತಾರು ರಸ್ತೆಉಬ್ಬುಗಳು ಸಾಮಾನ್ಯವಾಗಿವೆ!

ಪ್ರತಿಬಾರಿ ವಿಧಾನಮಂಡಲದ ಅಧಿವೇಶನದಲ್ಲಿ ರಸ್ತೆಉಬ್ಬುಗಳ ವಿಷಯ ಸಾವು-ನೋವಿನ ಅಂಕಿ-ಅಂಶದೊಂದಿಗೆ ಚರ್ಚೆಯಾಗುತ್ತದೆ. ಎಲ್ಲವನ್ನೂ ದುರಸ್ತಿ ಮಾಡುವ ಭರವಸೆಯೂ ಸಿಗುತ್ತದೆ. ಕೆಲಮಟ್ಟಿಗೆ ಅದು ಈಡೇರುತ್ತದೆ ಎಂಬುದೂ ನಿಜವೇ. ಆದರೆ ಮತ್ತೆ ಅಲ್ಲಲ್ಲಿ ರಸ್ತೆಉಬ್ಬುಗಳು ಏಳುತ್ತವೆ, ಯಥಾಪ್ರಕಾರ ಜನರು ಬೀಳುತ್ತಾರೆ! ಅಂದರೆ ಇವುಗಳ ನಿರ್ಮಾಣ ಮತ್ತು ನಿರ್ವಹಣೆ ಬಗ್ಗೆ ಕಠಿಣ ಕ್ರಮಗಳನ್ನು ಅನುಸರಿಸಲಾಗುತ್ತಿಲ್ಲ. ಇದೆಲ್ಲದರ ಮಧ್ಯೆ ಹೆಚ್ಚುತ್ತಿರುವ ಅಪಘಾತಗಳ ತಡೆಗೆ ಹಾಗೂ ಸುಗಮಸಂಚಾರದ ಉದ್ದೇಶದಿಂದ ರಾಜಧಾನಿಯ ವಿವಿಧ ಪ್ರದೇಶಗಳ ರಸ್ತೆಗಳಲ್ಲಿ ಐದುನೂರಕ್ಕೂ ಹೆಚ್ಚು ರಸ್ತೆಉಬ್ಬುಗಳನ್ನು ಹಾಕುವಂತೆ ಸಂಚಾರ ಪೊಲೀಸರು ಬಿಬಿಎಂಪಿಗೆ ಪ್ರಸ್ತಾವ ಸಲ್ಲಿಸಿದ್ದಾರೆ. ಅದರೊಂದಿಗೇ ಬೆಂಗಳೂರಿನಲ್ಲಿ ನಾಲ್ಕುನೂರಕ್ಕೂ ಹೆಚ್ಚು ಅವೈಜ್ಞಾನಿಕ ರಸ್ತೆಉಬ್ಬುಗಳು ಇದ್ದು, ಅವುಗಳನ್ನು ಬದಲಾಯಿಸುವಂತೆಯೂ ಸೂಚಿಸಿದ್ದಾರೆ.

ಅವೈಜ್ಞಾನಿಕ ರಸ್ತೆಉಬ್ಬುಗಳನ್ನು ತೆಗೆಯಲಿ, ಮಾರ್ಗದರ್ಶಕ ಮಾನದಂಡಗಳಿಗೆ ಅನುಗುಣವಾದವು ಹೆಚ್ಚಲಿ. ಅದರೊಂದಿಗೇ ವಾಹನ ಚಾಲಕರು ರಸ್ತೆ ನಿಯಮಗಳನ್ನು ಸರಿಯಾಗಿ ಪಾಲಿಸುವುದೂ ಸಾರ್ವಜನಿಕರು ಜವಾಬ್ದಾರಿಯಿಂದ ವರ್ತಿಸುವುದೂ ಮುಖ್ಯ.

ವಾಚಕರ ವಾಣಿ

ಅಕ್ರಮ ಪ್ರಶ್ನಿಸುವವರಿಗೆ ಬೇಕು ರಕ್ಷಣೆ

ನರೇಗಾ ಅಕ್ರಮ ಪ್ರಶ್ನಿಸಿದ್ದಕ್ಕೆ ಕನಕಪುರ ತಾಲ್ಲೂಕು ಸಾತನೂರು ಹೋಬಳಿಯ ಹಲಸಿನಮರದ ದೊಡ್ಡಿ ಗ್ರಾಮದಲ್ಲಿ ಮೂರ್ತಿ ಎಂಬ ಯುವಕನ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಲಾಗಿದೆ ಎಂದು ವರದಿಯಾಗಿದೆ (ಪ್ರ.ವಾ., ಡಿ. 24). ಇಲ್ಲಿ ಯುವಕ ಮಾಡಿದ ತಪ್ಪಾದರೂ ಏನು? ಅಕ್ರಮವನ್ನು ಪ್ರಶ್ನಿಸುವುದು ತಪ್ಪೇ? ಹಾಗಿದ್ದರೆ ಅಕ್ರಮವನ್ನು ನೋಡಿಕೊಂಡು ಆತ ಸುಮ್ಮನೆ ಕುಳಿತಿರಬೇಕಿತ್ತೇ? ಅನ್ಯಾಯದ ವಿರುದ್ಧ ಪ್ರಶ್ನೆ ಮಾಡುವುದು ಎಲ್ಲಾ ನಾಗರಿಕರ ಹಕ್ಕು. ಆದರೆ ಹೀಗೆ ಪ್ರಶ್ನಿಸಿದ ಯುವಕ ಹೆಣವಾದದ್ದು ತೀವ್ರ ಖಂಡನೀಯ.

ಕೃತ್ಯಕ್ಕೆ ಕಾರಣರಾದವರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಮುಂದೆ ಇಂತಹ ಅಕ್ರಮಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕು. ಅಕ್ರಮದ ವಿರುದ್ಧ ಧ್ವನಿ ಎತ್ತುವವರ ರಕ್ಷಣೆಗೆ ಮುಂದಾಗಬೇಕು. ಯುವಕನ ಕುಟುಂಬಕ್ಕೆ ರಕ್ಷಣೆ ಒದಗಿಸುವ ಕೆಲಸವನ್ನು ಸರ್ಕಾರ ಮಾಡಬೇಕು.

ತಿಮ್ಮೇಶ್ ಎಚ್. ಗೌರೀಪುರ, ಜಗಳೂರು

ಕಾಲ ಬದಲಾಗಿದೆ ಎಂದರೇನು?

ಹಳೆ ಪಿಂಚಣಿ ಯೋಜನೆ (ಒಪಿಎಸ್) ಮರುಜಾರಿಗೆ ಒತ್ತಾಯಿಸಿ ಬೆಂಗಳೂರಿನಲ್ಲಿ ಸರ್ಕಾರಿ ನೌಕರರು ನಡೆಸುತ್ತಿರುವ ಧರಣಿಯಲ್ಲಿ ಭಾಗವಹಿಸಿ ಮಾತನಾಡಿದ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ, 'ಒಪಿಎಸ್ ಜಾರಿ ಮಾಡಲು ಸಾಧ್ಯವಿಲ್ಲ ಎಂದು ನನ್ನ ಅಧಿಕಾರಾವಧಿಯಲ್ಲಿ ಹೇಳಿದ್ದೆ. ಆದರೆ ಈಗ ಕಾಲ ಬದಲಾಗಿದೆ. ಹೈಕಮಾಂಡ್ ಜತೆ ಚರ್ಚಿಸಿ ನಿಲುವು ಪ್ರಕಟಿಸಲಾಗುವುದು' ಎಂದಿರುವುದಾಗಿ ವರದಿಯಾಗಿದೆ (ಪ್ರ.ವಾ., ಡಿ. 25). ಕಾಲ ಬದಲಾಗಿದೆ ಎಂದರೇನು? ಹೈಕಮಾಂಡ್ ಹಿಮಾಚಲ ಪ್ರದೇಶಕ್ಕೆ ಅನುಮತಿ ಕೊಟ್ಟಿರುವಾಗ ಕರ್ನಾಟಕಕ್ಕೆ ನಿರಾಕರಿಸಲು ಸಾಧ್ಯವೇ? ರಾಜಸ್ಥಾನ, ಛತ್ತೀಸಗಡ ರಾಜ್ಯಗಳೂ ಒಪಿಎಸ್ ಜಾರಿಗೊಳಿಸುವ ಭರವಸೆ ನೀಡಿವೆ. ಹಾಗಾಗಿ 'ಕಾಲ ಬದಲಾಗಿದೆ' ಎಂಬುದಕ್ಕೆ ಅರ್ಥ ಶೀಘ್ರವಾಗಿ ಚುನಾವಣೆ ಬರುತ್ತಿದೆ ಎಂಬುದಾಗಿ ಹೋರಾಟನಿರತ ನೌಕರರು ತಿಳಿದುಕೊಳ್ಳಬೇಕು!

ಗೋಪಾಡ ಕೃಷ್ಣ ಭಟ್, ಬೆಂಗಳೂರು

ಹೀಗಿದೆ ನಮ್ಮ ದೇಶದ ಸ್ಥಿತಿ...

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ದೇಶದ 81.35 ಕೋಟಿ ಬಡವರಿಗೆ ಉಚಿತ ಆಹಾರಧಾನ್ಯ ವಿತರಣೆಯನ್ನು ಕೇಂದ್ರ ಸರ್ಕಾರವು ಇನ್ನೂ ಒಂದು ವರ್ಷದವರೆಗೆ ವಿಸ್ತರಿಸಿದೆ. ಇದರ ಅರ್ಥ ದೇಶದ ಶೇಕಡ 60ರಷ್ಟು ಜನ ಇನ್ನೂ ಬಡವರೆಂದೇ? ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷವಾದರೂ ಇದು ನಮ್ಮ ದೇಶದ ಪರಿಸ್ಥಿತಿಯೇ? ಇದೇ ಈವರೆಗಿನ ಸರ್ಕಾರಗಳ ಸಾಧನೆಯೇ? ಅಥವಾ ಲೂಟಿ ಮಾಡಲು ಇದೊಂದು ಸಾಧನವೇ? ಇದನ್ನೆಲ್ಲಾ ನಿಜ ಎಂದು ನಂಬುವ ನಾವು, ಶೇಕಡ 90ಕ್ಕೂ ಅಧಿಕ ಜನರು ನಿಜವಾಗಿಯೂ ಮೂರ್ಖರು ತಾನೇ?

ಸತೀಶ ಎಂ.ಎಸ್. ಭಟ್ಟ, ಬೆಂಗಳೂರು

ಅವೇ ಸಮಸ್ಯೆ, ಅವೇ ಸುದ್ದಿ!

'ಉತ್ತಮ ವ್ಯಕ್ತಿಗಳಿಗೆ ಟಿಕೆಟ್, ಪಕ್ಷಗಳಿಗೆ ರಾಷ್ಟ್ರಪತಿಗಳ ಸಲಹೆ'. 'ಮತೀಯ ಸಾಮರಸ್ಯ ಮೂಡಿಸುವ ಸಾಹಿತ್ಯಕ್ಕೆ ಕರೆ', 'ಪಕ್ಷಾಂತರ ನಿಷೇಧ ಕಾಯ್ದೆ, ಸಮಗ್ರ ತಿದ್ದುಪಡಿಗೆ ಒಲವು', 'ಚುನಾವಣೆ ಸುಧಾರಣೆಗಳ ಚರ್ಚೆಗೆ ವಿಶೇಷ ಅಧಿವೇಶನ', 'ಆಗಸ್ಟ್ 15ರ ಒಳಗಾಗಿ ಗಡಿ ವಿವಾದ ಅಂತ್ಯಗೊಳಿಸುವುದಾಗಿ ಕರ್ನಾಟಕ ಹಾಗೂ ಮಹಾರಾಷ್ಟ್ರ ಮುಖ್ಯಮಂತ್ರಿಗಳ ಘೋಷಣೆ', 'ರಾಜ್ಯ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಸಿಂಹಪಾಲು', 'ಇಂಗ್ಲಿಷ್ ಮೋಹ, ಕನ್ನಡಕ್ಕೆ ಕಂಟಕ'– ಇವೆಲ್ಲವೂ ಪತ್ರಿಕೆಯ '25 ವರ್ಷಗಳ ಹಿಂದೆ' ಹಾಗೂ '50 ವರ್ಷಗಳ ಹಿಂದೆ' ಅಂಕಣಗಳಲ್ಲಿ ಇತ್ತೀಚೆಗೆ ಬಂದ ಸುದ್ದಿಗಳು. ಸ್ವಾರಸ್ಯವೆಂದರೆ, ಇದೇ ಸಮಸ್ಯೆಗಳು ಈಗಲೂ ಮುಂದುವರಿದಿವೆ ಹಾಗೂ ಇವುಗಳಿಗೆ ಸಂಬಂಧಿಸಿದ ಸುದ್ದಿಗಳು ಈ ದಿನದ ಪತ್ರಿಕೆಯಲ್ಲಿಯೂ ಪ್ರಕಟವಾಗಿರುತ್ತವೆ. ಬಹುಶಃ 75 ವರ್ಷ ಮತ್ತು 100 ವರ್ಷಗಳ ನಂತರವೂ ಈ ಸಮಸ್ಯೆಗಳು ಮುಂದುವರಿದು, ಇವೇ ಸುದ್ದಿಗಳು ಪುನರಾವರ್ತನೆ ಆಗಬಹುದು.

ಆದ್ದರಿಂದ ಜನಸಾಮಾನ್ಯರಾದ ನಾವು, ಈ ಸಮಸ್ಯೆಗಳನ್ನು ಪರಿಹರಿಸುತ್ತೇವೆ ಎಂದು ಹೇಳುವ ಆಡಳಿತಾರೂಢರ ಭರವಸೆಯನ್ನು ನಂಬದೆ, ವ್ಯವಸ್ಥೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬದುಕುವುದನ್ನು ಕಲಿಯುವುದು ಸೂಕ್ತ ಅನಿಸುತ್ತದೆ.

ಡಾ. ಟಿ.ಜಯರಾಂ, ಕೋಲಾರ

ರಾಜಕಾರಣಿಗಳಿಗೇಕೆ ಹಾರಗಳ ಗೀಳು?

ರಾಜಕಾರಣಿಗಳಿಗೆ ವಿವಿಧ ರೀತಿಯ ಹಾರಗಳನ್ನು ಹಾಕಿಸಿಕೊಳ್ಳುವ ಗೀಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದೆ. ಯಾರೋ ಒಬ್ಬರು ಬೃಹತ್ ಸೇಬಿನಹಾರವನ್ನು ಜೆಸಿಬಿ ಯಂತ್ರದ ಮೂಲಕ ಹಾಕಿಸಿಕೊಂಡು ಪ್ರತಿಷ್ಠೆ ಮೆರೆದರು. ಅದೇ ಮಾದರಿ ಎಂದುಕೊಂಡು ಎಲ್ಲ ರಾಜಕಾರಣಿಗಳೂ ಅದೇ ರೀತಿ ವರ್ತಿಸುತ್ತಿದ್ದಾರೆ.

ಈಗ ವಿವಿಧ ರಾಜಕೀಯ ಪಕ್ಷಗಳ ನಾಯಕರು ವಿವಿಧ ಹೆಸರಿನಲ್ಲಿ ಯಾತ್ರೆ ಮಾಡುತ್ತಿದ್ದಾರೆ. ಆ ವೇಳೆ ಅವರ ಅಭಿಮಾನಿಗಳು ಹೂವಿನ ಹಾರ ಬಿಟ್ಟು ನಿಂಬೆಹಣ್ಣಿನ ಹಾರ, ಭತ್ತದ ಹಾರದಂತಹ ಬೃಹತ್ ಗಾತ್ರದ ಹಾರಗಳನ್ನು ಯಂತ್ರದ ಮೂಲಕ ತಂದು ಹಾಕುವುದು ಸಾಮಾನ್ಯವಾಗಿದೆ. ಬೆಂಬಲಿಗರೇನೊ ತಮ್ಮನ್ನು ಮೆಚ್ಚಿಕೊಳ್ಳಲಿ ಎಂದು ಆ ರೀತಿ ವರ್ತಿಸುತ್ತಿದ್ದಾರೆ. ಆದರೆ ನಾಯಕರು ಎನ್ನಿಸಿಕೊಂಡವರು ಅದನ್ನು ತಿರಸ್ಕರಿಸುವ ಮೂಲಕ, ಆಹಾರ ಪದಾರ್ಥಗಳ ನಾಶವನ್ನು ತಪ್ಪಿಸದೇ ಇರುವುದು ನಾಯಕತ್ವದ ಗುಣವಲ್ಲ.

ಕೆಂಗಲ್ ಹನುಮಂತಯ್ಯ ಅವರು ಹೂವಿನ ಹಾರವನ್ನು ಹಾಕಿಸಿಕೊಳ್ಳಲು ಇಚ್ಛಿಸುತ್ತಿರಲಿಲ್ಲ. ಕೊನೆಗೆ ಜನರ ಒತ್ತಾಯಕ್ಕೆ ಮಣಿದು ಒಂದು ಉಪಾಯ ಮಾಡಿ ಹೂವಿನ ಹಾರ ಹಾಕಿಸಿಕೊಳ್ಳುವುದರಿಂದ ತಪ್ಪಿಸಿಕೊಂಡರು. ಅದೆಂದರೆ, ತಮಗೆ ಹಾಕಲು ತಂದ ಹೂವಿನ ಹಾರಗಳನ್ನು ಅಂದಿನ ಸಮಾರಂಭದಲ್ಲೇ ಹರಾಜು ಹಾಕಿಸಿ, ಹೆಚ್ಚು ಹಣ ಬಿಡ್ ಮಾಡಿದವನಿಗೆ ಅದೇ ಹಾರ ಹಾಕುತ್ತಿದ್ದರು. ಬಂದ ಹಣವನ್ನು ಒಟ್ಟುಗೂಡಿಸಿ 'ಕೆಂಗಲ್ ಹನುಮಂತರಾಯ' ದೇಗುಲ ನಿರ್ಮಾಣ ಮಾಡಿ ಜನರಿಗೆ ಅರ್ಪಿಸಿದರು. ಅದೊಂದು ಧಾರ್ಮಿಕ ಸ್ಮಾರಕವಾಗಿ ಉಳಿದುಕೊಂಡಿದೆ. ಆ ಗುಣವು ನಾಯಕನಾಗುವವನಿಗೆ ಇರಬೇಕು.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಿಮಮಾರುತಕ್ಕೆ ನಡುಗುತ್ತಿದೆ ಅಮೆರಿಕ



ಅಮೆರಿಕದ ಲೇಕ್ ಫಾರೆಸ್ಟ್ ಪಾರ್ಕ್ ಪ್ರದೇಶವು ಹಿಮದಿಂದ ಆವೃತವಾಗಿತ್ತು – ಎಪಿ/ಪಿಟಿಐ ಚಿತ್ರ

-48° ಸೆಲ್ಸಿಯಸ್ ಅಮೆರಿಕದ ವಿವಿಧ ನಗರಗಳಲ್ಲಿ ದಾಖಲಾಗಿರುವ ಸರಾಸರಿ ಉಷ್ಣಾಂಶ

17 ಶೀತಗಾಳಿ ಹಾಗೂ ಹಿಮಪಾತದಿಂದ ಮೃತಪಟ್ಟವರ ಸಂಖ್ಯೆ

14 ಲಕ್ಷ ಮನೆಗಳು ಹಾಗೂ ವಾಣಿಜ್ಯ ಮಳಿಗೆಗಳಲ್ಲಿ ವಿದ್ಯುತ್ ಸ್ಥಗಿತದಿಂದ ಕತ್ತಲು

60% ಶೀತಗಾಳಿಯಿಂದ ಬಾಧಿತರಾಗಿರುವ ಅಮೆರಿಕ ಜನರ ಪ್ರಮಾಣ

113 ಕಿ.ಮೀ/ಗಂಟೆ ಅಮೆರಿಕದ ಮೇನ್‌ನಲ್ಲಿ ಬೀಸುತ್ತಿರುವ ಗಾಳಿಯ ಸರಾಸರಿ ವೇಗ

7,500 ವಿಮಾನಗಳ ಸಂಚಾರ ವಿಳಂಬ (ಶನಿವಾರ)

20 ಕೋಟಿ ಅಮೆರಿಕನ್ನರಿಗೆ ಎಚ್ಚರಿಕೆಯ ಸಂದೇಶ ರವಾನೆ

3,300 ವಿಮಾನಗಳ ಸಂಚಾರ ರದ್ದು (ಶನಿವಾರ)

ಅಮೆರಿಕದಲ್ಲಿ ಹಿಮಮಾರುತ ಬೀಸುತ್ತಿದೆ. ದೇಶದ ಕೆಲವು ಪ್ರದೇಶಗಳಲ್ಲಿ ಉಷ್ಣಾಂಶವು ಮೈನಸ್50 ಡಿಗ್ರಿ ಸೆಲ್ಸಿಯಸ್‌ವರೆಗೆ ಕುಸಿದಿದೆ. ಕ್ರಿಸ್‌ಮಸ್ ರಜೆಯನ್ನು ಅನುಭವಿಸಲು ಕಾತರರಾಗಿದ್ದ ಅಮೆರಿಕನ್ನರಲ್ಲಿ ಶೇ 60ಕ್ಕೂ ಹೆಚ್ಚು ಜನರು ಶೀತಮಾರುತದಿಂದಾಗಿ ಮನೆಯಲ್ಲೇ ಇರುವಂತಾಗಿದೆ, ಅದೂ ವಿದ್ಯುತ್ ಇಲ್ಲದೆ. ಇನ್ನು ಮುಂದಿನ 25–30 ವರ್ಷಗಳ ನಂತರ ಇಂತಹ ಸ್ಥಿತಿ ಎದುರಾಗುವುದಿಲ್ಲ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಇದರ ಮಧ್ಯೆಯೇ ಇಂತಹ ಹಿಮಮಾರುತಕ್ಕೆ ಕಾರಣವಾದ ಭೌಗೋಳಿಕ ಅಂಶಗಳತ್ತ ವಿಜ್ಞಾನಿಗಳು ಗಮನ ಹರಿಸಿದ್ದಾರೆ

ಪ್ರಜಾವಾಣಿ ವಾರ್ತೆ

ಅಮೆರಿಕದಲ್ಲಿ ಈಗ ತೀವ್ರ ಹಿಮ, ಚಳಿ, ವೇಗದ ಗಾಳಿ ಮತ್ತು ಮಳೆಯನ್ನು ಉಂಟುಮಾಡುತ್ತಿರುವ ಹಿಮ ಮಾರುತಗಳು ಹೇಗೆ ಸೃಷ್ಟಿಯಾಗುತ್ತವೆ ಎಂಬುದನ್ನು ವಿಜ್ಞಾನಿಗಳು ವಿವರಿಸಿದ್ದಾರೆ. ಭೂಮಿಯ ವಾತಾವರಣದಲ್ಲಿನ ಸಾಮಾನ್ಯ ಪ್ರಕ್ರಿಯೆಗಳಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಇಂತಹ ಸ್ಥಿತಿ ಬಂದೊದಗುತ್ತದೆ. ಇಂತಹ ವ್ಯತ್ಯಾಸದ ಕಾರಣದಿಂದಲೇ ಸಾಮಾನ್ಯ ಚಳಿಗಾಳಿಯು, ಹಿಮಮಾರುತದಂತಹ ತೀವ್ರ ಸ್ವರೂಪವನ್ನು ಪಡೆದುಕೊಳ್ಳುತ್ತದೆ ಎಂದು ಅಮೆರಿಕದ ರಾಷ್ಟ್ರೀಯ ಸಮುದ್ರ ಮತ್ತು ವಾತಾವರಣ ಅಧ್ಯಯನ ಸಂಸ್ಥೆಯ (ಎನ್‌ಒಎಎ) ವಿಜ್ಞಾನಿಗಳು ವಿವರಿಸಿದ್ದಾರೆ.

ಪ್ರತಿವರ್ಷ ಭೂಮಿಯ ಉತ್ತರ ಮತ್ತು ದಕ್ಷಿಣ ಧ್ರುವಗಳಲ್ಲಿ ತಂಪಿನ ವಾತಾವರಣ ಉಂಟಾಗುತ್ತದೆ. ಅಂತಹ ಸಂದರ್ಭದಲ್ಲಿ ವಾಯುಭಾರ ಕುಸಿಯುತ್ತದೆ. ಆಗ ಧ್ರುವ ಪ್ರದೇಶದ ಮೇಲ್ಮೈನಿಂದ 15–30 ಕಿ.ಮೀ. ಎತ್ತರದಲ್ಲಿ ಗಾಳಿಯು ಒಂದು ಪಟ್ಟಿಯ ಸ್ವರೂಪದಲ್ಲಿ ಸುರುಳಿ ಸುತ್ತಲಾರಂಭಿಸುತ್ತದೆ. ಇವನ್ನು ಜೆಟ್ ಸ್ಟ್ರೀಮ್ ಎಂದು ಕರೆಯಲಾಗಿದೆ. ಚಳಿಗಾಲವು ತೀವ್ರತೆ ಪಡೆಯುವ ಸಂದರ್ಭದಲ್ಲಿ ಈ ಮಾರುತವು ಭೂಮಧ್ಯರೇಖೆಯತ್ತ ಚಲಿಸುತ್ತವೆ. ಹೀಗೆ ಚಲಿಸುವಾಗ, ಅವುಗಳ ವ್ಯಾಪ್ತಿ ಹಿಗ್ಗುತ್ತದೆ ಮತ್ತು ತೀವ್ರತೆ ಕಡಿಮೆಯಾಗುತ್ತದೆ. ಈ ಕಾರಣದಿಂದಲೇ ಚಳಿಗಾಲ ಉಂಟಾಗುತ್ತದೆ.

ಹಲವು ಸಂದರ್ಭದಲ್ಲಿ ಭೂಮಿಯಿಂದ 30ಕಿ.ಮೀ.ನಿಂದ 90 ಕಿ.ಮೀ.ನಷ್ಟು ಎತ್ತರದಲ್ಲಿ ಮತ್ತಷ್ಟು ತೀವ್ರವಾದ ಸುಳಿಗಾಳಿ ಉಂಟಾಗುತ್ತದೆ. ವಾತಾವರಣದಲ್ಲಿ ಉಷ್ಣಾಂಶ ತೀವ್ರವಾಗಿ ಕುಸಿದಾಗ ಇದು ಉಂಟಾಗುತ್ತದೆ. ಈ ಸುಳಿಗಾಳಿಯು ಭೂಮಿಯ ಮೇಲ್ಮೈನಲ್ಲಿರುವ ಜಲಮೂಲಗಳಿಂದ, ನೀರಿನ ಕಣಗಳನ್ನು ಆವಿ ಸ್ವರೂಪದಲ್ಲಿ ಮೇಲಕ್ಕೆ ಎತ್ತುತ್ತದೆ. ಇದರಿಂದ ತೀವ್ರ ಸಾಂದ್ರತೆಯ ಮೋಡಗಳು ರೂಪುಗೊಳ್ಳುತ್ತವೆ. ಹೀಗೆ ಮೇಲೆ ಹೋದ ನೀರಿನ ಕಣಗಳು, ವಾತಾವರಣದ ಉಷ್ಣಾಂಶವನ್ನು ಮತ್ತಷ್ಟು ಕಡಿಮೆ ಮಾಡುತ್ತವೆ. ಆಗ ಇವು ಹಿಮದ ಸ್ವರೂಪ ಪಡೆದುಕೊಳ್ಳುತ್ತವೆ. ಇವುಗಳ ಸಾಂದ್ರತೆ ಮತ್ತಷ್ಟು ಹೆಚ್ಚಾದರೆ, ಹಿಮ ಸುರಿಯುತ್ತದೆ. ಇದು ಪ್ರತಿ ವರ್ಷ ಸಾಮಾನ್ಯವಾಗಿ ನಡೆಯುವ ಪ್ರಕ್ರಿಯೆ.

ಈ ಸುಳಿಗಾಳಿಯ ಕೇಂದ್ರಬಿಂದು ಅಸ್ಥಿರವಾದರೆ, ಇಡೀ ವಾತಾವರಣದ ಮೇಲೆ ಅದರ ಪರಿಣಾಮ ಉಂಟಾಗುತ್ತದೆ. ಸುಳಿಗಾಳಿಯ ಕೇಂದ್ರಬಿಂದುವು ಅಸ್ಥಿರವಾದರೆ, ಸುಳಿಗಾಳಿಯು ಅಡ್ಡಾದಿಡ್ಡಿ ತಿರುಗುತ್ತದೆ. ಇಂತಹ ಸುಳಿಗಾಳಿಯ ವ್ಯಾಸವು ಸಾವಿರಾರು ಕಿ.ಮೀ.ನಷ್ಟು ದೊಡ್ಡದಾಗಿರುತ್ತವೆ. ಅದರ ಕೇಂದ್ರಬಿಂದು ಅಸ್ಥಿರವಾದಾಗ ಈ ವ್ಯಾಸದಲ್ಲಿ ಬದಲಾವಣೆ ಉಂಟಾಗುತ್ತದೆ. ಸುಳಿಗಾಳಿಯು ಮೊಟ್ಟೆಯಾಕಾರ ಪಡೆಯಬಹುದು ಅಥವಾ ಎರಡು ಸುಳಿಗಾಳಿಗಳಾಗಿ ಮಾರ್ಪಾಡಾಗಬಹುದು. ಇದರ ಜತೆಯಲ್ಲಿ ಅವುಗಳ ವ್ಯಾಪ್ತಿ ಭಾರಿ ಪ್ರಮಾಣದಲ್ಲಿ ಹಿಗ್ಗುತ್ತದೆ. ಸ್ಥಿರ ಸುಳಿಗಾಳಿಯ ವ್ಯಾಪ್ತಿಯು ಉತ್ತರ ಅಥವಾ ದಕ್ಷಿಣ ಧ್ರುವದಲ್ಲೇ ಕೇಂದ್ರಿತವಾಗಿರುತ್ತದೆ. ಅಸ್ಥಿರವಾದಾಗ ಸುಳಿಗಾಳಿಯ ವ್ಯಾಪ್ತಿಯು ಉತ್ತರ ಧ್ರುವದಿಂದ ದಕ್ಷಿಣ ಮತ್ತು ಪೂರ್ವದ ಕಡೆಗೆ ಹಿಗ್ಗುತ್ತದೆ.

ಹೀಗೆ ದಕ್ಷಿಣ ಮತ್ತು ಪೂರ್ವದತ್ತ ಈ ಸುಳಿಗಾಳಿ ಚಲಿಸುವಾಗ ಅವು ತಮ್ಮ ಕೆಳಗೆ ಇರುವ ಜೆಟ್‌ಸ್ಟ್ರೀಮ್ ಅನ್ನೂ ಪ್ರಭಾವಿಸುತ್ತವೆ. ಆಗ ಜೆಟ್‌ಸ್ಟ್ರೀಮ್‌ಗಳೂ ವೃತ್ತಾಕಾರವನ್ನು ಬಿಟ್ಟು, ಮೊಟ್ಟೆಯಾಕಾರದಲ್ಲಿ ಚಲಿಸುತ್ತವೆ. ಆಗ ಸುಳಿಗಾಳಿ ಮತ್ತು ಜೆಟ್ ಸ್ಟ್ರೀಮ್ ಎರಡರ ವ್ಯಾಪ್ತಿಯೂ ಹಿಗ್ಗುತ್ತದೆ. ಹೀಗೆ ಹಿಗ್ಗುವಾಗ ಅವುಗಳ ಹಾದಿಯಲ್ಲಿರುವ ಸರೋವರ, ಸಾಗರಗಳಲ್ಲಿನ ಮತ್ತಷ್ಟು ನೀರನ್ನು ಆವಿ ಮಾಡುತ್ತವೆ. ಇದರಿಂದ ಈ ಸುಳಿಗಾಳಿಯಲ್ಲಿ ಇರುವ ಮೋಡಗಳ ಸಾಂದ್ರತೆ ಮತ್ತಷ್ಟು ಹೆಚ್ಚುತ್ತದೆ ಹಾಗೂ ಅವು ಹಿಮವಾಗಿ ಬೀಳಲಾರಂಭಿಸುತ್ತವೆ. ಈಗ ಅಮೆರಿಕದಲ್ಲೂ ಆಗಿರುವುದೇ ಇದೇ.

ಉತ್ತರ ಧ್ರುವದಿಂದ ದಕ್ಷಿಣದತ್ತ ಸುಳಿಗಾಳಿ ಮತ್ತು ಜೆಟ್‌ಸ್ಟ್ರೀಮ್‌ಗಳು ಬಂದಿವೆ. ಹೀಗೆ ಬರುವಾಗ ಅಮೆರಿಕದ ಉತ್ತರ ಭಾಗದಲ್ಲಿರುವ ಐದು ಮಹಾ ಸರೋವರಗಳಿಂದ (ಇವನ್ನು ಗ್ರೇಟ್ ಲೇಕ್ಸ್ ಎಂದು ಕರೆಯಲಾಗುತ್ತದೆ) ಭಾರಿ ಪ್ರಮಾಣದ ನೀರನ್ನು ಆವಿ ಮಾಡಿವೆ. ಇದರಿಂದ ಈ ಮಾರುತಗಳಲ್ಲಿನ ನೀರಿನ ಸಾಂದ್ರತೆ ಹೆಚ್ಚಾಗಿದೆ. ಇದರಿಂದ ವಾತಾವರಣ ತೀರಾ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಜತೆಗೆ ಹಿಮಪಾತವಾಗುತ್ತಿದೆ. ಸುಳಿಗಾಳಿ ಮತ್ತು ಜೆಟ್ ಸ್ಟ್ರೀಮ್ ಒಟ್ಟಿಗೇ ಬೀಸುತ್ತಿರುವ ಕಾರಣ ಕೆಲವು ಪ್ರದೇಶದಲ್ಲಿ 100 ಕಿ.ಮೀ.ಗಿಂತಲೂ ಹೆಚ್ಚಿನ ವೇಗದಲ್ಲಿ ಗಾಳಿ ಬೀಡುತ್ತಿದೆ. ಈ ಗಾಳಿಯು ಹಿಮವನ್ನೂ ತೂರುತ್ತಿರುವ ಕಾರಣ, ಹಿಮಮಾರುತ ಉಂಟಾಗಿದೆ. ಇಡೀ ವಿದ್ಯಮಾನವನ್ನು ಒಟ್ಟಾಗಿ 'ಬಾಂಬ್ ಸೈಕ್ಲೋನ್' ಎಂದೂ ಕರೆಯಲಾಗುತ್ತದೆ ಎಂದು ಎನ್‌ಒಎಎ ವಿವರಿಸಿದೆ.

ಇದರ ಮಧ್ಯೆ ದಕ್ಷಿಣ ಭಾಗದಿಂದ ಅಮೆರಿಕದತ್ತ ಬಿಸಿಗಾಳಿ ಬೀಸುತ್ತಿದೆ. ಶೀತಮಾರುತ ಮತ್ತು ಬಿಸಿಗಾಳಿ ಪರಸ್ಪರ ಎದುರಾಗುತ್ತಿರುವ ಪ್ರದೇಶದಲ್ಲಿ ಹಿಮ ಮಾರುತದ ಜತೆಗೆ ಮಳೆಯೂ ಆಗುತ್ತಿದೆ.

ಒಟ್ಟಾರೆ, ಅಮೆರಿಕದ 12ಕ್ಕೂ ಹೆಚ್ಚು ರಾಜ್ಯಗಳ ಮೇಲ್ಮೈ ಹಲವು ಅಡಿಗಳ ಹಿಮರಾಶಿಯಿಂದ ಮುಚ್ಚಿಹೋಗಿವೆ. ವಾತಾವರಣದಲ್ಲೂ ಹಿಮ ಇರುವ ಕಾರಣ, ಮಂದಬೆಳಕು ಉಂಟಾಗಿದೆ. ಹಿಮದ ಕಾರಣ ಜಲವಿದ್ಯುತ್ ಸ್ಥಾವರಗಳು, ಸೌರವಿದ್ಯುತ್ ಮತ್ತು ಪವನ ವಿದ್ಯುತ್ ಸ್ಥಾವರಗಳು ಸ್ಥಗಿತವಾಗಿವೆ. ಭಾರಿ ವೇಗದ ಗಾಳಿ ಬೀಸುತ್ತಿರುವ ಕಾರಣ ವಿದ್ಯುತ್ ಕಂಬಗಳು ಉರುಳಿವೆ. ಹೀಗಾಗಿ ದೇಶದ ಬಹುಪಾಲು ವಿದ್ಯುತ್ ಜಾಲವೇ ಕುಸಿದುಬಿದ್ದಿದೆ. ಹೊರಗೆ ಓಡಾಡಲೂ ಸಾಧ್ಯವಿಲ್ಲದ ಕಾರಣ, ಜನರು ಮನೆಗಳಲ್ಲೇ ಉಳಿಯಬೇಕಾಗಿದೆ. ಒಟ್ಟಾರೆ ಅಮೆರಿಕನ್ನರ ಕ್ರಿಸ್‌ಮಸ್ ರಜೆಯ ಮೇಲೆ ಹಿಮ ಮುಸುಕಿದೆ.

ಉತ್ತರ ಧ್ರುವ ಸುಳಿಗಾಳಿ

ಧ್ರುವ ಪ್ರದೇಶದ ಸ್ಥಿರ ಸುಳಿಗಾಳಿ



ಧ್ರುವ ಪ್ರದೇಶದ 'ಜೆಟ್ ಸ್ಟ್ರೀಮ್' ಅತಿವೇಗದಲ್ಲಿ ಪಶ್ಚಿಮದಿಂದ ಪೂರ್ವದ ಕಡೆಗೆ ಬೀಸುವ ಮಾರುತವೇ 'ಜೆಟ್ ಸ್ಟ್ರೀಮ್'. 250 ಮೈಲಿ ವೇಗದಲ್ಲಿ ಕಿರಿದಾದ ಪಥದಲ್ಲಿ ವೃತ್ತಾಕಾರವಾಗಿ ಸಾಗುತ್ತದೆ. ಇಂತಹ ನಾಲ್ಕು ಜೆಟ್‌ಸ್ಟ್ರೀಮ್‌ಗಳು ಭೂಗೋಳವನ್ನು ಸುತ್ತುತ್ತವೆ. ಉತ್ತರ ಧ್ರುವ ಹಾಗೂ ದಕ್ಷಿಣ ಧ್ರುವದಲ್ಲಿ ತಲಾ ಒಂದು ಹಾಗೂ ಭೂಮಧ್ಯರೇಖೆಯ ಸಮೀಪದಲ್ಲಿ ಎರಡು ಜೆಟ್ ಸ್ಟ್ರೀಮ್‌ಗಳಿವೆ.

ಭೂಮಿಯಿಂದ 30ರಿಂದ 90 ಕಿ.ಮೀ. ಎತ್ತರದಲ್ಲಿ ವ್ಯಾಪಿಸಿದೆ

ಭೂಮಿಯಿಂದ 15ರಿಂದ 30 ಕಿ.ಮೀ. ಎತ್ತರದಲ್ಲಿ ವ್ಯಾಪಿಸಿದೆ

ಉತ್ತರ ಧ್ರುವದಲ್ಲಿ ಸೂರ್ಯನ ಕಿರಣಗಳು ಭೂಮಿಯನ್ನು ನೇರವಾಗಿ ತಲುಪುವುದಿಲ್ಲ. ಹೀಗಾಗಿ ಇಲ್ಲಿನ ಭೂಮೇಲ್ಭಾಗದ ವಾತಾವರಣದಲ್ಲಿ ಸದಾ ಶೀತಗಾಳಿ ಇರುತ್ತದೆ. ಧ್ರುವ ಪ್ರದೇಶವಾಗಿರುವ ಕಾರಣ, ಇದು ಸುಳಿಗಾಳಿಯಾಗಿ ಸುತ್ತುತ್ತಿರುತ್ತದೆ

ಉತ್ತರ ಧ್ರುವದ ಅಸ್ಥಿರ ಸುಳಿಗಾಳಿ




ಎರಡು ಅಥವಾ ಮೂರು ವರ್ಷಗಳಿಗೊಮ್ಮೆ, ಉತ್ತರ ಧ್ರುವದ ಸುಳಿಗಾಳಿಯು (ವರ್ಟೆಕ್ಸ್) ದುರ್ಬಲವಾಗುತ್ತದೆ. ಸುಳಿಗಾಳಿಯು ಧ್ರುವ ವಲಯದ ಆಚೀಚೆ ಸರಿದು, ಎರಡು ಭಾಗವಾಗುತ್ತದೆ. ಈ ಕಾರಣಕ್ಕೆ ಜೆಟ್ ಸ್ಟ್ರೀಮ್ ಸಹ ದುರ್ಬಲಗೊಂಡು, ತನ್ನ ವೃತ್ತಾಕಾರದ ಪಥವನ್ನು ಬದಲಿಸುತ್ತದೆ. ಈ ವಿದ್ಯಮಾನದಲ್ಲಿ ಶೀತಗಾಳಿಯು ದಕ್ಷಿಣಕ್ಕೂ (ಅಮೆರಿಕದ ಕಡೆಗೆ), ಬಿಸಿಗಾಳಿಯು ಉತ್ತರದ (ಆರ್ಕ್‌ಟಿಕ್) ಕಡೆಗೂ ಚಲಿಸುತ್ತವೆ.

ದೀರ್ಘಾವಧಿ ಪರಿಣಾಮ

ಈ ಸ್ವರೂಪದ ಹಿಮ ಮತ್ತು ಶೀತ ಮಾರುತಗಳು ತಕ್ಷಣಕ್ಕೆ ಜನಜೀವನವನ್ನು ಅಸ್ತವ್ಯಸ್ತಗೊಳಿಸುತ್ತವೆ. ಆದರೆ, ದೀರ್ಘಾವಧಿಯಲ್ಲಿ ಪರಿಸರದ ಮೇಲೆ ಜೀವವೈವಿಧ್ಯದ ಮೇಲೆ ಭಾರಿ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ವಿಜ್ಞಾನಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ಅಮೆರಿಕದ ಕೆಲವು ಪ್ರದೇಶಗಳಲ್ಲಿ ಡಿಸೆಂಬರ್ ಎರಡನೇ ವಾರದಲ್ಲಿ ವರ್ಷದ ಅತ್ಯಂತ ಬಿಸಿ ದಿನಗಳು ದಾಖಲಾಗಿದ್ದವು. ಆದರೆ, ಒಂದೇ ವಾರದಲ್ಲಿ ಅಂತಹ ಪ್ರದೇಶಗಳಲ್ಲಿನ ಉಷ್ಣಾಂಶವು 40 ಡಿಗ್ರಿ ಸೆಲ್ಸಿಯಸ್‌ನಷ್ಟು ಕುಸಿದಿದೆ. ಹೀಗೆ ಭಾರಿ ಪ್ರಮಾಣದ ಉಷ್ಣಾಂಶ ಕುಸಿತವು ದಿಢೀರ್ ಎಂದು ಸಂಭವಿಸಿದರೆ ಅದರಿಂದ ಪ್ರಾಣಿ ಪಕ್ಷಿಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಹೆಚ್ಚು ಚಳಿ ಇರುವ ಕಾರಣ ಪ್ರಾಣಿ ಪಕ್ಷಿಗಳು ದೇಹದ ಉಷ್ಣಾಂಶವನ್ನು ಕಾಯ್ದುಕೊಳ್ಳಲು ಸಾಮಾನ್ಯಕ್ಕಿಂತ ಹೆಚ್ಚು ಆಹಾರವನ್ನು ಸೇವಿಸಬೇಕಾಗುತ್ತದೆ. ಆದರೆ, ಹಿಮ ಮುಸುಕಿರುವ ಕಾರಣ ಆಹಾರ ಲಭ್ಯತೆಯೂ ಕ್ಷೀಣಿಸಿದೆ. ಇದರಿಂದ ಹಲವು ಪ್ರಾಣಿ ಪಕ್ಷಿಗಳು ಸಾವನ್ನಪ್ಪುವ ಅಪಾಯವಿರುತ್ತದೆ. ಕೆಲವು ಪಕ್ಷಿಗಳು ಚಳಿಗಾಲದಲ್ಲಿ ಆಹಾರ ಲಭ್ಯತೆಯ ಪ್ರದೇಶಗಳಿಗೆ ವಲಸೆ ಹೋಗುತ್ತವೆ. ಅಮೆರಿಕಕ್ಕೂ ನೂರಾರು ಪ್ರಭೇದದ ಪಕ್ಷಿಗಳು ಈ ರೀತಿ ವಲಸೆ ಬರುತ್ತವೆ. ಆ ಪಕ್ಷಿಗಳಿಗೆ ಈಗ ಆಹಾರ ದೊರೆಯದೇ ಇರುವ ಅಪಾಯವಿದೆ. ಜತೆಗೆ ಹಲವು ಪಕ್ಷಿಗಳು ವಲಸೆಯನ್ನು ಮೊಟಕುಗೊಳಿಸುವ ಸಾಧ್ಯತೆ ಇದೆ ಎಂದು ವಿಜ್ಞಾನಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ಉತ್ತರ ಭಾರತಕ್ಕೂ ಶೀತ



ಅಮೃತಸರದಲ್ಲಿ ಭಾನುವಾರ ದಟ್ಟ ಮಂಜು ಆವರಿಸಿತ್ತು

ನವದೆಹಲಿ (ಪಿಟಿಐ): ದೇಶದ ಉತ್ತರ ಭಾಗ ಹಾಗೂ ವಾಯವ್ಯ ಭಾಗದ ರಾಜ್ಯಗಳು ವಿಪರೀತ ಚಳಿಯಿಂದ ನಡುಗುತ್ತಿವೆ. ದೆಹಲಿ, ಚಂಡೀಗಢ, ಪಂಜಾಬ್, ಹರಿಯಾಣ ಹಾಗೂ ರಾಜಸ್ಥಾನದ ಕೆಲವು ಭಾಗಗಳಲ್ಲಿ ಉಷ್ಣಾಂಶ ಭಾರಿ ಪ್ರಮಾಣದಲ್ಲಿ ಕುಸಿದಿದೆ. ಹಲವು ಕಡೆ ದಟ್ಟ ಮಂಜು ಆವರಿಸಿದೆ.

ಕ್ರಿಸ್‌ಮಸ್ ಹಬ್ಬ ಹಾಗೂ ವರ್ಷಾಂತ್ಯದ ರಜೆಯ ಹುಮ್ಮಸ್ಸಿನಲ್ಲಿದ್ದ ಜನರಿಗೆ ತೀವ್ರ ಚಳಿ ಹಾಗೂ ಮಂಜಿನ ವಾತಾವರಣವು ತಣ್ಣೀರೆರಚಿದೆ. ಮುಂದಿನ ನಾಲ್ಕು ದಿನಗಳವರೆಗೆ ಈ ರಾಜ್ಯಗಳಲ್ಲಿ ಇದೇ ಪರಿಸ್ಥಿತಿ ಮುಂದುವರಿಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಸೂಚಿಸಿದೆ.

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಭಾನುವಾರ 5.3 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಕಂಡುಬಂದಿದ್ದು, ಇದು ಈ ಋತುವಿನ ಅತಿಕಡಿಮೆ ಉಷ್ಣಾಂಶವಾಗಿದೆ. ನಗರದ ಆಗಸದಲ್ಲಿ ದಟ್ಟ ಮಂಜು ಆವರಿಸಿದ್ದು, 14 ರೈಲುಗಳ ಸಂಚಾರ ವಿಳಂಬವಾಗಿದೆ ಎಂದು ಉತ್ತರ ರೈಲ್ವೆ ವಿಭಾಗ ತಿಳಿಸಿದೆ.

ಜಮ್ಮು ಕಾಶ್ಮೀರದಾದ್ಯಂತ ಉಷ್ಣಾಂಶ ಭಾರಿ ಪ್ರಮಾಣದಲ್ಲಿ ಕುಸಿದಿದೆ. ಶ್ರೀನಗರದಲ್ಲಿ ಮೈನಸ್ 5.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ರಾಜಸ್ಥಾನದ ಸಿಕಾರ್‌ನಲ್ಲಿ 0.5 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ವರದಿಯಾಗಿದೆ. ಚುರು, ಅಲ್ವಾರ್, ಬಿಕಾನೇರ್‌ಗಳಲ್ಲಿ 5 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಕಡಿಮೆ ಉಷ್ಣಾಂಶ ವರದಿಯಾಗಿದೆ. ದೆಹಲಿ ಹಾಗೂ ಹಿಮಾಚಲ ಪ್ರದೇಶದಲ್ಲಿ ಮಂಜು ಆವರಿಸಿದ್ದು, ಅದು ಇನ್ನಷ್ಟು ಹೆಚ್ಚುವ ಸಾಧ್ಯತೆಯಿದೆ. ಚಂಡೀಗಢ, ಪಂಜಾಬ್‌ನಲ್ಲೂ ಆವರಿಸಿರುವ ಮಂಜಿನ ಹೊದಿಕೆ ಇನ್ನಷ್ಟು ದಟ್ಟವಾಗುವ ಸಾಧ್ಯತೆಯಿದೆ. ಡಿ.27ರವರೆಗೆ ಇದೇ ಪರಿಸ್ಥಿತಿ ಇರಲಿದೆ ಎಂದು ತಿಳಿಸಿದೆ. ಇಷ್ಟೇ ಅಲ್ಲದೆ, ಬಿಹಾರ, ಪಶ್ಚಿಮ ಬಂಗಾಳ, ಸಿಕ್ಕಿಂ, ಗೋವಾ, ಅಸ್ಸಾಂ, ತ್ರಿಪುರಾ ರಾಜ್ಯಗಳ ಕೆಲವು ಭಾಗಗಳಲ್ಲೂ ಮಂಜು ಆವರಿಸಿದೆ.

ಉತ್ತರ ಪ್ರದೇಶ ಮತ್ತು ರಾಜಸ್ಥಾನದ ವಾಯವ್ಯ ಭಾಗದ ಜನರು ಚಳಿ ಗಾಳಿಯನ್ನು ಎದುರಿಸಲಿದ್ದಾರೆ. ರಾಜಸ್ಥಾನದ ಉತ್ತರ ಭಾಗದಲ್ಲಿ ತೀವ್ರ ಸ್ವರೂಪದ ಚಳಿ ಇನ್ನೂ ಕೆಲವು ದಿನ ಇರಲಿದೆ ಎಂದು ಇಲಾಖೆ ತಿಳಿಸಿದೆ. ಪಂಜಾಬ್, ಹರಿಯಾಣ, ದೆಹಲಿ ಹಾಗೂ ಹಿಮಾಚಲ ಪ್ರದೇಶದಲ್ಲಿ ಸೋಮವಾರದವರೆಗೂ ತೀವ್ರ ಚಳಿ ಮುಂದುವರಿಯಲಿದ್ದು, ಉಷ್ಣಾಂಶ ಇನ್ನಷ್ಟು ಕುಸಿತ ಕಾಣಲಿದೆ ಎಂದು ಅಂದಾಜಿಸಿದೆ. ದಟ್ಟ ಮಂಜು ಹಾಗೂ ತೀವ್ರ ಚಳಿಗೆ ಮೆಡಿಟರೇನಿಯನ್ ಸಮುದ್ರ ಪ್ರದೇಶದ ಹವಾಮಾನ ವಿದ್ಯಮಾನಗಳು ಕಾರಣ ಎಂದು ತಜ್ಞರು ಹೇಳಿದ್ದಾರೆ.

ಆಧಾರ: ಎನ್‌ಒಎಎ, ಗಾರ್ಡಿಯನ್, ರಾಯಿಟರ್ಸ್, ಎಎಫ್‌ಪಿ

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಭಾರತ್ ಜೋಡೋ' ಯಾತ್ರೆಯ ವೇಳೆ ಹರಿಯಾಣದ ಕಾಂಗ್ರೆಸ್ ಮುಖಂಡ ಹಾಗೂ ಮಾಜಿ ಸಚಿವ ಜಿತೇಂದ್ರ ಸಿಂಗ್ ಅವರು ರಾಹುಲ್ ಗಾಂಧಿ ಅವರ ಷೂ ಲೇಸ್ ಕಟ್ಟಿದ್ದಾರೆ ಎನ್ನಲಾದ ವಿಡಿಯೊ ಹರಿದಾಡುತ್ತಿದೆ. ಬಿಜೆಪಿ ಐಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಅವರು ವಿಡಿಯೊವನ್ನು ಟ್ವೀಟ್ ಮಾಡಿದ್ದು, ರಾಹುಲ್ ಸೊಕ್ಕಿನ ವರ್ತನೆ ತೋರಿದ್ದಾರೆ ಎಂದು ಟೀಕಿಸಿದ್ದಾರೆ. ಹಲವು ಬಿಜೆಪಿ ಮುಖಂಡರೂ ಮರುಟ್ವೀಟ್ ಮಾಡಿದ್ದಾರೆ. ಆದರೆ ಇದು ಸುಳ್ಳು.



ಜಿತೇಂದ್ರ ಸಿಂಗ್ ಅವರು ರಾಹುಲ್ ಅವರ ಷೂಲೇಸ್ ಕಟ್ಟಿದ್ದಾರೆ ಎಂಬುದು ಸುಳ್ಳು ಎಂದು 'ಆಲ್ಟ್ ನ್ಯೂಸ್' ವರದಿ ಮಾಡಿದೆ. ಮತ್ತೊಂದು ಮಗ್ಗುಲಿನ ದೃಶ್ಯವನ್ನು ಪೋಸ್ಟ್ ಮಾಡಿರುವ ಜಿತೇಂದ್ರ ಸಿಂಗ್, 'ನನ್ನ ಕಾಲಿನ ಷೂಲೇಸ್ ಅನ್ನು ನಾನು ಕಟ್ಟಿಕೊಂಡೆ. ಇದನ್ನು ಬಿಜೆಪಿ ತಪ್ಪಾಗಿ ಅರ್ಥೈಸಿ ಅಪಪ್ರಚಾರ ಮಾಡುತ್ತಿದೆ' ಎಂದು ಆರೋಪಿಸಿದ್ದಾರೆ. ಯಾತ್ರೆಯಿಂದ ಕಂಗೆಟ್ಟಿರುವ ಬಿಜೆಪಿ, ಸುಳ್ಳುಗಳನ್ನು ಹೆಣೆಯುತ್ತಿದೆ ಎಂದು ಆರೋಪಿಸಿರುವ ಕಾಂಗ್ರೆಸ್ ನಾಯಕಿ ಸುಪ್ರಿಯಾ ಶ್ರೀನಾಥೆ ಅವರು, ಮತ್ತೊಂದು ಆಯಾಮದ ವಿಡಿಯೊವನ್ನು ಟ್ವೀಟ್ ಮಾಡಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಇದೂ ಶಾಶ್ವತವಲ್ಲ

ಕುಂದದೆಂದಿಗುಮೆನ್ನಿಸುವ ಮನದ ಕಾತುರತೆ - |
ಯೆಂದೊ ತಾನೇ ಬಳಲಿ ತಣ್ಣಗಾಗುವುದು ||
ಮಂದದಾ ಕಾರ್ಮೋಡ ಬಿರಿದು ರವಿ ಬೆಳಗುವನು |
ಅಂದಿನಾ ಸುಖವೆ ಸುಖ – ಮಂಕುತಿಮ್ಮ || 785 ||

ಪದ-ಅರ್ಥ: ಕುಂದದೆಂದಿಗುಮೆನ್ನಿಸುವ = ಕುಂದದು (ಕಡಿಮೆಯಾಗದು) + ಎಂದಿಗು + ಎನ್ನಿಸುವ, ಮಂದದಾ = ಮಂದದ (ದಟ್ಟವಾದ) + ಆ, ಕಾರ್ಮೋಡ = ಮಳೆಸುರಿಸುವ ಕಪ್ಪು ಮೋಡ.

ವಾಚ್ಯಾರ್ಥ: ಎಂದೆಂದಿಗೂ ಕಡಿಮೆಯಾಗದು ಎಂದುಕೊಂಡ ಮನಸ್ಸಿನ ತಳಮಳ ದಿನಕಳೆದಂತೆ ತಾನೇ ಸೋತು ತಣ್ಣಗಾಗುತ್ತದೆ. ದಟ್ಟವಾದ ಕರಿಮೋಡವೂ ಕರಗಿ ನೀರಾಗಿ ಸುರಿದು, ಸೂರ್ಯ ಮತ್ತೆ ಹೊಳೆಯುತ್ತಾನೆ. ಹಾಗೆ ಆದಾಗ ದೊರೆಯುವ ಸುಖವೇ ಸುಖ.

ವಿವರಣೆ: ಅವನೊಬ್ಬ ರಾಜ. ಸಮರ್ಥ. ತನ್ನ ರಾಜ್ಯವನ್ನು ತುಂಬ ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಆತ ಸೂಕ್ಷ್ಮ ಕೂಡ. ಆಗಾಗ ಜ್ಞಾನಿಗಳೊಡನೆ, ಸಂತರೊಡನೆ ಚಿಂತನೆ ನಡೆಸಿ ತನ್ನ ಬಾಳನ್ನು ಇನ್ನಷ್ಟು ಸುಂದರವಾಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಅವನಿಗೆ ಒಂದೇ ಪ್ರಶ್ನೆ. ಅದನ್ನೇ ತನ್ನ ಸಂಪರ್ಕಕ್ಕೆ ಬಂದ ಎಲ್ಲ ಸಂತರಿಗೆ ಕೇಳುತ್ತಿದ್ದ. ದುಃಖದಲ್ಲೂ ಸಂತೋಷದಲ್ಲೂ ಮನಸ್ಸನ್ನು ತಿಳಿಮಾಡುವ ಒಂದೇ ಸಂದೇಶ ಇದೆಯೇ? ಎಲ್ಲರೂ ಆತನಿಗೆ ಹೇಳುತ್ತಿದ್ದರು, "ದುಃಖಕ್ಕೆ ಒಂದು ಸಮಾಧಾನ ಹೇಳಬಹುದು, ಸಂತೋಷಕ್ಕೆ ಬಂದು ಮೆಚ್ಚಿಕೆಯ ಮಾತು ಸಹಜ. ಎರಡಕ್ಕೂ ಹೊಂದಾಣಿಕೆಯಾಗುವ ಒಂದೇ ಮಾತು ಕಷ್ಟ. ಯಾಕೆಂದರೆ ಎರಡೂ ಬೇರೆ ಸಂದರ್ಭಗಳಲ್ಲವೆ?" ಆತ ಒಮ್ಮೆ ಹಿಮಾಲಯಕ್ಕೆ ಪ್ರವಾಸ ಹೊರಟ. ಅಲ್ಲಿಯೂ ಅವನಿಗೆ ಅದೇ ಚಿಂತೆ. ಎಲ್ಲ ಸಂದರ್ಭಗಳಿಗೂ ಹೊಂದುವ ತಿಳುವಳಿಕೆಯ ಒಂದು ಮಾತು. ದಾರಿಯಲ್ಲಿ ಸಿಕ್ಕವರನ್ನೆಲ್ಲ ಕೇಳಿದ. ಯಾರೂ ಸಮಾಧಾನಕರವಾದ ಉತ್ತರವನ್ನು ನೀಡಲಿಲ್ಲ. ಕೊನೆಗೆ ನಿರಾಶನಾಗಿ ತನ್ನ ರಾಜ್ಯಕ್ಕೆ ಮರಳಿ ಹೊರಡಬೇಕು ಎಂದುಕೊಂಡಾಗ, ನದೀ ತೀರದಲ್ಲಿ ಒಬ್ಬ ಮನುಷ್ಯ ಏಕಾಂಗಿಯಾಗಿ ಧ್ಯಾನ ಮಾಡುತ್ತ ಕುಳಿತದ್ದನ್ನು ಕಂಡ. ರಾಜ ಅವನ ಮುಂದೆ ಹೋಗಿ ಕುಳಿತ. ಅರ್ಧಗಂಟೆಯ ನಂತರ ಕಣ್ಣು ತೆರೆದ ಆ ಸಾಧಕ, ಮುಂದೆ ಕುಳಿತ ರಾಜನನ್ನು ಕಂಡ. ಈತ ಮತ್ತೆ ತನ್ನ ಅದೇ ಪ್ರಶ್ನೆಯನ್ನು ಕೇಳಿದ. ಆತ ಮುಗುಳ್ನಗೆ ನಕ್ಕು ಒಂದು ಕಾಗದವನ್ನು ರಾಜನಿಂದ ಇಸಿದುಕೊಂಡು, ಅದರಲ್ಲಿ ಎರಡು ಪದಗಳನ್ನು ಬರೆದು ಕೊಟ್ಟ. ಅದರಲ್ಲಿ ಬರೆದಿತ್ತು "ಇದೂ ಶಾಶ್ವತವಲ್ಲ". ರಾಜ ಪ್ರಶ್ನಾರ್ಥಕವಾಗಿ ಹುಬ್ಬೇರಿಸಿ ಆ ವ್ಯಕ್ತಿಯನ್ನು ನೋಡಿದ. ಆತ ನಕ್ಕು ಹೇಳಿದ, "ಇದೊಂದು ಮಾತು ಯಾವ ಸಂದರ್ಭಕ್ಕೂ ಸಾಕು. ಸಂಭ್ರಮ ಬಂದಾಗ ಬೀಗುವುದು ಬೇಡ, ಯಾಕೆಂದರೆ ಅದು ಶಾಶ್ವತವಲ್ಲ. ದುಃಖ ಬಂದಾಗ ಬಾಡುವುದೂ ಬೇಡ. ಯಾಕೆಂದರೆ ಅದೂ ಶಾಶ್ವತವಾಗಿ ಇರುವುದಿಲ್ಲ". ರಾಜ ಪ್ರಸನ್ನನಾದ. ಜಗದ ನಿಯಮವೇ ಪರಿವರ್ತನೆ. ಯಾವುದೂ ಶಾಶ್ವತವಾಗಿ ಇರುವುದಲ್ಲ. ಈ ಕಗ್ಗ ಧ್ವನಿಸುವುದು ಅದನ್ನೇ. ಮನಸ್ಸಿಗೆ ಏನೋ ಆಘಾತವಾಗಿದೆ, ಮನೆಯಲ್ಲಿ ಅತ್ಯಂತ ಆತ್ಮೀಯರಾದವರು ಗತಿಸಿದ್ದಾರೆ. ಆಗ ಈ ನೋವಿಗೆ ಕೊನೆಯೇ ಇಲ್ಲ ಎನ್ನಿಸುತ್ತದೆ. ಅದೇ ಎಂದಿಗೂ ಕುಂದದ ಕಳವಳ. ಆದರೆ ದಿನಕಳೆದಂತೆ ದುಃಖ ಮರೆಯಾಗುತ್ತದೆ. ಹತ್ತು ವರ್ಷಗಳಲ್ಲಿ ಮರೆತೇ ಹೋಗುತ್ತದೆ. ದಟ್ಟವಾದ ಮೋಡ ಇಡೀ ವಾತಾವರಣವನ್ನು ಗಾಢಾಂಧಕಾರಕ್ಕೆ ತಳ್ಳಿದಂತೆನಿಸಿದರೂ, ಮಳೆಸುರಿದು ಖಾಲಿಯಾದ ಮೇಲೆ ಮತ್ತೆ ಸೂರ್ಯ ಬೆಳಗುತ್ತಾನೆ. ಹಾಗೆ ದುಃಖ ಕರಗಿದಾಗ, ಕಾರ್ಮೋಡ ಸರಿದಾಗ ದೊರಕುವ ಸುಖವೇ ಆತ್ಯಂತಿಕವಾದದ್ದು, ನಮಗೆ ದಕ್ಕುವಂಥದ್ದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಡಿಸೆಂಬರ್ 26, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಚತುರ್ಥಿ ಗಂ.25-38 ನಕ್ಷತ್ರ: ಶ್ರವಣ ಗಂ.16-42 ಯೋಗ: ಹರ್ಷಣ ಗಂ.21-02, ಕರಣ: ವಣಿಜ ಗಂ.15-12, ಧನುರ್ ಮಾಸದ 10 ನೇ ದಿನ. ರಾಹುಕಾಲ : ಬೆಳಿಗ್ಗೆ 07-30 –09-00
ಸೂರ್ಯೋದಯ : 06-55 ಸೂರ್ಯಾಸ್ತ : 06-08
ಮುಸ್ಲಿಂ ದಿನಾಂಕ : 02 ಜುಮಾದುಸ್ಸಾನಿ
ದಿನ ವಿಶೇಷ : ಜೋರ್ ಮೇಳ-3 ದಿನ (ಪಂಜಾಬ್)
ಅದೃಷ್ಟ ಸಂಖ್ಯೆ : 4, 11

ಮೇಷ: ನೂತನ ವ್ಯವಹಾರದ ಪ್ರಾರಂಭ ಯೋಚನೆಯಲ್ಲಿರುವವರು ಅದರ ಸಾಧಕ ಬಾಧಕದ ಬಗ್ಗೆ ಸಂಪೂರ್ಣವಾಗಿ ಗಮನಹರಿಸುವುದು ಉತ್ತಮ. ಬಾಳೆ ಮತ್ತು ಕಾಫಿ ಬೆಳೆಗಾರರಿಗೆ ಉತ್ತಮ ಆದಾಯ.

ವೃಷಭ: ವ್ಯವಹಾರದಲ್ಲಿ ಉಂಟಾಗಿರುವ ಸಮಸ್ಯೆಗೆ ಸ್ನೇಹಿತರಿಂದ ಸೂಕ್ತ ಸಲಹೆ ಸಿಗುವುದು. ವಿದ್ಯುತ್ ಉಪಕರಣಗಳ ಮಾರಾಟದಿಂದ ಲಾಭ. ಆದಷ್ಟು ಬೇಗ ದಿನಚರಿ ಕೆಲಸ ಮಾಡಬೇಕಾಗುತ್ತದೆ.

ಮಿಥುನ: ಸಹಾಯ ಸಿಗುವುದೆಂಬ ನಂಬಿಕೆಯಲ್ಲಿ ಈ ದಿನ ಮನೆಯವರು ತಮ್ಮ ಅಂತರಂಗದ ಮಾತುಗಳನ್ನು ಬಿಚ್ಚಿಡಲಿದ್ದಾರೆ. ಹಣಕಾಸಿನ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬೇಕಾಗುವುದಿಲ್ಲ.

ಕರ್ಕಾಟಕ: ನಿಕಟವರ್ತಿಗಳ ಮುಖಾಂತರ ನೂತನ ವ್ಯವಹಾರದ ಪಾಲುದಾರಿಕೆಯ ಪ್ರಸ್ತಾಪ ಎದುರಾಗಬಹುದು. ಸಹೋದರನ ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು.

ಸಿಂಹ: ಕುಟುಂಬ ವರ್ಗದಲ್ಲಿ ಸಣ್ಣಪುಟ್ಟ ವಿವಾದಗಳು ಉಂಟಾಗಬಹುದು. ತಂದೆಯೊಡನೆ ಕೂಡಿ ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ವಿಶೇಷ ಪಾತ್ರವಹಿಸುವ ಅವಕಾಶ ನಿಮ್ಮದಾಗಲಿದೆ. ಹೆಂಡತಿ ಮಕ್ಕಳಿಂದ ಪ್ರೋತ್ಸಾಹ.

ಕನ್ಯಾ: ಷೇರು ಪೇಟೆ ವ್ಯವಹಾರದಲ್ಲಿ ನಿರೀಕ್ಷಿಸಿದ ಲಾಭ ಪಡೆಯುವುದು ಕಷ್ಟವಾಗಲಿದೆ. ವ್ಯಾವಹಾರಿಕ ಒತ್ತಡಗಳು ಕಡಿಮೆಯಾಗುವುದು. ಅದರಿಂದ ಮನಸ್ಸು ಸ್ಥಿಮಿತಕ್ಕೆ ಬರುವುದು.

ತುಲಾ: ಸರ್ಕಾರಿ ನೌಕರಿಯಲ್ಲಿರುವವರಿಗೆ ಅಪೇಕ್ಷಿತ ಸ್ಥಳಕ್ಕೆ ವರ್ಗಾವಣೆ ದೊರೆಯುವ ಸಂಭವ. ಧಾನ್ಯ ವರ್ತಕರಿಗೆ ಹೆಚ್ಚಿನ ವ್ಯಾಪಾರದಿಂದ ಸಂತಸ. ಈ ದಿನದ ಕೆಲ ಸಮಯವನ್ನು ಮನರಂಜನೆಗಾಗಿ ಮೀಸಲಿಡಿ.

ವೃಶ್ಚಿಕ: ಜನರೊಂದಿಗಿನ ಸಂಪರ್ಕದಿಂದಾಗಿ ರಾಜಕೀಯ ರಂಗಕ್ಕಿಳಿಯುವ ಅವಕಾಶ ಅಥವಾ ಆಹ್ವಾನ ಬರಲಿದೆ. ಮಾತೃ ಸಂಬಂಧಿಗಳ ಸಹಾಯದಿಂದ ಉತ್ತಮ ನೌಕರಿ ದೊರೆಯುವುದು. ತೀರ್ಥಯಾತ್ರೆ ಕೈಗೊಳ್ಳುವ ಮನಸ್ಸಾಗಲಿದೆ.

ಧನು: ಹೊಸ ಪುಸ್ತಕಗಳ ಪ್ರಕಾಶನ ಮಾಡುವವರಿಗೆ ಶುಭದಿನ. ಪತ್ರಕರ್ತರಿಗೆ ರಹಸ್ಯ ವಿಷಯ ತಿಳಿಯುವುದು. ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ಸಿಗಲಿದೆ. ದೇಹದಲ್ಲಿ ಉಂಟಾಗಿದ್ದಂತಹ ಪಿತ್ಥ, ಉಷ್ಣ ಪ್ರಕೋಪ ದೂರಾಗುವುವು.

ಮಕರ: ಜೀವನದಲ್ಲಿ ಹೊಸದೊಂದು ಅಧ್ಯಾಯ ಶುರುವಾಗಲಿದೆ. ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲಗಳನ್ನು ಹೊರತೆಗೆಯಲು ಹೊಸದನ್ನು ಕಲಿಯಲು ಮುಂದಾಗುವಂತಾಗಲಿದೆ. ಕೃಷಿ ಕ್ಷೇತ್ರದಲ್ಲಿ ಉತ್ತಮ ಸಾಧನೆ ಯಾಗಲಿದೆ.


ಕುಂಭ: ಸವಾಲಾಗಿರುವ ಮನದ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಇಂದು ಸನ್ನಿವೇಶಗಳು ಅನುಕೂಲವಾಗಲಿದೆ. ಮುಂದೆ ಸಾಗಬೇಕಾದ ದಾರಿ ನಿರ್ಧರಿಸಲು ಮಾರ್ಗದರ್ಶನ ಪಡೆಯಬೇಕಾಗುವುದು.

ಮೀನ: ಕಾರ್ಯದೊತ್ತಡ ಜೊತೆಯಲ್ಲಿ ಮನೆಯ ವಿಚಾರಗಳತ್ತಲೂ ಗಮನ ಹರಿಸುವುದು ಮುಖ್ಯ. ಕಚೇರಿಯಲ್ಲಿ ಬೇಸರ ತರುವಂತಹ ಘಟನೆಗಳು ನಡೆದರೂ ಧೃತಿಗೆಡದೆ ಸಮಾಧಾನದಿಂದಿರಿ.

ಪದಬಂಧ 5180 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
5. ತರುಣಿ ಇಲ್ಲಿದ್ದಾಳೆ (3)
6. ಸಾರವನ್ನು ಗ್ರಹಿಸುವಿಕೆ (5)
7. ದರ ಹೇಳುತ್ತಿರುವವ ಈತ ಕಪಟ (4)
9. ಮನದೊಳಗಿರುವ ಕುಲ (4)
10. ದನವಿರುವ ಮನೆ (3)
11. ಬಿಗಿದಪ್ಪಿಕೊಳ್ಳುವುದು (4)
12. ಕೊನೆಗೆ ಯೋಗವಿದ್ದರೆ ಮಾತ್ರ ಈ ಹಂಚಿಕೆ! (4)
15. ಕಳೆಯುವ ಲೆಕ್ಕವಿದು (5)
16. ಜಳಕ ಎಂದಿದ್ದಕ್ಕೇ ಈ ರೋಮಾಂಚನ! (3)

ಮೇಲಿಂದ ಕೆಳಕ್ಕೆ
1. ಭಾರತೀಯ ವೈದ್ಯ ಶಾಸ್ತ್ರ (4)
2. ದಾಯಾದಿ ಇಲ್ಲಿದ್ದಾನೆ (2)
3. ಕೊಡುವವನ ಹತ್ತಿರ ಒಣಗಿದ ಮರ ಕಾಣುತ್ತಿದೆ (3)
4. ಬುದ್ಧಿವಂತಿಕೆಯಿದು (4)
8. ರಸ ಒಸರುವ ಜಿಹ್ವೆ (3)
9. ಲಿಖಿತ ಮೂಲಕ ಮಾಡಿಕೊಳ್ಳುವ ಅರಿಕೆ (3)
11. ಆದಾಯ ಮತ್ತು ಖರ್ಚು (4)
13. ಆನೆಯ ಕಿವಿ ಎಂಬರ್ಥದ ಚರ್ಮರೋಗ (4)
14. ಅಧಿಕಾರ ಪತ್ರ (3)
16. ಪಾಪದ ವಿರುದ್ಧ ಪದ (2)



5179ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹರವಿ 3.ಶೀತವಲಯ 5.ಸರಸ 6.ವಾರಿವಾಳ 7.ಅಗ್ನಿಶಾಮಕದಳ 10.ನಳಪಾಕ 11.ಶುನಕ 14.ಜಲಸ್ತಂಭನ 15.ಕಷಾಯಿ

ಮೇಲಿಂದ ಕೆಳಕ್ಕೆ:
1.ಹಚ್ಚೆ 2.ವಿಚಾರ 4.ಯಮಳ 5.ಸಗಣಿ 6.ವಾನರ 8.ಶಾಸಕ 9.ಳವಕ 10.ನದೀಜ 12.ನಡುಕ 13.ಕಾಯಿ

ಸುಡೊಕು 5566

	2			6	7	4		
3								2
	7			4	8		6	
	4						8	5
8		9		7				
	5		8		4		9	
2				9			3	
4		3		5	2			8
	1		4			5		

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5565 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಅಲ್ಪಾವಧಿಗೆ ಹೂಡಿಕೆ ಮೇಲೆ ಕೋವಿಡ್ ಪರಿಣಾಮ

ವಿದೇಶಿ ಹೂಡಿಕೆ ₹11,557 ಕೋಟಿ



ನವದೆಹಲಿ (ಪಿಟಿಐ): ವಿದೇಶಿ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಪೇಟೆಗಳಲ್ಲಿ ಡಿಸೆಂಬರ್ 1 ರಿಂದ 23ರವರೆಗೆ ನಡೆದ ವಹಿವಾಟಿನಲ್ಲಿ ₹11,557 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ನವೆಂಬರ್ ತಿಂಗಳಿನಲ್ಲಿ ₹36,200 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದರು. 2022ರಲ್ಲಿ ಈವರೆಗೆ ಈಕ್ವಿಟಿ ಮಾರುಕಟ್ಟೆಯಿಂದ ₹1.21 ಲಕ್ಷ ಕೋಟಿ ಬಂಡವಾಳವನ್ನು ವಿದೇಶಿ ಹೂಡಿಕೆದಾರರು ಹಿಂದಕ್ಕೆ ಪಡೆದಿದ್ದಾರೆ.

'ಮಾರುಕಟ್ಟೆಯಲ್ಲಿನ ಏರಿಳಿತ ಹಾಗೂ ಚೀನಾ ಮತ್ತು ಜಗತ್ತಿನ ಇನ್ನೂ ಕೆಲವು ಭಾಗಗಳಲ್ಲಿ ಕೋವಿಡ್ ಪ್ರಕರಣಗಳು ಮತ್ತೆ ಹೆಚ್ಚಾಗುತ್ತಿರುವ ಆತಂಕದ ನಡುವೆಯೂ ಹೂಡಿಕೆಯನ್ನು ಮುಂದುವರಿಸಿದ್ದಾರೆ' ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

'ಹೀಗಿದ್ದರೂ ನಿವ್ವಳ ಹೂಡಿಕೆ ಪ್ರಮಾಣವು ಡಿಸೆಂಬರ್ 23ಕ್ಕೆ ಕೊನೆಗೊಂಡ ವಾರದಲ್ಲಿ ₹1 ಸಾವಿರ ಕೋಟಿಗೂ ಕಡಿಮೆ ಆಗಿದೆ. ಅದಕ್ಕೂ ಹಿಂದಿನ ವಾರದಲ್ಲಿ ₹6,055 ಕೋಟಿ ಹೂಡಿಕೆ ಮಾಡಿದ್ದರು. ಈಚಿನ ಬೆಳವಣಿಗೆಗಳು ಮತ್ತು ಅನಿಶ್ಚಿತ ಪರಿಸ್ಥಿತಿಗಳಿಂದಾಗಿ ಹೂಡಿಕೆದಾರರು ಎಚ್ಚರಿಕೆಯಿಂದ ವಹಿವಾಟು ನಡೆಸುತ್ತಿದ್ದಾರೆ ಎನ್ನುವುದನ್ನು ನಿವ್ವಳ ಹೂಡಿಕೆಯು ಸೂಚಿಸುತ್ತಿದೆ' ಎಂದು ಅವರು ತಿಳಿಸಿದ್ದಾರೆ.

'ಅಮೆರಿಕದ ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದ ಅಂಕಿ-ಅಂಶಗಳು ಹಾಗೂ ಕೋವಿಡ್‌ಗೆ ಸಂಬಂಧಿಸಿದ ಬೆಳವಣಿಗೆಗಳು ಅಲ್ಪಾವಧಿಯಲ್ಲಿ ಷೇರುಪೇಟೆಗಳಿಗೆ ವಿದೇಶಿ ಬಂಡವಾಳ ಒಳಹರಿವನ್ನು ನಿರ್ಧರಿಸಲಿವೆ' ಎಂದು ಜಿಯೋಜಿತ್ ಹಣಕಾಸು ಸೇವೆಗಳ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

'ಡಿಸೆಂಬರ್‌ನ 15 ದಿನಗಳಲ್ಲಿ ವಾಹನ, ಬಂಡವಾಳ ಸರಕು, ಎಫ್‌ಎಂಸಿಜಿ ಮತ್ತು ರಿಯಲ್ ಎಸ್ಟೇಟ್ ಷೇರುಗಳನ್ನು ಖರೀದಿಸಿದ್ದು, ಗ್ರಾಹಕ ಬಳಕೆ ವಸ್ತುಗಳು, ತೈಲ ಮತ್ತು ಅನಿಲ, ವಿದ್ಯುತ್ ಮತ್ತು ಹಣಕಾಸು ವಲಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ' ಎಂದು ವಿಜಯಕುಮಾರ್ ಮಾಹಿತಿ ನೀಡಿದ್ದಾರೆ.

ಡಿಸೆಂಬರ್‌ನಲ್ಲಿ ಈವರೆಗೆ ಸಾಲಪತ್ರ ಮಾರುಕಟ್ಟೆಯಿಂದ ₹2,900 ಕೋಟಿ ಬಂಡವಾಳವನ್ನು ಹೂಡಿಕೆದಾರರು ಹಿಂದಕ್ಕೆ ಪಡೆದಿದ್ದಾರೆ.

ಭಾರತವನ್ನು ಹೊರತುಪಡಿಸಿ, ದಕ್ಷಿಣ ಕೊರಿಯಾ, ತೈವಾನ್, ಥಾಯ್ಲೆಂಡ್, ಇಂಡೊನೇಷ್ಯಾ ಸೇರಿದಂತೆ ಪ್ರವರ್ಧಮಾನಕ್ಕೆ ಬರುತ್ತಿರುವ ಬಹುತೇಕ ಎಲ್ಲಾ ದೇಶಗಳ ಮಾರುಕಟ್ಟೆಯಿಂದಲೂ ವಿದೇಶಿ ಬಂಡವಾಳ ಹೊರಹರಿವು ಕಂಡುಬಂದಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹560
ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹562

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಚಿರಸ್ಮರಣೆ



ಎಮ್. ನಾಗಪ್ಪ
ಕ್ಲಾಸ್1, ಪಿ.ಡಬ್ಲ್ಯು.ಡಿ. ಕಂಟ್ರಾಕ್ಟರ್
337, ಸದಾಶಿವನಗರ,
ಮರಣ: 26-12-1991
ಗೌರವಾದಾರಗಳೊಂದಿಗೆ
ಸ್ಮರಿಸುವ
ಕುಟುಂಬ ವರ್ಗದವರು.

mathru deva bhava
5ನೇ ವರ್ಷದ ಪುಣ್ಯಸ್ಮರಣೆ



ಪೂಜ್ಯ ಮಾತೃಶ್ರೀ ಆರ್.ಕೆ. ಕೃಷ್ಣಮ್ಮ ನವರು
(ದಿ|| ಎಸ್.ಎ. ಲಕ್ಷ್ಮಣ್ ರವರ ಧರ್ಮಪತ್ನಿ)
ದಿನಾಂಕ: 26-12-2017
ನಿಮ್ಮ ನೆನಪಲಿ ದಿನವ ಕಳೆಯುತಾ
ನಿಮ್ಮ ಆದರ್ಶಗಳನ್ನು ಸ್ಮರಿಸುತಾ
ನಿಮ್ಮ ಶ್ರೀರಕ್ಷೆಯ ಬಲದಿಂದ
ಬೆಳೆಯುತಿಹೆವು ನಾವು
ನಿಮ್ಮ ನಾಮ ಸ್ಮರಣೆಯಿಂದ

17ನೇ ವಾರ್ಷಿಕ ಪುಣ್ಯಸ್ಮರಣೆ



ಶ್ರೀ ಸಿ. ಕೃಷ್ಣಪ್ಪ
ಕೃಷ್ಣರಾಜಪುರ
ಭಗವಂತನು ತಮ್ಮ ಆತ್ಮಕ್ಕೆ
ಚಿರಶಾಂತಿಯನ್ನು ನೀಡಲೆಂದು ಕೋರುವ
ಇಂತಿ ಮಕ್ಕಳು, ಅಳಿಯಂದಿರು,
ಮತ್ತು ಕುಟುಂಬದವರು

ಆರೋಗ್ಯ ವಿಮೆ: 7 ಅಂಶ ಗಮನಿಸಿ



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ದುಡಿಯೋ ದುಡ್ಡನ್ನೆಲ್ಲಾ ಆಸ್ಪತ್ರೆಗೆ ಕಟ್ಟೋ ಬದಲು, ಅದರಲ್ಲಿ ಸ್ವಲ್ಪ ಹಣ ಆರೋಗ್ಯ ವಿಮೆಗೆ ಅಂತ ಮೀಸಲಿಟ್ರೆ ಒಳ್ಳೇದಲ್ವಾ..? ಹೌದು ಆರೋಗ್ಯ ವಿಮೆ ಪ್ರತಿಯೊಂದು ಕುಟುಂಬದ ಆಪ್ತಮಿತ್ರ. ಆದರೆ ಅನೇಕರಿಗೆ ಸರಿಯಾದ ವಿಮೆ ಮಾಡಿಸುವುದು ಹೇಗೆ ಎನ್ನುವುದು ತಿಳಿದಿಲ್ಲ. ಆರೋಗ್ಯ ವಿಮೆ ಮಾಡಿಸುವಾಗ ಪ್ರತಿಯೊಬ್ಬರೂ ಗಮನಿಸಿಕೊಳ್ಳಬೇಕಾದ 7 ಅಂಶಗಳ ಬಗ್ಗೆ ವಿವರವಾದ ಮಾಹಿತಿ ತಿಳಿಯೋಣ.

1. ಕೋ-ಪೇ ನಿಯಮ ಗೊತ್ತಿರಲಿ: ಆರೋಗ್ಯ ವಿಮೆ ಪಡೆದುಕೊಳ್ಳುವಾಗ ಸಾಧ್ಯವಾದಷ್ಟು ಕೋ-ಪೇ ನಿಯಮ (co-pay clause) ಇಲ್ಲದ ಇನ್ಶೂರೆನ್ಸ್ ಖರೀದಿಸುವುದು ಸೂಕ್ತ. ಕೋ-ಪೇ ನಿಯಮ ಇರುವ ಇನ್ಶೂರೆನ್ಸ್ ಖರೀದಿಸಿದರೆ ಕ್ಲೇಮ್‌ನ ಸಂದರ್ಭದಲ್ಲಿ ನಿಮ್ಮ ಜೇಬಿಗೆ ಹೊರೆಯಾಗುತ್ತದೆ. ಕೋ-ಪೇ ಅಂದ್ರೆ ಕನ್ನಡದಲ್ಲಿ ಸಹಪಾವತಿ ಎಂದರ್ಥ. ಇನ್ಶೂರೆನ್ಸ್ ಕ್ಲೇಮ್ ಮಾಡುವ ಸಂದರ್ಭದಲ್ಲಿ ವಿಮೆ ಕಂಪನಿಯ ಜೊತೆಗೆ ನೀವು ನಿರ್ದಿಷ್ಟ ಮೊತ್ತವನ್ನು ಪಾವತಿಸಬೇಕಾಗುತ್ತೆ ಎಂದು ಈ ನಿಯಮ ಹೇಳುತ್ತದೆ. ಉದಾಹರಣೆಗೆ, ವ್ಯಕ್ತಿಯೊಬ್ಬರು ಇನ್ಶೂರೆನ್ಸ್ ಕಂಪನಿಯೊಂದರಿಂದ ಕೋ-ಪೇ ನಿಯಮದಡಿ ವಿಮೆ ಪಡೆದಿದ್ದು, ಅನಾರೋಗ್ಯದ ಕಾರಣ ಕ್ಲೇಮ್ ಗಾಗಿ ಅರ್ಜಿಸಲ್ಲಿಸಿದ್ದಾರೆ ಎಂದು ಭಾವಿಸಿಕೊಳ್ಳಿ. ಒಟ್ಟು ಕ್ಲೇಮ್ ಮೊತ್ತ ₹ 1 ಲಕ್ಷ ಆಗಿದ್ದು ಕೋ-ಪೇ ನಿಯಮದಂತೆ ಇನ್ಶೂರೆನ್ಸ್ ಪಡೆಯುವ ವೇಳೆ ಶೇ 80 ರಷ್ಟನ್ನು ಕಂಪನಿ, ಶೇ 20 ರಷ್ಟು ನೀವು ಪಾವತಿಸುತ್ತೇವೆ ಎಂದು ಒಪ್ಪಿದ್ದೀರಿ ಎಂದುಕೊಳ್ಳಿ. ಹೀಗಾದಾಗ 80 ಸಾವಿರವನ್ನು ಇನ್ಶೂರೆನ್ಸ್ ಕಂಪನಿ ಕಟ್ಟುತ್ತದೆ, ಇನ್ನುಳಿದ ₹ 20 ಸಾವಿರ ಕ್ಲೇಮ್ ಮೊತ್ತವನ್ನು ನೀವು ಪಾವತಿಸಬೇಕಾಗುತ್ತದೆ.

2. ಜೋನಲ್ ಕೋ-ಪೇ ನಿಯಮ ತಿಳಿದಿರಿ: ನಿರ್ದಿಷ್ಟ ವಲಯದಿಂದ ಹೊರಗೆ ಚಿಕಿತ್ಸೆ ಪಡೆದರೆ ಸಹಪಾವತಿ ಅಂದರೆ, ಕೋ-ಪೇ ಮಾಡಬೇಕಾಗುತ್ತದೆ ಎಂದು ಈ ನಿಯಮ ಹೇಳುತ್ತದೆ. ಉದಾಹರಣೆಗೆ ವಿಮೆ ಪಡೆಯುವಾಗ ಮೈಸೂರಿನ ವ್ಯಾಪ್ತಿಯಲ್ಲಿ ಮಾತ್ರ ಚಿಕಿತ್ಸೆಗೆ ಪೂರ್ತಿ ಕ್ಲೇಮ್ ಹಣ ನೀಡುವುದಾಗಿ ಇನ್ಶೂರೆನ್ಸ್ ಕಂಪನಿ ಹೇಳಿರುತ್ತದೆ. ಅದಕ್ಕೆ ನೀವು ಒಪ್ಪಿಗೆ ಸೂಚಿಸಿ ಇನ್ಶೂರೆನ್ಸ್ ಪಡೆದಿರುತ್ತೀರಿ. ಹೀಗಿರುವಾಗ ಬೆಂಗಳೂರಿನಲ್ಲಿ ನೀವು ಚಿಕಿತ್ಸೆ ಪಡೆಯುವ ಸಂದರ್ಭ ಬಂದರೆ ಕೋ-ಪೇ ನಿಯಮ ಜಾರಿಗೆ ಬರುತ್ತದೆ. ಒಟ್ಟು ಕ್ಲೇಮ್ ಮೊತ್ತದಲ್ಲಿ ಶೇ 15 , ಶೇ 20 ಅಥವಾ ಶೇ 30 ರಷ್ಟನ್ನು (ನಿಮ್ಮ ಪಾಲಿಸಿಯಲ್ಲಿರುವಂತೆ) ನೀವು ಪಾವತಿಸಬೇಕಾಗುತ್ತದೆ. ಕೆಲ ಪಾಲಿಸಿಗಳಲ್ಲಿ ಈ ನಿಯಮ ಇರುತ್ತದೆ, ಕೆಲ ಪಾಲಿಸಿಗಳಲ್ಲಿ ಇರುವುದಿಲ್ಲ.

3. ಪರಿಗಣಿಸದ ಅಂಶಗಳ ಬಗ್ಗೆ ಗಮನಹರಿಸಿ: ಆರೋಗ್ಯ ವಿಮೆಯಲ್ಲಿ ಪರಿಗಣಿಸದ ಅಂಶಗಳು ಎಂದರೆ ಇನ್ಶೂರೆನ್ಸ್‌ನ ವ್ಯಾಪ್ತಿಗೆ ಒಳಪಡದ ಅಂಶಗಳು ಎಂದರ್ಥ. ಇನ್ಶೂರೆನ್ಸ್ ಆಯ್ಕೆ ಮಾಡಿಕೊಳ್ಳುವಾಗ ಸಾಮಾನ್ಯವಾಗಿ ಪರಿಗಣಿಸದ ಅಂಶಗಳ ಬಗ್ಗೆ (Common Exclusions) ಸರಿಯಾದ ಮಾಹಿತಿ ಪಡೆದು ಮುನ್ನಡೆಯಬೇಕು. ಇಲ್ಲವಾದಲ್ಲಿ ಪರಿಹಾರ ಮೊತ್ತ (ಕ್ಲೇಮ್ ಸೆಟಲ್ಮೆಂಟ್) ಪಡೆಯುವಾಗ ಸಮಸ್ಯೆಯಾಗುತ್ತದೆ. ಮದ್ಯಪಾನ, ಧೂಮಪಾನ, ಡ್ರಗ್ಸ್ ಸೇವನೆಯಿಂದ ಬರುವ ಜೀವನಶೈಲಿ ಕಾಯಿಲೆಗಳಿಗೆ ಇನ್ಶೂರೆನ್ಸ್ ಕವರೇಜ್ ಸಿಗುವುದಿಲ್ಲ. ಕೆಲ ಕಂಪನಿಗಳು ಇನ್ಶೂರೆನ್ಸ್ ಕವರೇಜ್ ನೀಡುತ್ತವೆ ಆದರೆ ಪ್ರೀಮಿಯಂ ಜಾಸ್ತಿ ಇರುತ್ತದೆ. ಅಪಘಾತದ ಸಂದರ್ಭ ಹೊರತುಪಡಿಸಿ ಇನ್ನುಳಿದ ಸಂದರ್ಭಗಳಲ್ಲಿ ಕಾಸ್ಮೆಟಿಕ್ ಸರ್ಜರಿ, ಡೆಂಟಲ್ ಸರ್ಜರಿಗಳಿಗೆ ಇನ್ಶೂರೆನ್ಸ್ ಅನುಕೂಲ ಸಿಗುವುದಿಲ್ಲ. ಸಾಹಸ ಕ್ರೀಡೆಯಿಂದಾಗುವ ಅಪಘಾತ, ಯುದ್ಧದಲ್ಲಿ ಗಾಯಗೊಳ್ಳುವುದು, ಉದ್ದೇಪೂರ್ವಕವಾಗಿ ಗಾಯಗಳನ್ನು ಮಾಡಿಕೊಳ್ಳುವುದು, ಹುಟ್ಟಿನಿಂದಲೇ ಇರುವ ಕಾಯಿಲೆ, ಅಂಗವೈಕಲ್ಯ, ಎಚ್‌ಐವಿ ಸೇರಿದಂತೆ ಇನ್ನು ಕೆಲ ಸಮಸ್ಯೆಗಳನ್ನು ಇನ್ಶೂರೆನ್ಸ್ ಕಂಪನಿಗಳು ಪರಿಗಣಿಸುವುದಿಲ್ಲ.

4. ಕಾಯುವಿಕೆ ಅವಧಿ (Waiting Period): ವ್ಯಕ್ತಿಯು ಆರೋಗ್ಯ ವಿಮೆ ಪಡೆದ ಬಳಿಕ ಕೆಲ ಚಿಕಿತ್ಸೆಗಳಿಗೆ ಹಣಕಾಸಿನ ನೆರವು ಪಡೆಯಲು ಕಾಲಮಿತಿ ನಿಗದಿಪಡಿಸಲಾಗುತ್ತದೆ. ಇದಕ್ಕೆ ಇನ್ಶೂರೆನ್ಸ್ ಪರಿಭಾಷೆಯಲ್ಲಿ ವೇಯ್ಟಿಂಗ್ ಪೀರಿಯಡ್ ಎನ್ನುತ್ತಾರೆ. ಉದಾಹರಣೆಗೆ ನೀವು ಇಂದು ಇನ್ಶೂರೆನ್ಸ್ ಪಡೆದುಕೊಂಡಿದ್ದು ಐದು ದಿನಗಳ ನಂತರ ಅಸ್ತಮಾ ಇರುವುದು ಗೊತ್ತಾಗುತ್ತದೆ. ಹೀಗಿದ್ದಾಗ ನಿಮಗೆ ತಕ್ಷಣಕ್ಕೆ ಅಸ್ತಮಾ ಚಿಕಿತ್ಸೆಗೆ ವಿಮೆ ಸಿಗುವುದಿಲ್ಲ. ಚಿಕಿತ್ಸೆ ಕೊಡಲು ಕನಿಷ್ಠ 30 ರಿಂದ 60 ದಿನಗಳ ವೇಯ್ಟಿಂಗ್ ಪೀರಿಯಡ್ ಇರುತ್ತದೆ. ಕೆಲ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಒಂದು ವರ್ಷದಿಂದ ಎರಡು ವರ್ಷಗಳ ವೇಯ್ಟಿಂಗ್ ಪೀರಿಯಡ್ ಅನ್ವಯಿಸುತ್ತದೆ.

5. ಮಿತಿಗಳಿಲ್ಲದ ವಿಮೆ ಪಡೆಯಿರಿ: ನೀವು ಪಡೆದಿರುವ ಇನ್ಶೂರೆನ್ಸ್ ಕವರೇಜ್ ಮೊತ್ತ ಆಧರಿಸಿ ಆಸ್ಪತ್ರೆ ವೆಚ್ಚಗಳಾದ ರೂಮ್ ಬಾಡಿಗೆ, ನರ್ಸಿಂಗ್ ಚಾರ್ಜ್, ಡಾಕ್ಟರ್ ಫೀಸ್, ಆಂಬ್ಯುಲೆನ್ಸ್ ಶುಲ್ಕಕ್ಕೆ ಇನ್ಶೂರೆನ್ಸ್ ಕಂಪನಿ ಇಂತಿಷ್ಟು ಹಣ ಎಂದು ನಿಗದಿ ಮಾಡುತ್ತದೆ. ಆ ನಿಗದಿತ ಹಣಕ್ಕಿಂತ ಹೆಚ್ಚು ಮೊತ್ತದ ಸೇವೆ ಬೇಕು ಎಂದು ನೀವು ಬಯಸಿದಲ್ಲಿ ಅದಕ್ಕೆ ನೀವೇ ಹಣ ಪಾವತಿಸಬೇಕಾಗುತ್ತದೆ. ಹಾಗಾಗಿ ಈ ರೀತಿಯ ಮಿತಿಗಳನ್ನು ಹೇರದ ವಿಮೆ ಪಡೆಯುವುದು ಸೂಕ್ತ.

6. ನಗದು ರಹಿತ ಕ್ಲೇಮ್ ವ್ಯವಸ್ಥೆ: ಚಿಕಿತ್ಸೆಯ ಖರ್ಚು ವೆಚ್ಚಗಳನ್ನು ಇನ್ಶೂರೆನ್ಸ್ ಕಂಪನಿ ನೇರವಾಗಿ ಆಸ್ಪತ್ರೆಗೆ ಪಾವತಿಸುತ್ತದೆ. ಇಲ್ಲಿ ನೀವು ಆಸ್ಪತ್ರೆಗೆ ಮೊದಲು ಹಣ ಕಟ್ಟಿ ನಂತರ ಇನ್ಶೂರೆನ್ಸ್ ಕಂಪನಿಯಿಂದ ಆ ಹಣ ಹಿಂಪಡೆಯುವ ಅಗತ್ಯವಿರುವುದಿಲ್ಲ. ಈ ವ್ಯವಸ್ಥೆ ಬೇಕಾದಲ್ಲಿ ನೀವು ಆರೋಗ್ಯ ಸೇವೆ ಒದಗಿಸಲು ಇನ್ಶೂರೆನ್ಸ್ ಕಂಪನಿ ಒಡಂಬಡಿಕೆ ಮಾಡಿಕೊಂಡಿರುವ ನೆಟ್‌ವರ್ಕ್ ಆಸ್ಪತ್ರೆಗೆ ದಾಖಲಾಗಬೇಕು. ಇಂತಹ ಸಂದರ್ಭದಲ್ಲಿ ಕ್ಲೇಮ್ ಸೆಟಲ್ಮೆಂಟ್ ತುರ್ತಾಗಿ ಆಗುತ್ತದೆ.

7. ಮರುಪಾವತಿ ಕ್ಲೇಮ್ ವ್ಯವಸ್ಥೆ: ನೀವು ಆಸ್ಪತ್ರೆಗೆ ದಾಖಲಾಗಿ ಖರ್ಚು ವೆಚ್ಚಗಳಿಗೆ ನಿಮ್ಮ ಕೈಯಿಂದಲೇ ಹಣ ನೀಡಿ ಬಳಿಕ ಆ ಖರ್ಚಿಗೆ ಪೂರಕ ದಾಖಲೆಗಳನ್ನು ಒದಗಿಸಿ 40 ದಿನಗಳ ಒಳಗಾಗಿ ಹಣವನ್ನು ಇನ್ಶೂರೆನ್ಸ್ ಕಂಪನಿಯಿಂದ ಹಿಂಪಡೆದುಕೊಳ್ಳುವ ಪದ್ಧತಿಗೆ ಮರು ಪಾವತಿ ಎಂದು ಕರೆಯಲಾಗುತ್ತದೆ. ಇಲ್ಲಿ ನಿಮಗಿಷ್ಟವಾದ ಆಸ್ಪತ್ರೆಗೆ ನೀವು ದಾಖಲಾಗಬಹುದು. ಆದರೆ ಕ್ಲೇಮ್ ಸೆಟಲ್ಮೆಂಟ್ ಪ್ರಕ್ರಿಯೆ ಕೊಂಚ ತಡವಾಗುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)



ಸತತ ಮೂರನೇ ವಾರವೂ ಕುಸಿತ

ಭಾರತೀಯ ಷೇರುಪೇಟೆ ಸೂಚ್ಯಂಕಗಳು ಸತತ ಮೂರನೇ ವಾರ ಕುಸಿತ ದಾಖಲಿಸಿವೆ. ಡಿಸೆಂಬರ್ 23ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಕುಸಿತ ಕಂಡಿವೆ. ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.43 ರಷ್ಟು ಇಳಿಕೆಯಾಗಿದೆ. ನಿಫ್ಟಿ ಶೇ 2.52 ರಷ್ಟು ತಗ್ಗಿದೆ. ಇನ್ನು ಡಿಸೆಂಬರ್ ತಿಂಗಳನ್ನು ಒಟ್ಟಾರೆಯಾಗಿ ಪರಿಗಣಿಸಿದರೆ ಎರಡೂ ಸೂಚ್ಯಂಕಗಳು ಈವರೆಗೆ ತಲಾ ಶೇ 5 ರಷ್ಟು ಕುಸಿತ ಕಂಡಿವೆ. ಕೋವಿಡ್ ಪ್ರಕರಣಗಳಲ್ಲಿ ಹೆಚ್ಚಳ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಮಾರಾಟದ ಒತ್ತಡ, ಆರ್ಥಿಕ ಹಿಂಜರಿತದ ಭೀತಿ ಸೇರಿ ಹಲವು ಅಂಶಗಳು ಷೇರುಪೇಟೆ ಸೂಚ್ಯಂಕಗಳ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 10 ರಷ್ಟು ಕುಸಿದಿದೆ. ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 9, ರಿಯಲ್ ಎಸ್ಟೇಟ್ ಶೇ 7, ಲೋಹ ಸೂಚ್ಯಂಕ ಶೇ 6.4 ರಷ್ಟು ಕುಸಿದಿವೆ. ಆದರೆ ನಿಫ್ಟಿ ಫಾರ್ಮಾ ಸೂಚ್ಯಂಕ ಶೇ 15 ರಷ್ಟು ಜಿಗಿದಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 979.48 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 8,545.06 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಅದಾನಿ ವಿಲ್ಮರ್, ಅದಾನಿ ಟ್ರಾನ್ಸ್‌ಮಿಷನ್, ನೈಕಾ, ಜೊಮಾಟೊ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಟಾಟಾ ಮೋಟರ್ಸ್–ಡಿವಿಆರ್, ಅದಾನಿ ಗ್ರೀನ್ ಎನರ್ಜಿ, ಅಂಬುಜಾ ಸಿಮೆಂಟ್ಸ್ ಮತ್ತು ಟಾಟಾ ಮೋಟರ್ಸ್ ಶೇ 10 ರಿಂದ ಶೇ 21 ರಷ್ಟು ಕುಸಿತ ಕಂಡಿವೆ.

ಮುನ್ನೋಟ: ಜಾಗತಿಕವಾಗಿ ಮತ್ತು ಭಾರತದಲ್ಲಿ ಕೋವಿಡ್ ಯಾವ ಸ್ವರೂಪ ಪಡೆಯಲಿದೆ ಎನ್ನುವುದು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿದೆ. ಉಳಿದಂತೆ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಗತಿ ನಿರ್ಧರಿಸಲಿವೆ.


ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹325-670
ದ್ವಿತಳಿ (ಬಿ.ವಿ)	₹112-744

2023ರಲ್ಲಿ ಉದ್ಯಮದ ಬೆಳವಣಿಗೆ ಉತ್ತಮ: ತಜ್ಞರ ನಿರೀಕ್ಷೆ

ಮ್ಯೂಚುವಲ್ ಫಂಡ್: ತಗ್ಗಿದ ಉತ್ಸಾಹ



ನವದೆಹಲಿ (ಪಿಟಿಐ): ದೇಶದ ಮ್ಯೂಚುವಲ್ ಫಂಡ್ ಉದ್ಯಮವು 2021ರಲ್ಲಿ ಕಂಡಿದ್ದಂತಹ ಬೆಳವಣಿಗೆಯ ವೇಗವನ್ನು 2022ರಲ್ಲಿ ಕಾಯ್ದುಕೊಳ್ಳಲು ವಿಫಲವಾಗಿದೆ ಎನ್ನುವುದನ್ನು ಉದ್ಯಮದ ಅಂಕಿ-ಅಂಶಗಳು ಸೂಚಿಸುತ್ತಿವೆ.

ಮಾರುಕಟ್ಟೆಯು ಹೆಚ್ಚು ಅಸ್ಥಿರವಾಗಿದ್ದ ಕಾರಣದಿಂದಾಗಿ 2022ರಲ್ಲಿ ನಿರ್ವಹಣಾ ಸಂಪತ್ತು ಮೌಲ್ಯ, ಹೂಡಿಕೆದಾರರ ಸಂಖ್ಯೆ ಹಾಗೂ ಹೂಡಿಕೆಯ ವಿಷಯದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಉದ್ಯಮವು ನಿಧಾನಗತಿಯ ಬೆಳವಣಿಗೆ ಕಂಡಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮ್ಯೂಚುವಲ್ ಫಂಡ್ ಉದ್ಯಮದ ನಿರ್ವಹಣಾ ಸಂಪತ್ತು ಮೌಲ್ಯವು 2022ರಲ್ಲಿ ಈವರೆಗೆ ಶೇ 7ರಷ್ಟು (₹2.65 ಲಕ್ಷ ಕೋಟಿ) ಹೆಚ್ಚಾಗಿದೆ. 2021ರಲ್ಲಿ ಸಂಪತ್ತು ಮೌಲ್ಯವು ಶೇ 22ರಷ್ಟು ಹೆಚ್ಚಾಗಿತ್ತು (₹7 ಲಕ್ಷ ಕೋಟಿ) ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ತಿಳಿಸಿದೆ.

ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಹೆಚ್ಚಾಗಿದೆ. 2021ರಲ್ಲಿ ₹96,700 ಕೋಟಿ ಹೂಡಿಕೆ ಆಗಿತ್ತು. 2022ರಲ್ಲಿ ₹1.57 ಲಕ್ಷ ಕೋಟಿಗೆ ಏರಿಕೆ ಆಗಿದೆ.

2023ರಲ್ಲಿ ಉತ್ತಮ ಬೆಳವಣಿಗೆ: ಉದ್ಯಮವು 2023ರಲ್ಲಿ ಉತ್ತಮ ಬೆಳವಣಿಗೆ ಕಾಣುವ ನಿರೀಕ್ಷೆ ಇದೆ ಎಂದು ನಿಯೋ ಕಂಪನಿಯ ಯೋಜನಾ ಮುಖ್ಯಸ್ಥ ಸ್ವಪ್ನಿಲ್ ಭಾಸ್ಕರ್ ಹೇಳಿದ್ದಾರೆ. ಯುವ ಸಮೂಹದ ಭಾಗವಹಿಸುವಿಕೆ ಮತ್ತು ಆರ್ಥಿಕ ಪ್ರಗತಿಯಿಂದಾಗಿ ಉದ್ಯಮದ ಬೆಳವಣಿಗೆಯು ಹೆಚ್ಚಾಗಲಿದೆ ಎಂದು ತಿಳಿಸಿದ್ದಾರೆ.

ಮುಂದಿನ ವರ್ಷ ಉದ್ಯಮವು ಶೇ 16 –17ರ ಆಸುಪಾಸಿನಲ್ಲಿ ಬೆಳವಣಿಗೆ ಕಾಣಲಿದೆ. ದೇಶದ ಆರ್ಥಿಕ ಬೆಳವಣಿಗೆ ಮತ್ತು ಮುಂಬರುವ ಬಜೆಟ್‌ನ ನಿರ್ಧಾರಗಳು ಈ ಪ್ರಮಾಣದ ಬೆಳವಣಿಗೆಗೆ ಬೆಂಬಲ ನೀಡಲಿವೆ ಎಂದು ಒಕ್ಕೂಟದ ಸಿಇಒ ಎನ್.ಎಸ್. ವೆಂಕಟೇಶ್ ಹೇಳಿದ್ದಾರೆ.

ಉದ್ಯಮದ ನಿರ್ವಹಣಾ ಸಂಪತ್ತು (ಲಕ್ಷ ಕೋಟಿಗಳಲ್ಲಿ)

₹31	2020ರ ಡಿಸೆಂಬರ್ ಅಂತ್ಯಕ್ಕೆ
₹37.72	2021ರ ಡಿಸೆಂಬರ್ ಅಂತ್ಯಕ್ಕೆ
₹40.37	2022ರ ನವೆಂಬರ್ ಅಂತ್ಯಕ್ಕೆ
44	2023ರ ಡಿಸೆಂಬರ್ ಅಂತ್ಯಕ್ಕೆ ನಿರೀಕ್ಷೆ

10 ಕಂಪನಿಗಳ ನಷ್ಟ ₹1.68 ಲಕ್ಷ ಕೋಟಿ



ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಪ್ರಮುಖ 10 ಕಂಪನಿಗಳ ಮಾರುಕಟ್ಟೆ ಮೌಲ್ಯವು ಡಿಸೆಂಬರ್ 23ಕ್ಕೆ ಕೊನೆಗೊಂಡ ವಾರದಲ್ಲಿ ₹1.68 ಲಕ್ಷ ಕೋಟಿಯಷ್ಟು ಕರಗಿದೆ. ರಿಲಯನ್ಸ್ ಇಂಡಸ್ಟ್ರೀಸ್‌ಗೆ ಹೆಚ್ಚಿನ ನಷ್ಟ ಆಗಿದೆ.

ಚೀನಾ ಮತ್ತು ಕೆಲವು ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಕಳೆದ ವಾರ ಸೆನ್ಸೆಕ್ಸ್ 1,492 ಅಂಶ ಇಳಿಕೆ ಕಂಡಿತು. ಇದರಿಂದಾಗಿ ಕಂಪನಿಗಳ ಮಾರುಕಟ್ಟೆ ಮೌಲ್ಯ ಇಳಿಕೆ ಕಾಣುವಂತಾಯಿತು.

ದೇಶದ ಅತ್ಯಂತ ಮೌಲ್ಯಯುತ ಕಂಪನಿಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಇರುವ ರಿಲಯನ್ಸ್ ಇಂಡಸ್ಟ್ರೀಸ್ ಮಾರುಕಟ್ಟೆ ಮೌಲ್ಯ ₹42,994 ಕೋಟಿಯಷ್ಟು ಕರಗಿದೆ. ಇದರಿಂದಾಗಿ ಒಟ್ಟು ಮೌಲ್ಯ ₹16.92 ಲಕ್ಷ ಕೋಟಿಗೆ ತಲುಪಿದೆ.

ಎಸ್‌ಬಿಐ ಮಾರುಕಟ್ಟೆ ಮೌಲ್ಯ ₹26,193 ಕೋಟಿ ಕಡಿಮೆ ಆಗಿದೆ. ಎಚ್‌ಡಿಎಫ್‌ಸಿ ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯದಲ್ಲಿ ₹22,755 ಕೋಟಿ ಕರಗಿದೆ. ಎಲ್‌ಐಸಿ, ಐಸಿಐಸಿಐ ಬ್ಯಾಂಕ್, ಹಿಂದುಸ್ತಾನ್ ಯೂನಿಲಿವರ್, ಇನ್ಫೊಸಿಸ್, ಎಚ್‌ಡಿಎಫ್‌ಸಿ, ಭಾರ್ತಿ ಏರ್‌ಟೆಲ್ ಮತ್ತು ಟಿಸಿಎಸ್ ಮಾರುಕಟ್ಟೆ ಮೌಲ್ಯವೂ ಕಡಿಮೆ ಆಗಿದೆ.

'ಮದ್ಯವ್ಯಸನಿಗೆ ಹೆಣ್ಣು ಕೊಡಬೇಡಿ'

ಸುಲ್ತಾನ್‌ಪುರ (ಉತ್ತರಪ್ರದೇಶ): 'ಮದ್ಯವ್ಯಸನಿ ಅಧಿಕಾರಿಗಿಂತ ವ್ಯಸನಗಳಿಲ್ಲದ ಆಟೋರಿಕ್ಷಾ ಚಾಲಕ ಇಲ್ಲವೇ ಕೂಲಿ ಕಾರ್ಮಿಕ ಉತ್ತಮ ವರ ಎಂದು ಸಾಬೀತಾಗಬಹುದು. ಹಾಗಾಗಿ, ಪೋಷಕರು ತಮ್ಮ ಪುತ್ರಿಯರು ಅಥವಾ ಸಹೋದರಿಯರನ್ನು ಮದ್ಯವ್ಯಸನಿಗಳಿಗೆ ವಿವಾಹ ಮಾಡಿಕೊಡಬಾರದು' ಎಂದು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ರಾಜ್ಯ ಸಚಿವ ಕೌಶಲ್ ಕಿಶೋರ್ ಮನವಿ ಮಾಡಿದ್ದಾರೆ.

ಇಲ್ಲಿನ ಲಂಬುವ ವಿಧಾನಸಭಾ ಕ್ಷೇತ್ರದಲ್ಲಿ ಶನಿವಾರ ಮದ್ಯವರ್ಜನ ಕಾರ್ಯಕ್ರಮದಲ್ಲಿ ಮಾತನಾಡಿದ ಕಿಶೋರ್, 'ಮದ್ಯವ್ಯಸನಿಗಳ ಜೀವಿತಾವಧಿಯು ಕಡಿಮೆಯಾಗಿರುತ್ತದೆ. ನಾನು ಸಂಸದನಾಗಿ, ನನ್ನ ಪತ್ನಿ ಶಾಸಕಿಯಾಗಿದ್ದರೂ ಮದ್ಯವ್ಯಸನಿಯಾಗಿದ್ದ ನಮ್ಮ ಮಗನನ್ನು ಉಳಿಸಿಕೊಳ್ಳಲಾಗಲಿಲ್ಲ. ಇನ್ನು ಜನಸಾಮಾನ್ಯರು ಏನು ಮಾಡಬಲ್ಲರು' ಎಂದರು.

'ನನ್ನ ಮಗ ಆಕಾಶ್ ಕಿಶೋರ್, ಸ್ನೇಹಿತರೊಂದಿಗೆ ಸೇರಿ ಮದ್ಯ ಸೇವಿಸುವ ಅಭ್ಯಾಸ ರೂಢಿಸಿಕೊಂಡಿದ್ದ. ಈ ಕೆಟ್ಟ ಚಟದಿಂದ ಆತನನ್ನು ಬಿಡಿಸಬೇಕೆಂದು ಮದ್ಯವರ್ಜನ ಕೇಂದ್ರಕ್ಕೂ ದಾಖಲಿಸಿದ್ದೆವು. ಅಲ್ಲಿಂದ ಬಂದ ಮೇಲೆ ಆರು ತಿಂಗಳ ಬಳಿಕ ಮದುವೆಯೂ ಆದ. ಆದರೆ, ಮದುವೆ ಬಳಿಕ ಮತ್ತೆ ಕುಡಿಯಲಾರಂಭಿಸಿದ. ಅಂತಿಮವಾಗಿ ಅದು ಅವನ ಸಾವಿಗೆ ಕಾರಣವಾಯಿತು. ಎರಡು ವರ್ಷದ ಹಿಂದೆಯಷ್ಟೇ ಅ. 19ರಂದು ಮಗ ಆಕಾಶ್ ಸಾವನ್ನಪ್ಪಿದಾಗ ಅವನ ಮಗನಿಗೆ ಕೇವಲ ಎರಡು ವರ್ಷ. ನನ್ನ ಮಗನನ್ನು ನನ್ನಿಂದ ಉಳಿಸಿಕೊಳ್ಳಲಾಗಲಿಲ್ಲ. ಆತನ ಹೆಂಡತಿ ವಿಧವೆಯಾದಳು. ಹಾಗಾಗಿ, ಹೆತ್ತವರೇ ನೀವು ನಿಮ್ಮ ಹೆಣ್ಣುಮಕ್ಕಳ ಅಥವಾ ಸಹೋದರಿಯರನ್ನು ಇಂಥ ಸ್ಥಿತಿಯಿಂದ ರಕ್ಷಿಸಬೇಕು' ಎಂದು ಸಚಿವರು ಸಲಹೆ ನೀಡಿದರು.

'ಸ್ವಾತಂತ್ರ್ಯ ಚಳವಳಿಯಲ್ಲಿ 90 ವರ್ಷದ ಅವಧಿಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿ 6.32 ಲಕ್ಷ ಜನರು ತಮ್ಮ ಪ್ರಾಣತ್ಯಾಗ ಮಾಡಿದರು. ಆದರೆ, ಮದ್ಯವ್ಯಸನದಿಂದ ಪ್ರತಿವರ್ಷ ಸುಮಾರು 20 ಲಕ್ಷ ಜನರು ಸಾಯುತ್ತಿದ್ದಾರೆ' ಎಂದೂ ಸಚಿವರು ಎಚ್ಚರಿಕೆ ನೀಡಿದರು.

ಹಿಮಾಚಲ ಪ್ರದೇಶ: ಜೈ ರಾಮ್ ಠಾಕೂರ್ ಬಿಜೆಪಿ ಶಾಸಕಾಂಗ ಪಕ್ಷದ ನಾಯಕ



ಠಾಕೂರ್

ಶಿಮ್ಲಾ, ಹಿಮಾಚಲ ಪ್ರದೇಶ (ಪಿಟಿಐ): ಇಲ್ಲಿ ನಡೆದ ಬಿಜೆಪಿ ಶಾಸಕಾಂಗ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಹಾಗೂ ಆರನೇ ಬಾರಿ ಶಾಸಕರಾಗಿರುವ ಜೈ ರಾಮ್ ಠಾಕೂರ್ ಅವರನ್ನು ಬಿಜೆಪಿ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಭಾನುವಾರ ಘೋಷಣೆ ಮಾಡಲಾಗಿದೆ.

ಠಾಕೂರ್ ಅವರನ್ನು 24 ಮಂದಿ ಶಾಸಕರ ಒಪ್ಪಿಗೆಯ ಮೇರೆಗೆ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಪಕ್ಷದ ಹಿರಿಯ ನಾಯಕ ಮತ್ತು ಚುನಾವಣಾ ನಿರ್ವಹಣಾ ಸಮಿತಿಯ ಮುಖ್ಯಸ್ಥ ಮಂಗಲ್ ಪಾಂಡೆ ತಿಳಿಸಿದ್ದಾರೆ.

ಬಿಜೆಪಿ ಶಾಸಕರ ಸಭೆಯಲ್ಲಿ ಠಾಕೂರ್, ರಾಜ್ಯ ಬಿಜೆಪಿ ನಾಯಕ ಸುರೇಶ್ ಕಶ್ಯಪ್, ರಾಜ್ಯ ಬಿಜೆಪಿ ಉಸ್ತುವಾರಿ ಮತ್ತು ಸಹ ಉಸ್ತುವಾರಿ ಶಾಸಕ ಅವಿನಾಶ್ ರಾಜ್ ಖನ್ನಾ, ಸಂಜಯ್ ಟಂಡನ್ ಹಾಗೂ ಕೇಂದ್ರ ವೀಕ್ಷಕ ವಿನೋದ್ ತಾವ್ಡಾ ಉಪಸ್ಥಿತರಿದ್ದರು.

ನವೆಂಬರ್‌ನಲ್ಲಿ ನಡೆದ 68 ಸದಸ್ಯರಿದ್ದ ವಿಧಾನಸಭಾ ಚುನಾವಣೆಯಲ್ಲಿ 40 ಸೀಟುಗಳನ್ನು ಗೆಲ್ಲುವ ಮೂಲಕ ಬಿಜೆಪಿಯ ವಿರುದ್ಧ ಕಾಂಗ್ರೆಸ್ ಜಯ ಸಾಧಿಸಿತ್ತು. ಬಿಜೆಪಿ 25 ಸ್ಥಾನ ಗೆದ್ದಿತ್ತು. ಈಚೆಗೆ ಮುಕ್ತಾಯಗೊಂಡ ಚುನಾವಣೆಯಲ್ಲಿ ಸೆರಜ್ ಪ್ರದೇಶದಿಂದ ಠಾಕೂರ್ ಅತಿ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು.

'ಪತ್ರಾಗಾರದಲ್ಲಿ ಇಲ್ಲ ಪಾಕ್, ಚೀನಾ ಯುದ್ಧದ ದಾಖಲೆ'

ನವದೆಹಲಿ (ಪಿಟಿಐ): ಭಾರತ ರಾಷ್ಟ್ರೀಯ ಪತ್ರಾಗಾರ (ಎನ್‌ಎಐ) ಬಳಿ 1962, 1965 ಹಾಗೂ 1971ರ ಯುದ್ಧಗಳಿಗೆ ಹಾಗೂ ಹಸಿರುಕ್ರಾಂತಿಗೆ ಸಂಬಂಧಿಸಿದ ದಾಖಲೆಗಳೇ ಇಲ್ಲ ಎಂದು ಎನ್‌ಎಐ ಪ್ರಧಾನ ನಿರ್ದೇಶಕ ಚಂದನ್ ಸಿನ್ಹಾ ಶುಕ್ರವಾರ ಹೇಳಿದ್ದಾರೆ.

ಈ ಮೂರು ಯುದ್ಧಗಳು ಹಾಗೂ ಹಸಿರು ಕ್ರಾಂತಿ ಕುರಿತ ದಾಖಲೆಗಳನ್ನು ಸಂಬಂಧಪಟ್ಟ ಸಚಿವಾಲಯಗಳು ಮತ್ತು ಇಲಾಖೆಗಳು ಎನ್‌ಎಐನೊಂದಿಗೆ ಹಂಚಿಕೊಳ್ಳದಿರುವುದೇ ಇದಕ್ಕೆ ಕಾರಣ ಎಂದು ಹೇಳಿದ್ದಾರೆ.

'ಸುಶಾಸನ ದಿನ' ಅಂಗವಾಗಿ ಆಡಳಿತಾತ್ಮಕ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು 'ಹಲವು ಸಚಿವಾಲಯಗಳು ಸ್ವಾತಂತ್ರ್ಯ ನಂತರದ ದಿನಗಳಿಂದಲೂ ದಾಖಲೆಗಳನ್ನು ಸಂಸ್ಥೆಯೊಂದಿಗೆ ಹಂಚಿಕೊಂಡಿಲ್ಲ' ಎಂದು ವಿಷಾದಿಸಿದರು.

ನಿಧನ ವಾರ್ತೆ

ತೆಲುಗಿನ ಹಿರಿಯ ನಟ ಚಲಪತಿ ರಾವ್



ಹೈದರಾಬಾದ್ (ಪಿಟಿಐ): ತೆಲುಗಿನ ಹಿರಿಯ ನಟ ಚಲಪತಿ ರಾವ್ (78) ಅವರು ಶನಿವಾರ ರಾತ್ರಿ ನಿಧನರಾದರು.

ಸುಮಾರು 600 ಚಿತ್ರಗಳಲ್ಲಿ ನಟಿಸಿದ್ದ ಅವರು, ಪೋಷಕ ಹಾಗೂ ಖಳನಾಯಕ ಪಾತ್ರಗಳ ಮೂಲಕ ಪ್ರಸಿದ್ಧರಾಗಿದ್ದರು.

'ಯಮಗೋಲ', 'ಯುಗಪುರುಷುಡು', 'ಜಸ್ಟಿಸ್ ಚೌಧರಿ', 'ಬೊಬ್ಬಿಲಿ ಪುಲಿ', 'ನಿನ್ನೇ ಪೆಳ್ಳಾಡತಾ' ಮತ್ತು 'ಅಲ್ಲರಿ' ಚಿತ್ರಗಳಲ್ಲಿನ ಅವರ ನಟನೆ ಹೆಚ್ಚು ಪ್ರಸಿದ್ಧಿ ಪಡೆದಿತ್ತು.

ಚಲಪತಿ ರಾವ್ ಅವರ ಮಗ ರವಿಬಾಬು ಕೂಡ ತೆಲುಗಿನ ಹಲವು ಚಿತ್ರಗಳಲ್ಲಿ ನಟಿಸಿದ್ದಾರೆ. ಜೊತೆಗೆ, ರವಿ ಅವರು ನಿರ್ದೇಶಕ ಹಾಗೂ ನಿರ್ಮಾಪಕರೂ ಆಗಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ,ವಸತಿಯಿದೆ 10,000 -15,000, 8951315839, 9880545002

Multiple Vacancy

GRAPHIC DESIGNER & Marketing Executive for Packaging Industry. min exp 3 yrs. 9845027450 reliancebengaluru@gmail.com

Part-Time Jobs

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611224833/ 9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Out-Station

PLOTS FOR SALE behind Rashmi College, Saraswatipura Kusoor Road Gulbarga Contact: 9845096147 Brokers Not Allowed.

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ

Travel

ಶಿವರಾತ್ರಿ ಪ್ರಯುಕ್ತ ಜನವರಿ ಫೆಬ್ರವರಿ ತಿಂಗಳಲ್ಲಿ 8 ದಿನಗಳ ಕಾಶಿ,ಗಯಾ,ಅಯೋಧ್ಯ ಮಾರ್ಚ್ ಏಪ್ರಿಲ್ ಮೇ ತಿಂಗಳಲ್ಲಿ 12 ದಿನಗಳ ಮುಕ್ತಿನಾಥ ನೇಪಾಳ ನೈಮಿಶಾರಣ್ಯ 14 ದಿನಗಳ ದೆಹಲಿ ಅಮೃತ್‌ಸರ್ ವೈಷ್ಣೋದೇವಿ ಕುಲು ಮನಾಲಿ,ಸಿಮ್ಲಾ 14/21/26 ದಿನಗಳ ಕಾಶಿ,ಗಯಾ ಪ್ರಯಾಗ ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ ದೆಹಲಿ 16 ದಿನಗಳ ಪಂಚದ್ವಾರಕ ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ ಅಹಮದಾಬಾದ್ 21.01.2023 ಒಳಗಾಗಿ ಪೂರ್ಣ ಪ್ರಯಾಣ ದರವನ್ನು ಪಾವತಿಸಿದವರಿಗೆ ಬಸ್ ದರದಲ್ಲಿ 10% ರಿಯಾಯಿತಿ ಕೊಡಲಾಗುವುದು ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289 9019301300 9448119290

ದೆಹಲಿ ಯುಮುನೋತ್ರಿ, ಗಂಗೋತ್ರಿ ಬದರಿನಾಥ್ ಕೇದಾರನಾಥ್ 27.04.2023 03.05.2023 08.05.2023 12.05.2023 ರಿಂದ 14/18 ದಿನಗಳು. ಗ್ವಾಲಿಯರ್, ಖಜರಾವೋ ಜಬಲ್ಪುರ್,ಉಜ್ಜಯಿನಿ ಓಂಕಾರೇಶ್ವರ್ 24.03.2023 03.04.2023 ರಿಂದ 10 ದಿನಗಳು. ಕಾಶ್ಮೀರ್ ಗುಲ್ಮಾರ್ಗ್ ಪೆಹಲ್ಗಾಂ ವೈಷ್ಣೋದೇವಿ 31.03.2023 07.04.2023 14.04.2023 ರಿಂದ 9/7 ದಿನಗಳು. ನೇಪಾಳ ಮುಕ್ತಿನಾಥ,ಪೋಖ್ರಾ,ಕಾಶಿ 31.03.2023 03.04.2023 ರಿಂದ 10 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

23.01.2023 08.03.2023 10.04.2023 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 08.03.2023 05.04.2023 ನೇಪಾಳ 9 ದಿನಗಳು. 10.02.2023 15.03.2023 ದುಬೈ,ಅಬುಧಾಬಿ 5 ದಿನಗಳು. 15.03.2023 15.04.2023 ಭೂತಾನ್ 8 ದಿನಗಳು. 23.02.2023 16.03.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. 09.02.2023 11.03.2023 ಗುಜರಾತ್ 8 ದಿನಗಳು. 05.02.2023 17.03.2023 ರಾಜಸ್ಥಾನ್ 9 ದಿನಗಳು. A/C ರೂಂ/ A/C ಬಸ್ಸು/ ವಿಮಾನದಲ್ಲಿ. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಬೆಂಗಳೂರು-03. 9448402248 7022547922

ಮಹಾಶಿವರಾತ್ರಿ ಪ್ರಯುಕ್ತ 09/02/2023ರಿಂದ ವಿಮಾನ ಮತ್ತು ಎ.ಸಿ ಬಸ್ಸಿನಲ್ಲಿ 16ದಿನಗಳ ಮುಕ್ತಿನಾಥ್,ಪಶುಪತಿನಾಥ್, ಪೋಕ್ರಾ,ಭಕ್ತಪುರ,ಕಾಶಿ, ನೈಮಿಷಾರಣ್ಯ ಹಾಗು 13ದಿನಗಳ ಪಂಚರಾಮಕ್ಷೇತ್ರ ಸಮೇತ ಅನ್ನಾವರಂ,ಸಿಂಹಾಚಲಂ,ವಿಶಾಖಪಟ್ಟಣ 28.1.2023ರಿಂದ 9ದಿನಗಳ ಕಾಶಿ,ಗಯಾ, ಬೈದ್ಯನಾಥೇಶ್ವರ,ಅಲಹಾಬಾದ್. ಏಷ್ಯನ್ ಟ್ರಾವೆಲ್ ಲೈನ್ಸ್, #164/3,ಆರ್.ವಿ.ರಸ್ತೆ, ಬೆಂಗಳೂರು-4. ಫೋನ್: 8105657052, 9480182865.

22/1/2023 ಕೇರಳ, ತಮಿಳುನಾಡು ಪ್ರವಾಸ,4.2.2023, 4.3.2023,ಮಧ್ಯಪ್ರದೇಶ, ಗುಜರಾತ್19/2/2023, 4/3/2023 ದೆಹಲಿ,ಅಮೃತಸರ್,ವೈಷ್ಣೋದೇವಿ ,ಹರಿದ್ವಾರ, ಕಾಶಿ, ಅಯೋಧ್ಯ 21.2.2023, 26.3.2023ಮುಕ್ತಿನಾಥ,ನೇಪಾಳ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755 ಮೈಸೂರು: 9731187554

ಹೊಸವರ್ಷಕ್ಕೆ_16.01.2023 6ದಿನಗಳು A/c.Bus, ವಿಮಾನದಲ್ಲಿ ಕಾಶಿ,ಗಯಾ ಬುದ್ದಗಯಾ,ಅಯೋಧ್ಯ, ಅಲಹಾಬಾದ್_26000/ (ಕೆಲವೇ_ಸೀಟುಗಳಿವೆ) ಪ್ರತಿ_ತಿಂಗಳು ಹಡಗು/ವಿಮಾನದಲ್ಲಿ ಅಂಡಮಾನ್, ಹವಳದ್ವೀಪ ''ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'' 9845560219/ 9739847429.

28.12.2022 ರಿಂದ 13 ದಿನಗಳ ವಿಮಾನ/ A/C ರೂಂ/ A/C ಬಸ್ಸಿನಲ್ಲಿ ಕಚ್‌ಬುಜ್ ಸೋಮನಾಥ,ದ್ವಾರಕಾ ಉಜ್ಜಯಿನಿ ಓಂಕಾರೇಶ್ವರ್ ಮಂಹಾಕಾಳೇಶ್ವರ್ ಕೆಲವೇ ಸೀಟುಗಳಿವೆ. ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ 26574131 8317446683 9448508708

★22.02.2023 14ದಿನಗಳು★ ಮಧ್ಯಪ್ರದೇಶ ಗುಜರಾತ್, ರಾಜಸ್ಥಾನ, 4ಜ್ಯೋತಿರ್ಲಿಂಗ ದ್ವಾರಕಾ, ನಿಷ್ಕಳಂಕಮಹಾದೇವ್, ಅಂಬಾಜಿ,ಜೆಸ್ಮಲೇರ್, ಬಿಕಾನೇರ್ ಜೈಪುರ. ಶ್ರೀಗಂಗಾ ಟೂರಿಸ್ಟ್: 9480253807/ 8105522123

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD
BOOK YOUR CLASSIFIEDS ONLINE
ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752
9845114560 | 9886213331 | 080 - 45557163 / 164
Email: dhclassifieds@deccanherald.co.in

2022 ಹಿನ್ನೋಟ

ಕಾಮನ್‌ವೆಲ್ತ್ ಕೂಟದಲ್ಲಿ ಅಮೋಘ ಸಾಧನೆ

ಬರ್ಮಿಂಗ್‌ಹ್ಯಾಂನಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಕೂಟದಲ್ಲಿ ಭಾರತದ ಕ್ರೀಡಾಪಟುಗಳ ಉತ್ತಮ ಪ್ರದರ್ಶನ ಈ ವರ್ಷ ದೇಶದ ಕ್ರೀಡಾ ಕ್ಷೇತ್ರದಲ್ಲಿ ಸಂಭ್ರಮಕ್ಕೆ ಕಾರಣವಾಯಿತು. ಕಾಮನ್‌ವೆಲ್ತ್ ಕೂಟ ಜುಲೈ 28 ರಿಂದ ಆಗಸ್ಟ್ 8ರ ವರೆಗೆ ಆಯೋಜನೆಯಾಗಿತ್ತು. 200ಕ್ಕೂ ಅಧಿಕ ಕ್ರೀಡಾಪಟುಗಳೊಂದಿಗೆ ಬರ್ಮಿಂಗ್‌ಹ್ಯಾಮ್‌ಗೆ ತೆರಳಿದ್ದ ಭಾರತ ತಂಡ, ಒಟ್ಟು 61 ಪದಕಗಳನ್ನು ಬಗಲಿಗೆ ಹಾಕಿಕೊಂಡಿತ್ತು. ವೇಟ್‌ಲಿಫ್ಟರ್ ಸಂಕೇತ್ ಸರ್ಗರ್ ಅವರು ಬೆಳ್ಳಿ ಜಯಿಸುವ ಮೂಲಕ ಭಾರತದ ಪದಕದ ಬೇಟೆ ಆರಂಭಿಸಿದ್ದರು. ಮೀರಾಬಾಯಿ ಚಾನು ಮೊದಲ ಚಿನ್ನ ಗೆದ್ದುಕೊಟ್ಟಿದ್ದರು.



ಲಾನ್ ಬಾಲ್ಸ್‌ನಲ್ಲಿ ಚಿನ್ನ ಜಯಿಸಿದ್ದ ಲವ್ಲಿ ಚೌಬೆ, ಪಿಂಕಿ, ನಯನ್‌ಮೊನಿ ಸೈಕಿಯಾ ಮತ್ತು ರೂಪಾ ರಾಣಿ ಟಿರ್ಕಿ



ಅಚಂತಾ ಶರತ್ ಕಮಲ್

- 22 ಚಿನ್ನ, 16 ಬೆಳ್ಳಿ ಮತ್ತು 23 ಕಂಚು ಗೆದ್ದುಕೊಂಡಿದ್ದ ಭಾರತ ತಂಡ
- ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ಕೆನಡಾ ಬಳಿಕ ಪದಕ ಪಟ್ಟಿಯಲ್ಲಿ ಭಾರತ ನಾಲ್ಕನೇ ಸ್ಥಾನ ಪಡೆದುಕೊಂಡಿತ್ತು
- ಆರ್ಚರಿ ಮತ್ತು ಶೂಟಿಂಗ್ ಕ್ರೀಡೆಗಳು ಇಲ್ಲದಿದ್ದರೂ ಭಾರತದ ಒಟ್ಟಾರೆ ಪ್ರದರ್ಶನ ಉತ್ತಮವಾಗಿತ್ತು
- ಕುಸ್ತಿ, ವೇಟ್‌ಲಿಫ್ಟಿಂಗ್, ಬ್ಯಾಡ್ಮಿಂಟನ್, ಬಾಕ್ಸಿಂಗ್ ಮತ್ತು ಟೇಬಲ್ ಟೆನಿಸ್‌ನಲ್ಲಿ ಭಾರತ ಹೆಚ್ಚು ಚಿನ್ನ ಗೆದ್ದುಕೊಂಡಿತ್ತು
- ನೀರಜ್ ಚೋಪ್ರಾ ಅವರ ಅನುಪಸ್ಥಿತಿಯಲ್ಲೂ ಅಥ್ಲೆಟಿಕ್ಸ್‌ನಲ್ಲಿ 1ಚಿನ್ನ, 4 ಬೆಳ್ಳಿ ಮತ್ತು 3 ಕಂಚು ಜಯಿಸಿದ್ದು ವಿಶೇಷ
- ನವದೆಹಲಿ ಕೂಟ ಹೊರತುಪಡಿಸಿದರೆ ಅಥ್ಲೆಟಿಕ್ಸ್‌ನಲ್ಲಿ ಭಾರತದ ಶ್ರೇಷ್ಠ ಸಾಧನೆ
- 3 ಚಿನ್ನ, 1 ಬೆಳ್ಳಿ ಸೇರಿದಂತೆ ನಾಲ್ಕು ಪದಕ ಜಯಿಸಿದ್ದ ಟೇಬಲ್ ಟೆನಿಸ್ ಆಟಗಾರ ಅಚಂತಾ ಶರತ್ ಕಮಲ್, ಭಾರತದ ಯಶಸ್ವಿ ಕ್ರೀಡಾಪಟು ಎನಿಸಿಕೊಂಡಿದ್ದರು
- ಭಾರತದ ಹೊರಗೆ ನಡೆದ ಕಾಮನ್‌ವೆಲ್ತ್ ಕೂಟದಲ್ಲಿ ಮೂರನೇ ಹಾಗೂ ಒಟ್ಟಾರೆಯಾಗಿ ನಾಲ್ಕನೇ ಅತ್ಯುತ್ತಮ ಪ್ರದರ್ಶನ ಈ ಬಾರಿ ಮೂಡಿಬಂದಿತ್ತು.
- ಭಾರತದ ಶ್ರೇಷ್ಠ ಸಾಧನೆ 2010ರ ನವದೆಹಲಿ ಕಾಮನ್‌ವೆಲ್ತ್ ಕೂಟದಲ್ಲಿ ದಾಖಲಾಗಿತ್ತು. ಅಲ್ಲಿ 38 ಚಿನ್ನ ಸೇರಿದಂತೆ 101 ಪದಕಗಳು ಬಂದಿದ್ದವು.

ಲಾನ್‌ಬಾಲ್ಸ್‌ನಲ್ಲಿ ಪದಕ

ಭಾರತ ಮಹಿಳಾ ತಂಡದವರು ಕಾಮನ್‌ವೆಲ್ತ್ ಕೂಟದ ಲಾನ್‌ಬಾಲ್ಸ್ ಕ್ರೀಡೆಯಲ್ಲಿ ಚಿನ್ನ ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದರು. ಭಾರತದಲ್ಲಿ ಅಷ್ಟೊಂದು ಜನಪ್ರಿಯತೆ ಹೊಂದಿಲ್ಲದ ಲಾನ್ ಬಾಲ್ಸ್ ಕ್ರೀಡೆಯಲ್ಲಿ ಲಭಿಸಿದ ಮೊದಲ ಪದಕ ಇದಾಗಿತ್ತು. ಲವ್ಲಿ ಚೌಬೆ, ಪಿಂಕಿ, ನಯನ್‌ಮೊನಿ ಸೈಕಿಯಾ ಮತ್ತು ರೂಪಾ ರಾಣಿ ಟಿರ್ಕಿ ಅವರನ್ನೊಳಗೊಂಡ ಭಾರತ ಮಹಿಳಾ ತಂಡದವರು ಫೈನಲ್‌ನಲ್ಲಿ 17–10 ರಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿದ್ದರು. ಪುರುಷರ ತಂಡದವರು ಮೊದಲ ಬಾರಿ ಬೆಳ್ಳಿ ಗೆದ್ದ ಸಾಧನೆ ಮಾಡಿದ್ದರು.

ಏಷ್ಯನ್ ಕ್ರೀಡಾಕೂಟ ಮುಂದಕ್ಕೆ

ಈ ವರ್ಷ ನಡೆಯಬೇಕಿದ್ದ ಏಷ್ಯನ್ ಕ್ರೀಡಾಕೂಟವನ್ನು ಕೋವಿಡ್ ಕಾರಣದಿಂದಾಗಿ ಮುಂದಿನ ವರ್ಷಕ್ಕೆ ಮುಂದೂಡಲಾಗಿದೆ. 2022ರ ಏಷ್ಯನ್ ಕ್ರೀಡಾಕೂಟ ಚೀನಾದ ಹಾಂಗ್‌ಝೌ ನಗರದಲ್ಲಿ ಸೆ.10 ರಿಂದ 25ರ ವರೆಗೆ ನಡೆಯಲು ಉದ್ದೇಶಿಸಲಾಗಿತ್ತು. ಆದರೆ ಆ ನಗರದಲ್ಲಿ ಕೋವಿಡ್ ಮಾರ್ಗಸೂಚಿ ಜಾರಿಯಲ್ಲಿದ್ದ ಕಾರಣ ಕ್ರೀಡಾಕೂಟವನ್ನು ಮುಂದೂಡಲು ಒಲಿಂಪಿಕ್ ಕೌನ್ಸಿಲ್ ಆಫ್ ಏಷ್ಯಾ (ಒಸಿಎ) ತೀರ್ಮಾನಿಸಿತ್ತು. ಈ ಕೂಟ ಅದೇ ನಗರದಲ್ಲಿ 2023ರ ಸೆ.23 ರಿಂದ ಅ.8ರ ವರೆಗೆ ನಡೆಯಲಿದೆ.



ಮೀರಾಬಾಯಿ ಚಾನು

ಸಂತೋಷ್ ಟ್ರೋಫಿ: ಕರ್ನಾಟಕಕ್ಕೆ ಗೆಲುವು

ಬೆಂಗಳೂರು: ಹೊಂದಾಣಿಕೆಯ ಆಟವಾಡಿದ ಕರ್ನಾಟಕ ತಂಡದವರು ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯಲ್ಲಿ ಸುಲಭ ಗೆಲುವು ಪಡೆದರು.

ನವದೆಹಲಿಯಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಕರ್ನಾಟಕ 3–1 ಗೋಲುಗಳಿಂದ ಉತ್ತರಾಖಂಡ ತಂಡವನ್ನು ಮಣಿಸಿತು.

ಜೇಕಬ್ ಜಾನ್ (21ನೇ ನಿ.), ಶಾಜನ್ ಫ್ರಾಂಕ್ಲಿನ್ (45+3) ಹಾಗೂ ಅಂಕಿತ್ (90+3) ಅವರು ಗೋಲು ಗಳಿಸಿ ಕರ್ನಾಟಕ ತಂಡದ ಗೆಲುವಿಗೆ ಕಾರಣರಾದರು. ಉತ್ತರಾಖಂಡದ ಏಕೈಕ ಗೋಲನ್ನು ಅಜಯ್ ಬಿಸ್ಟ್ 44ನೇ ನಿಮಿಷದಲ್ಲಿ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ದೆಹಲಿ ತಂಡ 7–0 ಗೋಲುಗಳಿಂದ ಲಡಾಖ್ ತಂಡವನ್ನು ಮಣಿಸಿತು. ಜೈದೀಪ್ ಸಿಂಗ್ (47, 88 ಮತ್ತು 90+1ನೇ ನಿ.), ಅಜಯ್ ಸಿಂಗ್ (35, 90+4), ರವಿರಾಜ್ ಸಿಂಗ್ (18) ಹಾಗೂ ಗೌರವ್ ಚಂದಾ (40) ಅವರು ದೆಹಲಿ ಪರ ಗೋಲು ಗಳಿಸಿದರು.

ಕರ್ನಾಟಕ ತಂಡ 'ಎ' ಗುಂಪಿನ ತನ್ನ ಮುಂದಿನ ಪಂದ್ಯದಲ್ಲಿ ಮಂಗಳವಾರ ಲಡಾಖ್ ತಂಡದ ಸವಾಲು ಎದುರಿಸಲಿದೆ.

ಹಾಕಿ: ಒಡಿಶಾ ತಲುಪಿದ ಟ್ರೋಫಿ



ಭುವನೇಶ್ವರ (ಪಿಟಿಐ): ವಿಶ್ವಕಪ್ ಹಾಕಿ ಟೂರ್ನಿಯ ಟ್ರೋಫಿಯು 13 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಪ್ರವಾಸವನ್ನು ಪೂರೈಸಿ ಭಾನುವಾರ ಆತಿಥೇಯ ರಾಜ್ಯ ಒಡಿಶಾ ತಲುಪಿತು.

ಇಲ್ಲಿನ ಬಿಜು ಪಟ್ನಾಯಕ್ ವಿಮಾನ ನಿಲ್ದಾಣದಲ್ಲಿ ಬೆಳಿಗ್ಗೆ 11.30ಕ್ಕೆ ಅಧಿಕಾರಿಗಳು ಟ್ರೋಫಿಯೊಂದಿಗೆ ಬಂದಿಳಿದರು. ಈ ವೇಳೆ ಕಲಾವಿದರು, ಮಹಿಳೆಯರು ಮತ್ತು ಮಕ್ಕಳು ಟ್ರೋಫಿಗೆ ಸಾಂಪ್ರದಾಯಿಕ ಸ್ವಾಗತ ನೀಡಿದರು.

ವಿಮಾನ ನಿಲ್ದಾಣದ ಬಳಿಯಲ್ಲಿ ಹಾಕಿ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದರು. ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕಿ ಅವರು ಟ್ರೋಫಿಯನ್ನು ಒಡಿಶಾ ಕ್ರೀಡಾ ಸಚಿವ ತುಷಾರ್‌ಕಾಂತಿ ಬೆಹೆರಾ ಅವರಿಗೆ ಹಸ್ತಾಂತರಿಸಿದರು.

ವಿಶ್ವಕಪ್ ಹಾಕಿ ಟೂರ್ನಿ ಜ. 13 ರಿಂದ 29ರ ವರೆಗೆ ನಡೆಯಲಿದೆ. ಭುವನೇಶ್ವರದ ಕಳಿಂಗ ಹಾಕಿ ಕ್ರೀಡಾಂಗಣ ಮತ್ತು ರೂರ್ಕೆಲಾದ ಬಿರ್ಸಾ ಮುಂಡಾ ಅಂತರರಾಷ್ಟ್ರೀಯ ಹಾಕಿ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ.

ಬ್ಯಾಸ್ಕೆಟ್‌ಬಾಲ್: ಸೆಮಿಗೆ ಕರ್ನಾಟಕ

ಬೆಂಗಳೂರು: ಕರ್ನಾಟಕ ಬಾಲಕಿಯರ ತಂಡದವರು ಇಂದೋರ್‌ನಲ್ಲಿ ನಡೆಯುತ್ತಿರುವ 37ನೇ ರಾಷ್ಟ್ರೀಯ ಯೂತ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ಭಾನುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕ 79–69 ರಲ್ಲಿ ತಮಿಳುನಾಡು ತಂಡವನ್ನು ಮಣಿಸಿತು. ರಾಜ್ಯ ತಂಡದವರು ವಿರಾಮದ ವೇಳೆಗೆ 42–33 ರಲ್ಲಿ ಮೇಲುಗೈ ಸಾಧಿಸಿದ್ದರು.

18 ಪಾಯಿಂಟ್ಸ್ ತಂದಿತ್ತ ಯಶಸ್ವಿನಿ ಅವರು ಕರ್ನಾಟಕದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ನಕ್ಷತ್ರ ಹಾಗೂ ಅದ್ವಾ ಗೌಡ ಅವರು ತಲಾ 12 ಪಾಯಿಂಟ್ಸ್ ತಂದಿತ್ತರು. ತಮಿಳುನಾಡು ತಂಡದ ಪರ ಜುಹಾನ ಕ್ರಿಸ್ತಿನಾ 23 ಹಾಗೂ ಯುವಶ್ರೀ 25 ಪಾಯಿಂಟ್ಸ್ ಗಳಿಸಿದರು.

ಸೋಮವಾರ ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡ ಮಹಾರಾಷ್ಟ್ರ ತಂಡದ ಸವಾಲು ಎದುರಿಸಲಿದೆ.

ಏಷ್ಯಾ ಕಪ್ ಆರ್ಚರಿ ಚಾಂಪಿಯನ್‌ಷಿಪ್

ಭಾರತಕ್ಕೆ ಐದು ಚಿನ್ನ

ಶಾರ್ಜಾ (ಪಿಟಿಐ): ಭಾರತದ ಜೂನಿಯರ್ ಆರ್ಚರಿ ಸ್ಪರ್ಧಿಗಳು ಇಲ್ಲಿ ನಡೆದ ಏಷ್ಯಾ ಕಪ್ ಸ್ಟೇಜ್–3 ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಐದು ಚಿನ್ನ, ಮೂರು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಗೆದ್ದುಕೊಂಡರು.

ಕಾಂಪೌಂಡ್ ವಿಭಾಗದಲ್ಲಿ ಗಮನಾರ್ಹ ಪ್ರದರ್ಶನ ನೀಡಿದ ಭಾರತ ತಂಡ, ಪಣಕ್ಕಿಟ್ಟಿದ್ದ ಎಂಟು ಪದಕಗಳಲ್ಲಿ ಏಳನ್ನೂ ತಮ್ಮದಾಗಿಸಿಕೊಂಡರು. ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ಪ್ರಗತಿ, ಅದಿತಿ ಸ್ವಾಮಿ ಮತ್ತು ಪರಿಣೀತ್ ಕೌರ್ ಅವರು ಕ್ರಮವಾಗಿ ಚಿನ್ನ, ಬೆಳ್ಳಿ ಹಾಗೂ ಕಂಚು ಗೆದ್ದು 'ಕ್ಲೀನ್‌ಸ್ವೀಪ್' ಸಾಧನೆ ಮಾಡಿದರು.

ಪ್ರಿಯಾಂಶ್ ಮತ್ತು ಓಜಸ್ ಅವರು ಪುರುಷರ ಕಾಂಪೌಂಡ್ ವೈಯಕ್ತಿಕ ವಿಭಾಗದಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದುಕೊಂಡರು.

ಕಾಂಪೌಂಡ್ ಸ್ಪರ್ಧೆ ತಂಡ ವಿಭಾಗದಲ್ಲಿ ಭಾರತದ ಪುರುಷರು ಹಾಗೂ ಮಹಿಳೆಯರು, ಕೊರಿಯಾ ತಂಡವನ್ನು ಮಣಿಸಿ ಚಿನ್ನ ಜಯಿಸಿದರು.

ಕಾಂಪೌಂಡ್ ಮಿಶ್ರ ಡಬಲ್ಸ್ ವಿಭಾಗದಲ್ಲಿ ಮಾತ್ರ ಭಾರತ ಪದಕ ಗೆಲ್ಲುವಲ್ಲಿ ವಿಫಲವಾಯಿತು. ಓಜಸ್ ಮತ್ತು ಪ್ರಗತಿ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಸೋತರು.

ರಿಕರ್ವ್ ವಿಭಾಗದಲ್ಲಿ ಭಾರತದ ಸ್ಪರ್ಧಿಗಳು ತಲಾ ಒಂದು ಚಿನ್ನ ಮತ್ತು ಬೆಳ್ಳಿ ಗೆದ್ದುಕೊಂಡರು. ಪುರುಷರ ತಂಡ ವಿಭಾಗದಲ್ಲಿ ಆಕಾಶ್ ಮೃಣಾಲ್‌ಮತ್ತು ಪಾರ್ಥ್ ಸಾಲುಂಕೆ ಅವರು ಕೊರಿಯಾದ ಎದುರಾಳಿಗಳನ್ನು ಮಣಿಸಿ ಚಿನ್ನ ಗೆದ್ದರು.

ಮಿಶ್ರ ಡಬಲ್ಸ್ ವಿಭಾಗದಲ್ಲಿ ಸಾಲುಂಕೆ ಹಾಗೂ ತಿಶಾ ಪೂನಿಯಾ, ಬೆಳ್ಳಿ ಪದಕ ಪಡೆದರು. ಫೈನಲ್‌ನಲ್ಲಿ ಅವರು ಚೀನಾ ತೈಪೆಯ ಕಯ್ ಹಾನ್ ಯಾಂಗ್ ಮತ್ತು ಸು ಮಿನ್ ಸು ಎದುರು ಪರಾಭವಗೊಂಡರು.



ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಪದಕ ಗೆದ್ದ ಭಾರತ ತಂಡದ ಸದಸ್ಯರು –ಸಾಯ್ ಟ್ವಿಟರ್ ಚಿತ್ರ

ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಸೆಮಿಫೈನಲ್

ಕರ್ನಾಟಕ ತಂಡದ ಹೋರಾಟ

ಬೆಂಗಳೂರು: ಕರ್ನಾಟಕ ತಂಡದವರು ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ವಿದರ್ಭ ತಂಡದ ವಿರುದ್ಧ ಇನಿಂಗ್ಸ್ ಮುನ್ನಡೆ ಸಾಧಿಸಲು ಹೋರಾಟ ನಡೆಸಿದ್ದಾರೆ.

ನಾಗ್ಪುರದ ವಿಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಭಾನುವಾರ ಕರ್ನಾಟಕ ತಂಡ ಮೊದಲ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗಳಿಗೆ 107 ರನ್ ಗಳಿಸಿದೆ. ವಿದರ್ಭ ಮೊದಲ ಇನಿಂಗ್ಸ್‌ನಲ್ಲಿ 450 ರನ್ ಗಳಿಸಿತ್ತು.

ಕರ್ನಾಟಕ ತಂಡ ಆರಂಭಿಕ ಬ್ಯಾಟರ್ ವಿಜಯರಾಜ್ (28) ಮತ್ತು ಧ್ರುವ್ ಪ್ರಭಾಕರ್ (1) ಅವರನ್ನು ಬೇಗನೇ ಕಳೆದುಕೊಂಡಿತು. ಇನ್ನೊಬ್ಬ ಆರಂಭಿಕ ಬ್ಯಾಟರ್ ಸ್ವರೂಪ್ ಎಸ್. ಹಿಪ್ಪಗರಿ (ಬ್ಯಾಟಿಂಗ್ 59) ಹಾಗೂ ಪ್ರಖರ್ ಚತುರ್ವೇದಿ (ಬ್ಯಾಟಿಂಗ್ 17) ಅವರು ಹೆಚ್ಚಿನ ವಿಕೆಟ್ ಬೀಳದಂತೆ ನೋಡಿಕೊಂಡರು.

ಮೊದಲು ಬ್ಯಾಟ್ ಮಾಡಿದ ವಿದರ್ಭ ತಂಡ, ನೀಲ್ ಅಠಾಳೆ (162) ಅವರ ಶತಕ ಮತ್ತು ಜಗಜ್ಯೋತ್ ಗಳಿಸಿದ 94 ರನ್‌ಗಳ ನೆರವಿನಿಂದ ಉತ್ತಮ ಮೊತ್ತ ಕಲೆಹಾಕಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್; ವಿದರ್ಭ 127.4 ಓವರ್‌ಗಳಲ್ಲಿ 450 (ಝುಬೈರುದ್ದೀನ್ 29, ನೀಲ್ ಅಠಾಳೆ 162, ರೋಹಿತ್ ವಿ. ಬಿನಕರ್ 65, ಜಗಜ್ಯೋತ್ 94, ಧರ್ಮೇಂದ್ರ ಠಾಕೂರ್ 48, ಯಶೋವರ್ಧನ್ ಪರಂತಪ್ 64ಕ್ಕೆ 2, ಆದಿತ್ಯ ನಾಯರ್ 50ಕ್ಕೆ 3, ಹಾರ್ದಿಕ್ ರಾಜ್ 101ಕ್ಕೆ 3, ಮೊಹ್ಸಿನ್ 80ಕ್ಕೆ 2) ಕರ್ನಾಟಕ 47 ಓವರ್‌ಗಳಲ್ಲಿ 2ಕ್ಕೆ 107 (ವಿಜಯರಾಜ್ 28, ಸ್ವರೂಪ್ ಎಸ್.ಹಿಪ್ಪರಗಿ ಬ್ಯಾಟಿಂಗ್ 59, ಗೌರವ್ 30ಕ್ಕೆ 2)

ಎರಡು ವರ್ಷಗಳ ಬಳಿಕ ಕ್ರಿಸ್‌ಮಸ್ ಸಡಗರ: ಪ್ರವಾಸಿಗರ ದಂಡು

ಬೆತ್ಲೆಹೆಮ್‌ನಲ್ಲಿ ಮರುಕಳಿಸಿದ ಸಂಭ್ರಮ

ಬೆತ್ಲೆಹೆಮ್/ಜೆರುಸಲೇಮ್ (ಪಿಟಿಐ): ಏಸು ಕ್ರಿಸ್ತನ ಜನ್ಮಸ್ಥಳ ಬೆತ್ಲೆಹೆಮ್‌ನಲ್ಲಿ ಈ ಬಾರಿ ಕ್ರಿಸ್‌ಮಸ್ ಸಂಭ್ರಮ ಮೇಳೈಸಿತ್ತು. ಕೋವಿಡ್‌ನಿಂದಾಗಿ ಹಿಂದಿನ ಎರಡು ವರ್ಷ ಹಬ್ಬದ ಸಡಗರ ಕಳೆಗುಂದಿತ್ತು. ಭಾರತ ಸೇರಿದಂತೆ ವಿದೇಶಿ ಯಾತ್ರಿಕರೂ ನಗರಕ್ಕೆ ಭೇಟಿ ನೀಡಿರುವುದರಿಂದ ಈ ಬಾರಿ ಪ್ರವಾಸೋದ್ಯಮ ಚಟುವಟಿಕೆಗಳಿಗೂ ಗರಿಗೆದರಿವೆ.

'ಈ ಬಾರಿ ಕ್ರಿಸ್‌ಮಸ್ ಸಂಭ್ರಮಾಚರಣೆಯಲ್ಲಿ ಪಾಲ್ಗೊಳ್ಳುವ ಸಲುವಾಗಿ ಭಾರತದಿಂದ ಸುಮಾರು 250 ಮಂದಿ ಯಾತ್ರಿಕರು ನಗರಕ್ಕೆ ಬಂದಿದ್ದಾರೆ' ಎಂದು ಸ್ಕಾಪಸ್ ವರ್ಲ್ಡ್ ಟ್ರಾವೆಲ್‌ನ ಸಿಇಒ ಅಶೋಕ್ ರವಿ ಹೇಳಿದ್ದಾರೆ.

ಪ್ಯಾಲೆಸ್ಟೀನ್‌ನ ಬಾಲಕ ಮತ್ತು ಬಾಲಕಿಯರು ಶನಿವಾರ ಮ್ಯಾಂಗರ್ ಸ್ಕ್ವೇರ್ ಬಳಿ ಸಾಂಪ್ರದಾಯಿಕ ಪಥ ಸಂಚಲನ ನಡೆಸುವ ಮೂಲಕ ಕ್ರಿಸ್‌ಮಸ್ ಸಂಭ್ರಮಾಚರಣೆಗೆ ಚಾಲನೆ ನೀಡಿದರು. ಸ್ಕ್ವೇರ್ ಬಳಿ ಸಿಂಗರಿಸಲಾಗಿದ್ದ ಕ್ರಿಸ್‌ಮಸ್ ಟ್ರೀ ಎದುರು ನಿಂತು ವಿದೇಶಿ ಪ್ರವಾಸಿಗರು ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಿದ್ದ ದೃಶ್ಯ ಕಂಡುಬಂತು.

'ಕ್ರಿಸ್‌ಮಸ್ ಸಂಭ್ರಮಾಚರಣೆಯಲ್ಲಿ ಭಾಗಿಯಾಗುವ ಸಲುವಾಗಿ ಈ ಬಾರಿ ಜಗತ್ತಿನ ವಿವಿಧ ಭಾಗಗಳಿಂದ 1.20 ಲಕ್ಷ ಮಂದಿ ಪ್ರವಾಸಿಗರು ಹಾಗೂ ಭಕ್ತರು ಬೆತ್ಲೆಹೆಮ್‌ಗೆ ಭೇಟಿ ನೀಡುವ ನಿರೀಕ್ಷೆ ಇದೆ' ಎಂದು ಇಸ್ರೇಲ್‌ನ ಪ್ರವಾಸೋದ್ಯಮ ಸಚಿವಾಲಯ ಹೇಳಿದೆ.

'ಜಗತ್ತು ಶಾಂತಿಯ ಕ್ಷಾಮದಿಂದ ಬಳಲುತ್ತಿದೆ: ಉಕ್ರೇನ್ ಮೇಲಿನ ಯುದ್ಧ ಹಾಗೂ ಇತರೆ ಸಂಘರ್ಷಗಳಿಗೆ ತೆರೆ ಎಳೆಯಬೇಕಿದೆ' ಎಂದು ಪೋಪ್ ಫ್ರಾನ್ಸಿಸ್ ಭಾನುವಾರ ಹೇಳಿದ್ದಾರೆ.

'ನಿರಾಶ್ರಿತರು, ವಲಸಿಗರು ಹಾಗೂ ಬಡವರಿಗೆ ಸಹಾಯ ಮಾಡಿ' ಎಂದು 10ನೇ ಕ್ರಿಸ್‌ಮಸ್ ಭಾಷಣದಲ್ಲಿ ಮನವಿ ಮಾಡಿದ್ದಾರೆ.

'ಕಷ್ಟದಲ್ಲಿರುವವರಿಗೆ ಸಹಾಯ ಮಾಡುವಂತಹ ಮನಸ್ಸನ್ನು ಆ ದೇವರು ನಮ್ಮೆಲ್ಲರಿಗೂ ಕರುಣಿಸಲಿ. ಆಯುಧಗಳ ಘರ್ಜನೆಯನ್ನು ನಿಶಬ್ದಗೊಳಿಸುವಂತೆ ಅಧಿಕಾರಸ್ಥರ ಮನಸ್ಸನ್ನು ಪರಿವರ್ತಿಸಲಿ. ಆ ಮೂಲಕ ಅರ್ಥವಿಲ್ಲದ ಈ ಯುದ್ಧಗಳಿಗೆ ತಕ್ಷಣವೇ ಅಂತ್ಯ ಹಾಡುವಂತೆ ಮಾಡಲಿ' ಎಂದೂ ಅವರು ಹೇಳಿದ್ದಾರೆ. ಆಹಾರವನ್ನು ಯುದ್ಧದ ಅಸ್ತ್ರವನ್ನಾಗಿ ಬಳಸುವುದಕ್ಕೆ ಖಂಡನೆ ವ್ಯಕ್ತಪಡಿಸಿರುವ ಅವರು ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧವು ಲಕ್ಷಾಂತರ ಮಂದಿಯನ್ನು ಸಂಕಷ್ಟಕ್ಕೆ ದೂಡಿದೆ ಎಂದಿದ್ದಾರೆ.



ಮ್ಯಾಂಗರ್ ಸ್ಕ್ವೇರ್ ಬಳಿ ಶನಿವಾರ ಮಹಿಳೆಯರ ಸಂಭ್ರಮ –ಎಎಫ್‌ಪಿ ಚಿತ್ರ

ನ್ಯಾಯಕ್ಕಾಗಿ ಮುಸ್ಲಿಮರ ಒತ್ತಾಯ

ಪ್ರಜಾವಾಣಿ ವಾರ್ತೆ

ಸುರತ್ಕಲ್ (ದಕ್ಷಿಣ ಕನ್ನಡ): ಸಮೀಪದ ಕಾಟಿಪಳ್ಳ ಕೃಷ್ಣಾಪುರದಲ್ಲಿ ದುಷ್ಕರ್ಮಿಗಳಿಂದ ಹತ್ಯೆಗೊಳಗಾದ ವರ್ತಕ ಅಬ್ದುಲ್ ಜಲೀಲ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಭಾನುವಾರ ಭಾರಿ ಸಂಖ್ಯೆಯಲ್ಲಿ ಜನ ಸೇರಿದ್ದರು.

'ಮುಸ್ಲಿಂ ಸಮುದಾಯಕ್ಕೆ ನ್ಯಾಯ ಸಿಗುವ ಭರವಸೆ ಇಲ್ಲ. ಈ ಪ್ರಕರಣದಲ್ಲಾದರೂ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು' ಎಂದು ಒತ್ತಾಯಿಸಿ ಕೆಲಕಾಲ ಧರಣಿ ನಡೆಸಿದರು.


'ತಮ್ಮ ಸಮುದಾಯಕ್ಕೆ ಪದೇ ಪದೇ ಅನ್ಯಾಯವಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಸ್ಥಳಕ್ಕೆ ಬಂದು ನ್ಯಾಯ ಒದಗಿಸುವ ಭರವಸೆ ನೀಡಬೇಕು' ಎಂದು ಜಲೀಲ್ ಅವರ ಬಂಧುಗಳು ಹಾಗೂ ಮುಸ್ಲಿಂ ಮುಖಂಡರು ಒತ್ತಾಯಿಸಿದರು.

ಜಲೀಲ್ ಅವರ ಅಂತಿಮ ದರ್ಶನಕ್ಕೆ ಕೃಷ್ಣಾಪುರ 9ನೇ ಬ್ಲಾಕ್‌ನ ಅನ್ಸಾರಿಯಾ ಜುಮ್ಮಾ ಮಸೀದಿ ಬಳಿ ಭಾನುವಾರ ಬೆಳಿಗ್ಗೆ ವ್ಯವಸ್ಥೆ ಕಲ್ಪಿಸಲಾಗಿತ್ತು.

ಸ್ಥಳಕ್ಕೆ ಭೇಟಿ ನೀಡಿದ್ದ ನಗರ ಪೊಲೀಸ್ ಆಯುಕ್ತ ಶಶಿಕುಮಾರ್ ಅವರನ್ನು ಸುತ್ತುವರಿದ ಮುಸ್ಲಿಂ ಸಮುದಾಯದ ಪ್ರಮುಖರು, 'ನಮ್ಮ ಸಮುದಾಯಕ್ಕೆ ಅನ್ಯಾಯ ಆಗುತ್ತಿದೆ. ಜುಲೈನಲ್ಲಿ ಫಾಜಿಲ್ ಹತ್ಯೆ ಆರೋಪಿಗಳಿಗೆ ಒಂದೇ ವಾರದಲ್ಲಿ ಜಾಮೀನು ಸಿಕ್ಕಿತ್ತು. ಈಗಲೂ ನಮಗೆ ನ್ಯಾಯ ಸಿಗುವ ಭರವಸೆ ಇಲ್ಲ. ಜಿಲ್ಲಾಧಿಕಾರಿ ಸ್ಥಳಕ್ಕೆ ಬಂದು ನ್ಯಾಯ ಒದಗಿಸುವ ಭರವಸೆ ನೀಡಬೇಕು. ಅಲ್ಲಿಯವರೆಗೆ ಅಂತ್ಯಕ್ರಿಯೆ ನಡೆಸುವುದಿಲ್ಲ' ಎಂದು ಪಟ್ಟು ಹಿಡಿದರು.

'ನಿಷ್ಪಕ್ಷಪಾತವಾಗಿ ತನಿಖೆ ನಡೆಸುತ್ತೇವೆ. ಕೊಲೆ ಆರೋಪಿಗಳನ್ನು ಬಂಧಿಸಲಾಗುವುದು' ಎಂದು ಶಶಿಕುಮಾರ್ ಭರವಸೆ ನೀಡಿದ ಬಳಿಕ ಅಂತ್ಯಕ್ರಿಯೆಗೆ ಅನುವು ಮಾಡಿಕೊಟ್ಟರು.

ಕಾಡಾನೆ ದಾಳಿ; ರೈತ ಸಾವು



ಈರಪ್ಪ

ಚಿಕ್ಕಮಗಳೂರು: ತರೀಕೆರೆ ತಾಲ್ಲೂಕಿನ ಕಾಡಂಚಿನ ಗ್ರಾಮ ರಾಗಿಬಸವನಹಳ್ಳಿಯ ಜಮೀನಿನಲ್ಲಿ ಕಾಡಾನೆ ದಾಳಿಗೆ ರೈತ ಈರಪ್ಪ (65) ಮೃತಪಟ್ಟಿದ್ದಾರೆ.

ಬೆಳೆ ಕಾಯಲು ಹೋಗಿದ್ದ ಈರಪ್ಪ ಅವರನ್ನು ಶನಿವಾರ ತಡರಾತ್ರಿ ಹೊಲಕ್ಕೆ ನುಗ್ಗಿದ ಕಾಡಾನೆ ಸಾಯಿಸಿದೆ. ಅಡಿಕೆ ಗಿಡ, ರಾಗಿ ಬೆಳೆ ಹಾನಿ ಮಾಡಿದೆ.

'ಈರಪ್ಪ ಅವರ ಕುಟುಂಬಕ್ಕೆ ₹5 ಲಕ್ಷ ಪರಿಹಾರ ನೀಡುತ್ತೇವೆ. ಇಲಾಖೆಯಿಂದ ಒಟ್ಟು ₹15 ಲಕ್ಷ ಪರಿಹಾರ ಸಿಗಲಿದೆ' ಎಂದು ಭದ್ರಾವತಿ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿವಶರಣಯ್ಯ ತಿಳಿಸಿದರು.

ನಿತ್ಯದ ಕೋವಿಡ್ ಮಾಹಿತಿ ನಿಲ್ಲಿಸಿದ ಚೀನಾ

ಬೀಜಿಂಗ್ (ಎಎಫ್‌ಪಿ/ರಾಯಿಟರ್ಸ್): ದೇಶದಲ್ಲಿ ವರದಿಯಾಗುವ ಕೋವಿಡ್ ಸೋಂಕಿನ ಹೊಸ ಪ್ರಕರಣಗಳು ಮತ್ತು ಕೋವಿಡ್ ಸಂಬಂಧಿತ ಸಾವುಗಳ ದೈನಂದಿನ ಮಾಹಿತಿಯನ್ನು ಪ್ರಕಟಿಸುವುದಿಲ್ಲ ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗ ಭಾನುವಾರ ತಿಳಿಸಿದೆ.

ತನ್ನ ನೀತಿ ಬದಲಿಸಿರುವುದಕ್ಕೆ ಯಾವುದೇ ವಿವರಣೆ ನೀಡದಿರುವ ಎನ್‌ಎಚ್‌ಸಿ, '2020ರ ಆರಂಭದಲ್ಲಿ ಆರಂಭಿಸಿದ ಈ ಕ್ರಮವನ್ನು ಕೈಬಿಡಲಾಗಿದೆ. ಭಾನುವಾರದಿಂದ, ನಾವು ಇನ್ನು ಕೋವಿಡ್ ಪಿಡುಗಿನ ಬಗ್ಗೆ ದೈನಂದಿನ ಮಾಹಿತಿ ಪ್ರಕಟಿಸುವುದಿಲ್ಲ' ಎಂದು ಹೇಳಿದೆ.

ತನ್ನ ಶೂನ್ಯ ಕೋವಿಡ್ ನೀತಿ ಸಡಿಸಿಲಿಸಿದ ಬೆನ್ನಲ್ಲೇ ದೇಶದಾದ್ಯಂತ ನಗರಗಳಲ್ಲಿ ಕೋವಿಡ್ ಹೊಸ ಪ್ರಕರಣಗಳು ಕ್ಷಿಪ್ರ ಏರಿಕೆಯಾಗಿವೆ. ಇದರ ಪರಿಣಾಮ ಬೀಜಿಂಗ್, ಶಾಂಘೈ, ಝೆಜಿಯಾಂಗ್, ಕಿಂಗ್ಡಾವೊ ಸೇರಿ ಹಲವು ನಗರಗಳಲ್ಲಿ ಸೋಂಕಿತರಿಂದ ಆಸ್ಪತ್ರೆಗಳು ಭರ್ತಿಯಾಗಿವೆ. ಔಷಧಾಲಯಗಳಲ್ಲಿ ಔಷಧಿಗಳು ಮುಗಿದು ಹೋಗಿವೆ. ಸಾವಿನ ಸಂಖ್ಯೆಯೂ ಏರುತಿದ್ದು, ಸ್ಮಶಾನಗಳು ಭರ್ತಿಯಾಗುತ್ತಿವೆ. ಚಿತಾಗಾರಗಳಲ್ಲಿ ಶವ ಸಂಸ್ಕಾರ ಬಿಡುವಿಲ್ಲದೆ ನಡೆಯುತ್ತಿದೆ.

ಶೂನ್ಯ ಕೋವಿಡ್ ಕಠಿಣ ನಿರ್ಬಂಧ ತೆರವುಗೊಳಿಸಿದ ನಂತರ ದೇಶದಲ್ಲಿ ಈವರೆಗೆ ಆರು ಜನರು ಮಾತ್ರ ಸೋಂಕಿನಿಂದ ಮೃತಪಟ್ಟಿದ್ದಾರೆಂದು ಸರ್ಕಾರ ಅಧಿಕೃತವಾಗಿ ಹೇಳಿಕೊಂಡಿದೆ. ಆದರೆ, ಕಳೆದ ಶುಕ್ರವಾರ ಕಿಂಗ್ಡಾವೊದ ಹಿರಿಯ ಆರೋಗ್ಯ ಅಧಿಕಾರಿ ನೀಡಿರುವ ಮಾಹಿತಿ ಪ್ರಕಾರ ಚೀನಾದ ಕೇವಲ ಒಂದು ನಗರದಲ್ಲಿ ನಿತ್ಯ 5 ಲಕ್ಷ ಜನರು ಸೋಂಕಿಗೆ ತುತ್ತಾಗುತ್ತಿದ್ದಾರೆ.

ಝೆಜಿಯಾಂಗ್ ನಿತ್ಯ 10 ಲಕ್ಷ ಪ್ರಕರಣ: ಚೀನಾದ ಶಾಂಘೈ ಬಳಿಯ ದೊಡ್ಡ ಕೈಗಾರಿಕಾ ಪ್ರಾಂತ್ಯ ಝೆಜಿಯಾಂಗ್ ನಗರದಲ್ಲಿ ನಿತ್ಯ 10 ಲಕ್ಷ ಕೋವಿಡ್ ಸೋಂಕಿನ ಹೊಸ ಪ್ರಕರಣಗಳು ವರದಿಯಾಗುತ್ತಿವೆ. ಮುಂದಿನ ದಿನಗಳಲ್ಲಿ ಇದು ದ್ವಿಗುಣವಾಗುವ ನಿರೀಕ್ಷೆ ಇದೆ ಎಂದು ಪ್ರಾಂತೀಯ ಸರ್ಕಾರ ಭಾನುವಾರ ತಿಳಿಸಿದೆ.

ಝೆಜಿಯಾಂಗ್‌ನ ಜ್ವರ ಚಿಕಿತ್ಸಾಲಯಗಳಿಗೆ ಬರುತ್ತಿರುವವರ ಸಂಖ್ಯೆ ನಿತ್ಯ 4,08,400 ಪ್ರಕರಣಗಳು ವರದಿಯಾಗಿವೆ. ಇದು ಕಳೆದ ವಾರದ ಸಾಮಾನ್ಯ ದಿನಗಳಿಗೆ ಹೋಲಿಸಿದರೆ 14 ಪಟ್ಟು ಹೆಚ್ಚಾಗಿದೆ ಎಂದು ಝೆಜಿಯಾಂಗ್ ಅಧಿಕಾರಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಸೋಂಕು ಹರಡುವಿಕೆ ವೇಗ ತಗ್ಗಿಸಲು ಚೀನಿ ಅಧಿಕಾರಿಗಳು ಈಗ ಯಾವುದೇ ಪ್ರಯತ್ನ ಮಾಡುತ್ತಿಲ್ಲ. ಚಂದ್ರಮಾನ ಹೊಸ ವರ್ಷಕ್ಕೆ ಮುಂಚಿತವಾಗಿ ಜನರ ವಲಸೆ ಆರಂಭವಾಗಿರುವುದರಿಂದ, ಸದ್ಯ ದೇಶದ ಯಾವ ಭಾಗದಲ್ಲಿ ದೊಡ್ಡ ಅಲೆ ಕಾಣಿಸಿಲ್ಲವೋ ಅಲ್ಲಿ ಕೋವಿಡ್ ದೊಡ್ಡ ಅಲೆ ಎದುರಾಗಲಿದೆ' ಎಂದು ಕ್ಯಾಪಿಟಲ್ ಎಕನಾಮಿಕ್ಸ್‌ನ ತಜ್ಞರು ಎಚ್ಚರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ನೇಪಾಳ: ಭಾರತದ ವ್ಯಕ್ತಿಯ ಹತ್ಯೆ

ಕಠ್ಮಂಡು (ಪಿಟಿಐ): 'ದಕ್ಷಿಣ ಭಾಗದ ನೇಪಾಳದಲ್ಲಿ ಐವರು ಅನಾಮಧೇಯ ಬಂದೂಕುಧಾರಿ ವ್ಯಕ್ತಿಗಳು ಭಾರತದ ವ್ಯಕ್ತಿಯೊಬ್ಬರನ್ನು ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ' ಎಂದು ಪೊಲೀಸರು ಶನಿವಾರ ತಿಳಿಸಿದರು.

'ಶಿವ ಪೂಜನ್ ಯಾದವ್ (45) ಹತ್ಯೆಯಾದ ವ್ಯಕ್ತಿ. ಮಹಾಗಧಿಮಯಿ ನಗರಸಭೆಯಲ್ಲಿ ಯಾದವ್ ಅವರ ಹತ್ಯೆ ಮಾಡಲಾಗಿದೆ. 2 ಬೈಕ್‌ಗಳಲ್ಲಿ ಬಂದ ಐವರು ಬಂದೂಕುಧಾರಿಗಳು ಯಾದವ್ ಮೇಲೆ ಗುಂಡು ಹಾರಿಸಿದರು. ಯಾದವ್ ಅವರು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಮೃತಪಟ್ಟರು' ಎಂದು ಪೊಲೀಸರು ವಿವರಿಸಿದರು.

ನೇಪಾಳ: ಪ್ರಚಂಡಗೆ ಪ್ರಧಾನಿ ಗಾದಿ



ಪುಷ್ಪ ಕಮಲ್ ದಹಲ್

ಕಠ್ಮಂಡು (ಪಿಟಿಐ): ನೇಪಾಳದ ನೂತನ ಪ್ರಧಾನಿಯಾಗಿ ನೇಪಾಳ ಕಮ್ಯುನಿಸ್ಟ್ ಪಕ್ಷದ (ಮಾವೋವಾದಿ) ಮುಖ್ಯಸ್ಥ ಪುಷ್ಪ ಕಮಲ್ ದಹಲ್ (ಪ್ರಚಂಡ) ಭಾನುವಾರ ನೇಮಕಗೊಂಡಿದ್ದಾರೆ.

'ಅಧ್ಯಕ್ಷೆ ವಿದ್ಯಾದೇವಿ ಭಂಡಾರಿ ಅವರು ಸಂವಿಧಾನದ ವಿಧಿ 75 (2)ರ ಅನ್ವಯ ಪ್ರಚಂಡ ಅವರನ್ನು ಪ್ರಧಾನಿ ಹುದ್ದೆಗೆ ನೇಮಿಸಿದ್ದಾರೆ' ಎಂದು ಅಧ್ಯಕ್ಷರ ಕಚೇರಿಯ ಪ್ರಕಟಣೆ ತಿಳಿಸಿದೆ.

'ನೂತನ ಪ್ರಧಾನಿಯವರ ಪ್ರಮಾಣ ವಚನ ಸ್ವೀಕಾರ ಸಮಾರಂಭ ಸೋಮವಾರ ಸಂಜೆ 4 ಗಂಟೆಗೆ ನಿಗದಿಯಾಗಿದೆ' ಎಂದೂ ಪ್ರಕಟಣೆಯಲ್ಲಿ ಹೇಳಲಾಗಿದೆ. 68 ವರ್ಷದ ಪ್ರಚಂಡ ಅವರು ಮೂರನೇ ಸಲ ಪ್ರಧಾನಿ ಹುದ್ದೆಗೆ ಏರಿ ಭಾನುವಾರ ಅಧ್ಯಕ್ಷರ ಕಚೇರಿಗೆ ಭೇಟಿ ನೀಡಿದ್ದ ಪ್ರಚಂಡ ಅವರು ತಮ್ಮನ್ನು ಪ್ರಧಾನಿ ಹುದ್ದೆಗೆ ನೇಮಕ ಮಾಡುವಂತೆ ಹಕ್ಕು ಮಂಡಿಸಿದ್ದರು' ಎಂದು ಮೂಲಗಳು ಹೇಳಿವೆ.

ಕಾಬೂಲ್: ಕಾರ್ಯ ಸ್ಥಗಿತಗೊಳಿಸಿದ 3 ಎನ್‌ಜಿಒಗಳು

ಕಾಬೂಲ್ (ಎಪಿ): ಮಹಿಳೆಯರು ಸರ್ಕಾರೇತರ ಸಂಸ್ಥೆ (ಎನ್‌ಜಿಒ)ಗಳಿಗೆ ಪ್ರವೇಶಿಸುವಂತಿಲ್ಲ ಎಂದು ತಾಲಿಬಾನ್ ಸರ್ಕಾರ ನಿರ್ಬಂಧ ವಿಧಿಸಿದ ಬೆನ್ನಲ್ಲೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಮತ್ತು ಸ್ಥಳೀಯವಾಗಿ ಕಾರ್ಯನಿರ್ವಹಿಸುತ್ತಿದ್ದ ಮೂರು ಎನ್‌ಜಿಒಗಳು ಭಾನುವಾರ ತಮ್ಮ ಕಾರ್ಯವನ್ನು ಸ್ಥಗಿತಗೊಳಿಸಿವೆ.

ಸೇವ್ ದಿ ಚಿಲ್ಡ್ರನ್, ದಿ ನಾರ್ವೇಜಿಯನ್ ರೆಫ್ಯೂಜಿ ಕೌನ್ಸಿಲ್ ಮತ್ತು ಸಿಎಆರ್‌ಇ ಹೆಸರಿನ ಎನ್‌ಜಿಒಗಳು ಕಾರ್ಯ ನಿಲ್ಲಿಸಿವೆ. ದೇಶದಲ್ಲಿ ಒಟ್ಟು 468 ಮಹಿಳಾ ಸಿಬ್ಬಂದಿಯಿದ್ದಾರೆ. ಮಹಿಳೆಯರು ಇಲ್ಲದೆ ಮಕ್ಕಳು, ಕಷ್ಟದಲ್ಲಿರುವ ಮಹಿಳೆಯರು ಮತ್ತು ಪುರುಷನ್ನು ತಲುಪಲು ಸಾಧ್ಯವಿಲ್ಲ ಎಂದು ಮೂರು ಸಂಸ್ಥೆಗಳು ತಿಳಿಸಿವೆ.

ತೈವಾನ್ ಸುತ್ತ ಚೀನಾ ತಾಲೀಮು

ಬೀಜಿಂಗ್/ತೈಪೈ (ರಾಯಿಟರ್ಸ್) ತೈವಾನ್ ಸುತ್ತಲಿನ ಸಮುದ್ರ ಮತ್ತು ಆಕಾಶದಲ್ಲಿ ಚೀನಾ ಮಿಲಿಟರಿ ಭಾನುವಾರ ದಾಳಿಯ ತಾಲೀಮನ್ನು ನಡೆಸಿದೆ. ಪ್ರಜಾಸತಾತ್ಮಕ ಆಡಳಿತ ನಡೆಸುತ್ತಿರುವ ಐಸ್‌ಲ್ಯಾಂಡ್ ಮತ್ತು ಅಮೆರಿಕದ ಪ್ರಚೋದನೆಯಿಂದಾಗಿ ಈ ತಾಲೀಮು ನಡೆಸಿದೆ ಎಂದು ಮೂಲಗಳು ತಿಳಿಸಿವೆ. ತೈವಾನ್ ತನ್ನ ಸ್ವಂತ ಪ್ರದೇಶವೆಂದು ಹೇಳಿಕೊಳ್ಳುವ ಚೀನಾ ತೈವಾನ್‌ನ ಪ್ರಾದೇಶಿಕ ಶಾಂತಿಯನ್ನು ನಾಶಪಡಿಸುತ್ತಿದೆ ಮತ್ತು ತೈವಾನ್‌ನ ಜನರನ್ನು ಹೆದರಿಸಲು ತಾಲೀಮು ನಡೆಸುತ್ತಿರುವಂತೆ ಕಂಡುಬರುತ್ತಿದೆ ಎಂದು ತೈವಾನ್ ಹೇಳಿದೆ.

ಉಕ್ರೇನ್ ಯುದ್ಧ: ಸಂಧಾನಕ್ಕೆ ರಷ್ಯಾ ಸಿದ್ಧ

ಮಾಸ್ಕೊ/ಕೀವ್ (ರಾಯಿಟರ್ಸ್/ಎಎಫ್‌ಪಿ): ಉಕ್ರೇನ್ ಸಂಘರ್ಷದಲ್ಲಿ ಭಾಗಿಯಾಗಿರುವ ಎಲ್ಲ ರಾಷ್ಟ್ರಗಳೊಂದಿಗೆ ಮಾತುಕತೆ ನಡೆಸಲು ರಷ್ಯಾ ಸಿದ್ಧವಾಗಿದೆ ಎಂದು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ.

'ನಾವು ಸರಿ ದಿಕ್ಕಿನಲ್ಲಿ ಸಾಗಿದ್ದೇವೆ ಎನ್ನುವುದು ನಮ್ಮ ನಂಬಿಕೆ. ನಮ್ಮ ರಾಷ್ಟ್ರೀಯ ಹಿತಾಸಕ್ತಿ, ನಮ್ಮ ನಾಗರಿಕರ ಹಿತಾಸಕ್ತಿ, ಜನರ ರಕ್ಷಣೆ ಮಾಡುತ್ತಿದ್ದೇವೆ. ಸಂಘರ್ಷದಲ್ಲಿ ಭಾಗಿಯಾಗಿರುವ ಎಲ್ಲರೊಂದಿಗೆ ಸ್ವೀಕಾರಾರ್ಹ ಪರಿಹಾರಗಳ ಬಗ್ಗೆ ಮಾತುಕತೆಗೆ ನಾವು ಸಿದ್ಧ' ಎಂದು ಸರ್ಕಾರಿ ವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಪುಟಿನ್ ಹೇಳಿದ್ದಾರೆ.

ಕೆರ್ಸಾನ್‌ನಲ್ಲಿ 16 ಸಾವು: ಉಕ್ರೇನಿನ ಕೆರ್ಸಾನ್ ಕೇಂದ್ರ ಭಾಗದಲ್ಲಿ ಶನಿವಾರ ಬೆಳಿಗ್ಗೆ ರಷ್ಯಾ ನಡೆಸಿದ ಕ್ಷಿಪಣಿ ದಾಳಿಗೆ 10 ನಾಗರಿಕರು ಹತರಾಗಿದ್ದು, ಕೆರ್ಸಾನ್ ಪ್ರಾಂತ್ಯದಲ್ಲಿ 16 ಮಂದಿ ಮೃತಪಟ್ಟರು ಎಂದು ಸ್ಥಳೀಯಾಡಳಿತ ಹೇಳಿದೆ.

ನಟಿ ತಾಯಿಯ ದೂರಿನ ಮೇಲೆ ಪೊಲೀಸರ ಕ್ರಮ

ತುನಿಷಾ ಆತ್ಮಹತ್ಯೆ: ಸಹ ನಟನ ಬಂಧನ



ಪಾಲ್ಘರ್/ಮುಂಬೈ: ನಟಿ, ಮಾಡೆಲ್ ತುನಿಷಾ ಶರ್ಮಾ ಅವರು ತಮ್ಮ ಧಾರಾವಾಹಿಯೊಂದರ ಶೂಟಿಂಗ್ ಸೆಟ್‌ನಲ್ಲೇ ಆತ್ಮಹತ್ಯೆ ಮಾಡಿಕೊಂಡ ಕೆಲವೇ ಗಂಟೆಗಳಲ್ಲಿ, ಶರ್ಮಾ ಅವರ ಸಹ ನಟ ಶೀಜನ್ ಮೊಹಮ್ಮದ್ ಖಾನ್ ಅವರನ್ನು ಪೊಲೀಸರು ಶನಿವಾರ ರಾತ್ರಿ ಬಂಧಿಸಿದ್ದಾರೆ.

ತುನಿಷಾ ಅವರ ತಾಯಿ ನೀಡಿರುವ ದೂರಿನ ಆಧಾರ ಮೇಲೆ ಶೀಜನ್ ಖಾನ್ ಅವರ ಮೇಲೆ ಐಪಿಸಿ ಸೆಕ್ಷನ್ 306ರಡಿ (ಆತ್ಮಹತ್ಯೆ ಕುಮ್ಮಕ್ಕು) ಪ್ರಕರಣ ದಾಖಲು ಮಾಡಲಾಗಿದೆ.

ಶೀಜನ್ ಖಾನ್ ಅವರನ್ನು ವಸಾಯಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ನ್ಯಾಯಾಲಯವು ಖಾನ್ ಅವರನ್ನು ಡಿಸೆಂಬರ್ 28ರ ವರೆಗೆ ಪೊಲೀಸ್ ವಶಕ್ಕೆ ನೀಡಿತು.

ವರದಿಗಳ ಪ್ರಕಾರ, ತುನಿಷಾ (21) ಮತ್ತು ಶೀಜನ್ ಖಾನ್ (27) ಅವರ ಮಧ್ಯೆ ಪ್ರೇಮ ಸಂಬಂಧ ಇತ್ತು. ಆದರೆ, 15 ದಿನಗಳ ಹಿಂದಷ್ಟೇ ಇಬ್ಬರು ತಮ್ಮ ಪ್ರೇಮ ಸಂಬಂಧವನ್ನು ಕಡಿದುಕೊಂಡಿದ್ದರು ಎನ್ನಲಾಗಿದೆ.

'ತುನಿಷಾ ಹಾಗೂ ಶೀಜನ್ ಖಾನ್ ಅವರ ಮೊಬೈಲ್‌ಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಪ್ರಕರಣಕ್ಕೆ ಅನೈತಿಕ ಸಂಬಂಧ, ಬ್ಲಾಕ್‌ಮೇಲ್ ಅಥವಾ ಲವ್ ಜಿಹಾದ್ ರೀತಿಯ ಆಯಾಮ ಇರುವುದು ಇಲ್ಲಿಯವರೆಗೆ ಕಂಡುಬಂದಿಲ್ಲ. ನಾವು ತನಿಖೆ ಮುಂದುವರೆಸಿದ್ದೇವೆ' ಎಂದು ಸಹಾಯಕ ಪೊಲೀಸ್ ಆಯುಕ್ತ ಚಂದ್ರಕಾಂತ್ ಜಾದವ್ ಅವರು ತಿಳಿಸಿದರು.

ಸರ್ ಜೆ.ಜೆ ಆಸ್ಪತ್ರೆಯಲ್ಲಿ ತುನಿಷಾ ಅವರ ಮರಣೋತ್ತರ ಪರೀಕ್ಷೆ ನಡೆಯಿತು. ನಂತರ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಯಿತು. ಸೋಮವಾರ ಅಂತ್ಯಕ್ರಿಯೆ ನಡೆಯುವ ನಿರೀಕ್ಷೆ ಇದೆ.

'ಅಲಿ ಬಾಬಾ: ದಾಸ್ತಾನ್–ಕೆ–ಕಾಬುಲ್' ಧಾರಾವಾಹಿಯಲ್ಲಿ ತುನಿಷಾ ಹಾಗೂ ಶೀಜನ್ ಖಾನ್ ಅವರು ಒಟ್ಟಿಗೆ ನಟಿಸುತ್ತಿದ್ದರು. ಶೀಜನ್ ಖಾನ್ ಅವರು 'ಫಿತೂರ್' ಹಾಗೂ 'ಬಾರ್ ಬಾರ್ ದೇಖೋ' ಸಿನಿಮಾಗಳಲ್ಲಿ ನಟಿಸಿದ್ದರು. 'ಭಾರತ್ ಕೆ ವೀರ್ ಪುತ್ರ– ಮಹಾರಾಣಾ ಪ್ರತಾಪ್' ಧಾರಾವಾಹಿಯಲ್ಲೂ ಅವರು ನಟಿಸಿದ್ದರು.

ರಾಜಸ್ಥಾನ: ರಾಧಾಕೃಷ್ಣ ದೇವಸ್ಥಾನದ ಗೋಡೆಯ ತುಂಬಾ ಪ್ರಾರ್ಥನೆಗಳ ಬರಹ

ಜೆಇಇ, ನೀಟ್ ಆಕಾಂಕ್ಷಿಗಳ 'ನಂಬಿಕೆಯ ಗೋಡೆ'

ಕೋಟಾ (ರಾಜಸ್ಥಾನ): 'ದಯವಿಟ್ಟು ನೀಟ್–2023 ಪರೀಕ್ಷೆಯಲ್ಲಿ ನಾನು ಆಯ್ಕೆಯಾಗಲಿ', 'ಪ್ರೀತಿಯ ದೇವರೇ ನನಗೆ ಏಕಾಗ್ರತೆ ಕೊಡು', 'ದೆಹಲಿ ಏಮ್ಸ್ ದಯವಿಟ್ಟು', 'ದೆಹಲಿ ಐಐಟಿ ನನಗೆ, ಗೂಗಲ್ ನನ್ನ ಸಹೋದರನಿಗೆ'... ಇವು ಯಾವುದೇ ಡೈರಿಯಲ್ಲಿ ಬರೆದಿರುವ ಬರಹಗಳಲ್ಲ. ಇವು ನೀಟ್, ಐಐಟಿ ಆಕಾಂಕ್ಷಿಗಳು ದೇವಸ್ಥಾನವೊಂದರ ಗೋಡೆಯ ಮೇಲೆ ಬರೆದಿರುವ ಬರಹಗಳು!

'ಕೋಚಿಂಗ್ ಹಬ್' ಎಂದೇ ಖ್ಯಾತಿಯಾಗಿರುವ ರಾಜಸ್ಥಾನದ ಕೋಟಾ ನಗರಕ್ಕೆ ದೇಶದ ಪ್ರತಿಷ್ಠಿತ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಪಡೆಯುವ ಸಲುವಾಗಿ ಲಕ್ಷಾಂತರ ವಿದ್ಯಾರ್ಥಿಗಳು ಕೋಚಿಂಗ್‌ಗೆ ಬರುತ್ತಾರೆ. ನಿತ್ಯದ ತರಬೇತಿ, ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಲೇಬೇಕೆಂಬ ನಿರೀಕ್ಷೆ ಮತ್ತು ಒತ್ತಡದ ಭಾರದಲ್ಲಿರುವ ವಿದ್ಯಾರ್ಥಿಗಳು ಇಲ್ಲಿನ ತಲ್ವಂಡಿಯಲ್ಲಿರುವ ರಾಧಾಕೃಷ್ಣ ದೇವಸ್ಥಾನದ ಗೋಡೆಯ ಮೇಲೆ ತಮ್ಮ ಶೈಕ್ಷಣಿಕ ಯಶಸ್ಸಿಗೆ ಕೋರಿ ಮನವಿ ಬರೆಯುತ್ತಾರೆ.

'ಈ ರೀತಿ ಗೋಡೆಯ ಮೇಲೆ ಬರೆಯುವುದು ಹಲವು ವರ್ಷಗಳಿಂದ ವಿದ್ಯಾರ್ಥಿಗಳ ಬಲವಾದ ನಂಬಿಕೆಯಾಗಿಬಿಟ್ಟಿದೆ. ಅದು 'ನಂಬಿಕೆಯ ಗೋಡೆ' ಎಂದೇ ಪ್ರಸಿದ್ಧಿಯಾಗಿದೆ. ಹಾಗಾಗಿ, ಬರಹಗಳಿಂದ ತುಂಬಿರುವ ಗೋಡೆಗೆ ಪ್ರತಿ ಎರಡು ತಿಂಗಳಿಗೊಮ್ಮೆ ಬಣ್ಣ ಬಳಿಸುತ್ತೇವೆ' ಎನ್ನುತ್ತಾರೆ ರಾಧಾಕೃಷ್ಣ ದೇವಸ್ಥಾನದ ಅರ್ಚಕ ತ್ರಿಲೋಕ್ ಶರ್ಮಾ.

'ಈ ವರ್ಷ ಇಲ್ಲಿನ ಕೋಚಿಂಗ್ ಸೆಂಟರ್‌ಗಳಲ್ಲಿ ದಾಖಲೆಯ ಮಟ್ಟದಲ್ಲಿ ಅಂದರೆ ಎರಡು ಲಕ್ಷ ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಈ ದೇವಸ್ಥಾನಕ್ಕೆ ನಿತ್ಯವೂ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭೇಟಿ ಕೊಡುತ್ತಾರೆ. ಆದರೆ, ಕಠಿಣ ಪರಿಶ್ರಮವಿದ್ದರೆ ಮಾತ್ರ ಪರೀಕ್ಷೆಯಲ್ಲಿ ಯಶಸ್ಸು ಗಳಿಸಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಹೇಳುತ್ತೇವೆ. ಬಳಿಕ ದೇವರ ಪ್ರಸಾದ ಕೊಟ್ಟು ಕಳುಹಿಸುತ್ತೇವೆ' ಎನ್ನುತ್ತಾರೆ ಅವರು.



ರಾಜಸ್ಥಾನದ ಕೋಟಾ ನಗರದ ತಲ್ವಂಡಿಯಲ್ಲಿರುವ ರಾಧಾಕೃಷ್ಣ ದೇವಸ್ಥಾನ –ಪಿಟಿಐ ಚಿತ್ರ

'ಬಹಳ ಹಿಂದೆ, ಕೆಲವು ವಿದ್ಯಾರ್ಥಿಗಳು ದೇವಸ್ಥಾನಕ್ಕೆ ಪ್ರಾರ್ಥನೆಗೆ ಬಂದಾಗ, ಅವರು ಐಐಟಿ, ಜೆಇಇ ಪರೀಕ್ಷೆಗಳಲ್ಲಿ ತಾವು ಆಯ್ಕೆಯಾಗುತ್ತೇವೆಯೇ ಎಂದು ದೇವರಲ್ಲಿ ಕೇಳಿಕೊಂಡಿದ್ದರು. ಕೆಲವು ತಿಂಗಳ ನಂತರ, ಇಬ್ಬರು ವಿದ್ಯಾರ್ಥಿಗಳ ಪೋಷಕರು ದೇವಸ್ಥಾನಕ್ಕೆ ಬಂದು ದೇಣಿಗೆ ನೀಡಲು ಮುಂದಾದರು. ಗೋಡೆಯ ಮೇಲೆ ಬರೆದ ತಮ್ಮ ಮಕ್ಕಳ ಪ್ರಾರ್ಥನೆ ಈಡೇರಿದೆ ಎಂದೂ ತಿಳಿಸಿದರು. ಅಲ್ಲಿಂದೀಚೆಗೆ ಈ ಗೋಡೆ ಜನಪ್ರಿಯವಾಯಿತು' ಎನ್ನುತ್ತಾರೆ ಅವರು.

'ಆರಂಭದಲ್ಲಿ ಈ ರೀತಿಯ ಗೋಡೆ ಬರಹಕ್ಕೆ ದೇವಸ್ಥಾನದ ಮಂಡಳಿ ಆಕ್ಷೇಪಿಸಿತ್ತು. ಆದರೆ, 2000ರಲ್ಲಿ ಈ ಗೋಡೆಯ ಮೇಲೆ ಬರೆದಿದ್ದ ಕೆಲವು ವಿದ್ಯಾರ್ಥಿಗಳು ಐಐಟಿ ಮತ್ತು ಜೆಇಇ ಪರೀಕ್ಷೆಯಲ್ಲಿ ತೇರ್ಗಡೆಯಾದ ಬಳಿಕ ಈ ಗೋಡೆಗೆ 'ನಂಬಿಕೆ ಗೋಡೆ' ಎಂದು ಹೆಸರಿಡಲಾಯಿತು. ಸ್ಥಳೀಯರು ಮತ್ತು ವಿದ್ಯಾರ್ಥಿಗಳ ನಂಬಿಕೆ ಗಟ್ಟಿಯಾಗಿದ್ದರಿಂದಾಗಿ ನಾವು ದೇವಾಲಯದಲ್ಲಿ ನಂಬಿಕೆಯ ಗೋಡೆಯನ್ನು ಉಳಿಸಿಕೊಂಡಿದ್ದೇವೆ' ಎಂದು ದೇವಸ್ಥಾನದ ಮತ್ತೊಬ್ಬ ಅರ್ಚಕ ಕಿಶನ್ ಬಿಹಾರಿ ತಿಳಿಸಿದರು.

'ನಾನಿನ್ನೂ ಇಲ್ಲಿನ ನಂಬಿಕೆಯ ಗೋಡೆಯ ಮೇಲೆ ನನ್ನ ಆಸೆಯನ್ನು ಬರೆದಿಲ್ಲ. ನನ್ನ ಅಭ್ಯಾಸದಲ್ಲಿ ನನಗೆ ವಿಶ್ವಾಸವಿದೆ. ಆದರೆ, ತರಬೇತಿಯ ಅವಧಿಯಲ್ಲಿ ನಾನು ಒತ್ತಡಕ್ಕೆ ಒಳಗಾದಾಗ ನಾನು ಈ ದೇವಸ್ಥಾನಕ್ಕೆ ಬಂದು ಪ್ರಾರ್ಥಿಸುತ್ತೇನೆ. ಧ್ಯಾನ ಮಾಡುತ್ತೇನೆ' ಎನ್ನುತ್ತಾರೆ ಮಧ್ಯಪ್ರದೇಶದ ನೀಟ್ ಆಕಾಂಕ್ಷಿ ಪ್ರಗತಿ ಸಾಹು.

ಕ್ರಿಕೆಟ್: ಬಾಂಗ್ಲಾದೇಶ ಎದುರು ಸರಣಿ ಗೆದ್ದ ಭಾರತ; ಮೆಹದಿ ಹಸನ್‌ಗೆ ಐದು ವಿಕೆಟ್

ಅಶ್ವಿನ್–ಅಯ್ಯರ್ ಜಯದ ರೂವಾರಿ

ಮೀರ್‌ಪುರ್(ಪಿಟಿಐ): ಆಲ್‌ರೌಂಡರ್ ಆರ್. ಅಶ್ವಿನ್ ಮತ್ತು ಬ್ಯಾಟರ್ ಶ್ರೇಯಸ್ ಅಯ್ಯರ್ ಭಾರತದ ನಿರೀಕ್ಷೆಯನ್ನು ಹುಸಿ ಮಾಡಲಿಲ್ಲ.

ಬಾಂಗ್ಲಾ ವಿರುದ್ಧದ ಎರಡನೇ ಟೆಸ್ಟ್‌ನಲ್ಲಿ ಸೋಲುವ ಭೀತಿಯಿಂದ ತಂಡವನ್ನು ಪಾರು ಮಾಡಿದರು. ಸ್ಪಿನ್ನರ್‌ಗಳು ವಿಜೃಂಭಿಸಿದ ಪಿಚ್‌ನಲ್ಲಿ ನೆಲಕಚ್ಚಿ ಆಡಿದ ಇಬ್ಬರೂ ಆಟಗಾರರು ಮುರಿಯದ ಎಂಟನೇ ವಿಕೆಟ್ ಜೊತೆಯಾಟದಲ್ಲಿ 105 ಎಸೆತಗಳಲ್ಲಿ 71 ರನ್ ಸೇರಿಸಿದರು. ಇದರಿಂದಾಗಿ ಭಾರತವು 3 ವಿಕೆಟ್‌ಗಳಿಂದ ಗೆದ್ದಿತು. ಸರಣಿಯನ್ನು 2–0ಯಿಂದ ಕ್ಲೀನ್‌ಸ್ವೀಪ್ ಮಾಡಿತು. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿ ಮುಂದುವರಿದಿದ್ದು, ಫೈನಲ್ ತಲುಪುವ ಆಸೆ ಜೀವಂತವಾಗಿದೆ.

ಪಂದ್ಯದ ಮೂರನೇ ದಿನದಾಟವಾದ ಶನಿವಾರ 145 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಭಾರತ ತಂಡವು 45 ರನ್‌ಗಳಿಗೇ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ತಿರುಗಣಿ ಮಡುವಿನಂತಿದ್ದ ಪಿಚ್‌ನಲ್ಲಿ ಅಗ್ರಕ್ರಮಾಂಕದ ಬ್ಯಾಟರ್‌ಗಳು ಒಂದಂಕಿ ಗಳಿಸಲು ಪರದಾಡಿ ಔಟಾಗಿದ್ದರು. ಆದರೆ, ದಿನದಾಟದ ಮುಕ್ತಾಯಕ್ಕೆ ಅಕ್ಷರ್ ಪಟೇಲ್ (ಬ್ಯಾಟಿಂಗ್ 26; 54ಎಸೆತ) ಮತ್ತು ರಾತ್ರಿ ಕಾವಲುಗಾರ ಜೈದೇವ್ ಉನದ್ಕತ್ (ಬ್ಯಾಟಿಂಗ್ 3) ಕ್ರೀಸ್‌ನಲ್ಲಿದ್ದರು.

ನಾಲ್ಕನೇ ದಿನದಾಟದ ಬೆಳಿಗ್ಗೆ ಜೈದೇವ್ ಮತ್ತು ಅಕ್ಷರ್ ಪಟೇಲ್ ತಾಳ್ಮೆಯ ಆಟ ಮುಂದುವರಿಸಿದರು. 13 ರನ್ ಗಳಿಸಿದ ಜೈದೇವ್ 25ನೇ ಓವರ್‌ನಲ್ಲಿ ಶಕೀಬ್ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಕ್ರೀಸ್‌ಗೆ ಬಂದ ರಿಷಭ್ ಪಂತ್ (9;13ಎ) ಅವರು ಅಕ್ಷರ್ ಜೊತೆಗೆ 15 ರನ್‌ಗಳನ್ನು ಸೇರಿದ್ದರು. ಮೆಲ್ಲಗೆ



ಭಾರತದ ಗೆಲುವಿನ ಸಂಭ್ರಮದಲ್ಲಿ ಆರ್. ಅಶ್ವಿನ್ –ಪಿಟಿಐ ಚಿತ್ರ

ಬೆಳೆಯುತ್ತಿದ್ದ ಜೊತೆಯಾಟಕ್ಕೆ ರಿಷಭ್ ವಿಕೆಟ್ ಪಡೆದ ಮೆಹದಿ ಹಸನ್ ಮಿರಾಜ್ ಕುಣಿದಾಡಿದರು. ಐದು ಓವರ್‌ಗಳ ನಂತರ ಮಿರಾಜ್ ಎಸೆತವನ್ನು ಆಡುವಲ್ಲಿ ಎಡವಿದ ಅಕ್ಷರ್ ಕ್ಲೀನ್‌ಬೌಲ್ಡ್ ಆದರು. ಐದು ವಿಕೆಟ್‌ಗಳ ಗೊಂಚಲು ಗಳಿಸಿದ ಸಂಭ್ರಮದಲ್ಲಿ ಮಿರಾಜ್ ತೇಲಾಡಿದರು.

ಆದರೆ ಅದರ ನಂತರ ಬಾಂಗ್ಲಾದ ಬೌಲರ್‌ಗಳಿಗೆ ಸಂಭ್ರಮಿಸುವ ಅವಕಾಶ ಸಿಗಲಿಲ್ಲ. 34ನೇ ಓವರ್‌ನಲ್ಲಿ ಶಾರ್ಟ್ ಲೆಗ್ ಫೀಲ್ಡರ್ ಮೊಮಿನುಲ್ ಹಕ್ ಅವರು ಕ್ಯಾಚ್ ಕೈಚೆಲ್ಲಿ ಅಶ್ವಿನ್‌ಗೆ ಜೀವದಾನ ನೀಡಿದರು. ಇದರಿಂದಾಗಿ ಮಿರಾಜ್‌ಗೆ ಆರನೇ ವಿಕೆಟ್ ಹಾಗೂ ಬಾಂಗ್ಲಾಗೆ ಜಯದ ಅವಕಾಶಗಳೂ ನೆಲಪಾಲಾದವು!

ಮೊದಲ ಇನಿಂಗ್ಸ್‌ನಲ್ಲಿ 87 ರನ್ ಗಳಿಸಿದ್ದ ಶ್ರೇಯಸ್ ಆತ್ಮವಿಶ್ವಾಸದ ಆಟವಾಡಿದರು. ಇನ್ನೊಂದು ಬದಿಯಲ್ಲಿ ಅಶ್ವಿನ್ ರನ್ ಗಳಿಕೆಗೆ ವೇಗ ನೀಡಿದರು. ಸಮಯ ಸರಿದಂತೆ ಪಿಚ್ ನಲ್ಲಿ ಚೆಂಡು ಪುಟಿದು ಬರುವುದು ನಿಧಾನವಾಗುತ್ತಿರುವುದನ್ನು ಗ್ರಹಿಸಿದ ಬ್ಯಾಟಿಂಗ್ ಜೋಡಿಯು ಎಚ್ಚರಿಕೆಯಿಂದ ಆಡಿತು.

ಇಬ್ಬರೂ ತಲಾ ನಾಲ್ಕು ಬೌಂಡರಿ ಹೊಡೆದರು. ಅಶ್ವಿನ್ ಒಂದು ಭರ್ಜರಿ ಸಿಕ್ಸರ್ ಕೂಡ ಸಿಡಿಸಿದರು. ಹೋದ ವರ್ಷ ಸಿಡ್ನಿ ಟೆಸ್ಟ್‌ನಲ್ಲಿ ಅಶ್ವಿನ್ ಭಾರತದ ಸೋಲು ತಪ್ಪಿಸುವ ಆಟವಾಡಿದ್ದರು. ಇಲ್ಲಿಯೂ ಅಂತಹದ್ದೇ ಆಟವಾಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್; ಬಾಂಗ್ಲಾದೇಶ 227, ಭಾರತ: 314. ಎರಡನೇ ಇನಿಂಗ್ಸ್: ಬಾಂಗ್ಲಾದೇಶ: 70.3 ಓವರ್‌ಗಳಲ್ಲಿ 231. ಭಾರತ: 47 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 145 (ಅಕ್ಷರ್ ಪಟೇಲ್ 34, ಶ್ರೇಯಸ್ ಅಯ್ಯರ್ ಅಜೇಯ 29, ಆರ್. ಅಶ್ವಿನ್ ಅಜೇಯ 42, ಶಕೀಬ್ ಅಲ್ ಹಸನ್ 50ಕ್ಕೆ2, ಮೆಹದಿ ಹಸನ್ ಮಿರಾಜ್ 63ಕ್ಕೆ5) ಫಲಿತಾಂಶ: ಭಾರತ ತಂಡಕ್ಕೆ 3 ವಿಕೆಟ್‌ಗಳ ಜಯ. ಸರಣಿಯಲ್ಲಿ 2–0ಯಿಂದ ಗೆಲುವು.



ಶ್ರೇಯಸ್ ಅಯ್ಯರ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಡಬ್ಲ್ಯುಟಿಸಿ ಪಾಯಿಂಟ್ ಪಟ್ಟಿ

ಸ್ಥಾನ	ತಂಡ	ಶೇಕಡಾ (%)	ಅಂಕ	ಪಂದ್ಯ ಜಯ	ಸೋಲು	ಡ್ರಾ	ಆಡಿದ ಸರಣಿ	ದಂಡ
1	ಆಸ್ಟ್ರೇಲಿಯಾ	76.32	120	9	1	3	5	0
2	ಭಾರತ	58.33	99	8	4	2	5	-5
3	ದ.ಆಫ್ರಿಕಾ	54.55	72	6	5	0	5	0
4	ಶ್ರೀಲಂಕಾ	53.33	64	5	4	1	5	0
5	ಇಂಗ್ಲೆಂಡ್	46.97	124	10	8	4	6	-12
6	ವಿಂಡೀಸ್	40.91	54	4	5	2	5	-2
7	ಪಾಕಿಸ್ತಾನ	38.89	56	4	6	2	5	0
8	ನ್ಯೂಜಿಲೆಂಡ್	25.93	28	2	6	1	4	0
9	ಬಾಂಗ್ಲಾದೇಶ	11.11	16	1	10	1	6	0

ಮೂಲ: ಐಸಿಸಿ ವೆಬ್‌ಸೈಟ್

ಪೆಲೆ ಭೇಟಿಯಾದ ಕುಟುಂಬದ ಸದಸ್ಯರು

ಆಸ್ಪತ್ರೆಯಲ್ಲೇ ಕ್ರಿಸ್‌ಮಸ್ ಆಚರಣೆ

ಸಾವೊಪೌಲೊ (ಎಪಿ): ಫುಟ್‌ಬಾಲ್ ಕ್ರೀಡೆಯ ದಿಗ್ಗಜ ಪೆಲೆ ತಮ್ಮ ಕ್ಯಾನ್ಸರ್ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿರುವ ಆಸ್ಪತ್ರೆಯಲ್ಲಿಯೇ ಅವರ ಕುಟುಂಬದ ಸದಸ್ಯರು ಭಾನುವಾರ ಕ್ರಿಸ್‌ಮಸ್ ಆಚರಿಸಿದರು.

ನವೆಂಬರ್ ಕೊನೆಯ ವಾರದಲ್ಲಿ ಪೆಲೆ ಅಲ್ಬರ್ಟ್ ಐನ್‌ಸ್ಟೈನ್ ಆಸ್ಪತ್ರೆಗೆ ದಾಖಲಾಗಿದ್ದರು. ಅವರ ಕರುಳಿನ ಕ್ಯಾನ್ಸರ್ ಉಲ್ಬಣಿಸಿದ್ದು ಮೂತ್ರಪಿಂಡ ಮತ್ತು ಹೃದಯಕ್ಕೆ ಸೋಂಕು ವ್ಯಾಪಿಸಿದೆ ಎಂದು ಈಚೆಗೆ ಆಸ್ಪತ್ರೆಯ ಮೂಲಗಳು ತಿಳಿಸಿದ್ದವು.

ಪೆಲೆ ಎಂದೇ ಜನಪ್ರಿಯರಾಗಿರುವ ಯಡ್ಸನ್ ಚೋಲ್ಬಿ ನಸಿಮೆಂಟೊ ಅವರಿಗೆ ಈಗ 82 ವರ್ಷವಾಗಿದೆ. ಅವರ ಪುತ್ರ ಯಡಿನೊ ಶನಿವಾರ ಆಸ್ಪತ್ರೆಗೆ ಭೇಟಿ ನೀಡಿದರು. ದಕ್ಷಿಣ ಬ್ರೆಜಿಲ್‌ನ ಫುಟ್‌ಬಾಲ್ ಕ್ಲಬ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಯಡಿನೊ 'ವೈದ್ಯರು ಮಾತ್ರ ನನ್ನ ತಂದೆಗೆ ಸಹಾಯ ಮಾಡಲು ಸಾಧ್ಯ' ಎಂದರು.

'ಅವರು (ಯಡ್ಸನ್) ಇಲ್ಲಿಯೇ ಇದ್ದಾರೆ' ಎಂದು ಪೆಲೆ ಅವರ ಮಗಳು ಕೆಲಿ ನಸಿಮೆಂಟೊ ಇನ್ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಯಡಿನೊ ಮತ್ತು ಅವರ ಇಬ್ಬರು ಮಕ್ಕಳೊಂದಿಗೆ ತಾವು ಇರುವ ಚಿತ್ರವನ್ನೂ ಕೆಲಿ ಈ ಸಂದೇಶದೊಂದಿಗೆ ಪೋಸ್ಟ್ ಮಾಡಿದ್ದಾರೆ.

'ನಾವು ಎಲ್ಲಿಯೂ ಹೋಗುವುದಿಲ್ಲ. ಇಡೀ ರಾತ್ರಿ ಇಲ್ಲಿಯೇ ಇರುತ್ತೇವೆ. ಈ ಹೋರಾಟದಲ್ಲಿ ಅಪ್ಪ ಜಯಿಸುವ ವಿಶ್ವಾಸದೊಂದಿಗೆ ಇಲ್ಲಿದ್ದೇವೆ' ಎಂದು ಕೆಲಿ ಬರೆದಿದ್ದಾರೆ.

ಇದಾಗಿ ಒಂದು ಗಂಟೆಯ ನಂತರ ಇನ್ಸ್ಟಾಗ್ರಾಮ್‌ನಲ್ಲಿ ತಮ್ಮ ತಂದೆಯ ಕೈಹಿಡಿದುಕೊಂಡಿರುವ ಚಿತ್ರ ಪೋಸ್ಟ್ ಮಾಡಿರುವ ಪುತ್ರ ಯಡಿನೊ, 'ಅಪ್ಪ ನೀವೇ ನನ್ನ ಶಕ್ತಿ' ಎಂದು ಬರೆದಿದ್ದಾರೆ.

2021ರ ಸೆಪ್ಟೆಂಬರ್‌ನಲ್ಲಿ ಪೆಲೆ ಅವರಿಗೆ ಶಸ್ತ್ರಚಿಕಿತ್ಸೆ ಮಾಡಿ ದೊಡ್ಡಕರುಳಿನ ಕ್ಯಾನ್ಸರ್ ಗೆಡ್ಡೆಯನ್ನು ತೆಗೆಯಲಾಗಿತ್ತು. ಆದರೆ ಈಚೆಗೆ ಕೋವಿಡ್ –19 ಕಾಯಿಲೆಯಿಂದ ಬಳಲಿದ್ದ ಅವರಿಗೆ ಕ್ಯಾನ್ಸರ್ ಸಮಸ್ಯೆ ಕೂಡ ಮರುಕಳಿಸಿತ್ತು.

'ಪೆಲೆಗೆ ನೀಡುತ್ತಿರುವ ಕಿಮೊಥೆರಪಿ ಪರಿಣಾಮ ಬೀರುತ್ತಿಲ್ಲ. ಆದ್ದರಿಂದ ಅವರನ್ನು ಪ್ಯಾಲೆಟಿವ್ ಕೇರ್ ವಿಭಾಗದಲ್ಲಿ ದಾಖಲಿಸಲಾಗಿದೆ' ಎಂದು ಪತ್ರಿಕೆಯೊಂದು ವರದಿ ಮಾಡಿತ್ತು. ಅದನ್ನು ಕುಟುಂಬದ ಸದಸ್ಯರು ಅಲ್ಲಗಳೆದಿದ್ದರು.

ಬ್ರೆಜಿಲ್ ತಂಡವು ಮೂರು ಬಾರಿ ವಿಶ್ವಕಪ್ (1958, 1962 ಮತ್ತು 1970) ಜಯಿಸಲು ಪೆಲೆ ಅವರ ಆಟವು ಪ್ರಮುಖವಾಗಿತ್ತು. ಬ್ರೆಜಿಲ್ ಪರವಾಗಿ ಅತಿ ಹೆಚ್ಚು ಗೋಲು ಗಳಿಸಿದ (77) ಅವರ ದಾಖಲೆಯನ್ನು ಈಚೆಗೆ ನಡೆದ ವಿಶ್ವಕಪ್ ಟೂರ್ನಿಯಲ್ಲಿ ನೇಮರ್ ಸರಿಗಟ್ಟಿದ್ದರು.



ಫುಟ್‌ಬಾಲ್ ದಿಗ್ಗಜ ಪೆಲೆ

ಬಾಕ್ಸಿಂಗ್: ಫೈನಲ್‌ಗೆ ಲವ್ಲಿನಾ, ನಿಖತ್

ಭೋಪಾಲ್ (ಪಿಟಿಐ): ವಿಶ್ವ ಚಾಂಪಿಯನ್ ನಿಖತ್ ಜರೀನ್ ಮತ್ತು ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಲವ್ಲಿನಾ ಬೊರ್ಗೊಹೈನ್ ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್ ನಲ್ಲಿ ಫೈನಲ್ ಪ್ರವೇಶಿಸಿದ್ದಾರೆ.

ರೈಲ್ವೆ ತಂಡದ ಒಟ್ಟು ಎಂಟು ಬಾಕ್ಸಿಂಗ್ ಪಟುಗಳು ವಿವಿಧ ವಿಭಾಗಗಳಲ್ಲಿ ಫೈನಲ್ ತಲುಪಿದ್ದಾರೆ. 2019ರ ವಿಶ್ವ ಬಾಕ್ಸಿಂಗ್ ಬೆಳ್ಳಿ ಪದಕ ಜಯಿಸಿದ್ದ ಮಂಜುರಾಣಿ (48.ಕೆ.ಜಿ), 2017ರ ವಿಶ್ವ ಯೂತ್ ಚಾಂಪಿಯನ್ ಜ್ಯೋತಿ ಗುಲಿಯಾ (52 ಕೆ.ಜಿ) ಈ ತಂಡದಲ್ಲಿದ್ದಾರೆ. ರೈಲ್ವೆಯ ಅನುಪಮ (50 ಕೆ.ಜಿ), ಶಿಕ್ಷಾ (54 ಕೆ.ಜಿ), ಪೂನಂ (60 ಕೆ.ಜಿ), ಶಶಿ (63 ಕೆ.ಜಿ), ಅನುಪಮಾ (81 ಕೆ.ಜಿ) ಹಾಗೂ ನೂಪುರ್ (81 + ಕೆಜಿ) ಕೂಡ ಫೈನಲ್ ಪ್ರವೇಶಿಸಿದ್ದಾರೆ.



ಲವ್ಲಿನಾ ಬೋರ್ಗೊಹೈನ್



ನಿಖತ್ ಜರೀನ್

ತೆಲಂಗಾಣ ರಾಜ್ಯವನ್ನು ಪ್ರತಿನಿಧಿಸುತ್ತಿರುವ ನಿಖತ್ 50 ಕೆ.ಜಿ ವಿಭಾಗದ ಸೆಮಿಫೈನಲ್ ಬೌಟ್‌ನಲ್ಲಿ 5–0ಯಿಂದ ಎಐಪಿಯ ಶಿವೀಂದರ್ ಕೌರ್ ವಿರುದ್ಧ ಗೆದ್ದರು. ಅವರು ಫೈನಲ್‌ನಲ್ಲಿ ಅನಾಮಿಕಾ ಅವರನ್ನು ಎದುರಿಸುವರು.

ಅಸ್ಸಾಂ ರಾಜ್ಯದ ಲವ್ಲಿನಾ 75 ಕೆ.ಜಿ. ವಿಭಾಗದಲ್ಲಿ ಮಧ್ಯ ಪ್ರದೇಶದ ಜಿಗ್ಯಾಸಾ ರಜಪೂತ್ ವಿರುದ್ಧ ಗೆದ್ದರು. ಚಿನ್ನದ ಪದಕದ ಸುತ್ತಿನಲ್ಲಿ ಅವರು ಎಸ್‌ಎಸ್‌ಸಿಬಿಯ ಅರುಂಧತಿ ಅವರನ್ನು ಎದುರಿಸಲಿದ್ದಾರೆ.

ಟೆಸ್ಟ್ ಸರಣಿ ಕೈವಶದತ್ತ ಆಸ್ಟ್ರೇಲಿಯಾ ಚಿತ್ತ

ಮೆಲ್ಬರ್ನ್ (ಎಎಫ್‌ಪಿ): ಆತಿಥೇಯ ಆಸ್ಟ್ರೇಲಿಯಾ ತಂಡವು ಸೋಮವಾರ ಆರಂಭವಾಗಲಿರುವ ಬಾಕ್ಸಿಂಗ್ ಡೇ ಟೆಸ್ಟ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರು ಜಯಿಸುವ ಛಲದಲ್ಲಿದೆ.

ಅದರೊಂದಿಗೆ ಮೂರು ಪಂದ್ಯಗಳ ಸರಣಿಯನ್ನು ಕೈವಶ ಮಾಡಿಕೊಳ್ಳುವತ್ತ ಚಿತ್ತ ನೆಟ್ಟಿದೆ.

ಬ್ರಿಸ್ಬೇನ್‌ನ ಗಾಬಾದಲ್ಲಿ ಎರಡೇ ದಿನಗಳಲ್ಲಿ ಮುಗಿದಿದ್ದ ಮೊದಲ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ಗೆದ್ದಿತ್ತು. ಅದರ ನಂತರ ಅಲ್ಲಿಯ ಪಿಚ್ ಅನ್ನು ಕಳಪೆ ಎಂದು ಐಸಿಸಿ ಘೋಷಿಸಿತ್ತು.

ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಎರಡನೇ ಪಂದ್ಯದಲ್ಲಿ ತಿರುಗೇಟು ನೀಡುವ ಛಲದಲ್ಲಿ ಪ್ರವಾಸಿ ತಂಡವೂ ಇದೆ. ಡಬ್ಲ್ಯುಟಿಸಿ ಪಾಯಿಂಟ್ ಪಟ್ಟಿಯಲ್ಲಿ ಮೇಲಕ್ಕೇರಲು ದಕ್ಷಿಣ ಆಫ್ರಿಕಾ ತಂಡಕ್ಕೆ ಈ ಸರಣಿಯಲ್ಲಿ ಜಯಿಸುವ ಅಗತ್ಯವೂ ಇದೆ.

ಆಸ್ಟ್ರೇಲಿಯಾ ತಂಡಕ್ಕೆ ವೇಗಿ ಸ್ಕಾಟ್ ಬೊಲೆಂಡ್ ಮರಳಿದ್ದಾರೆ. ಇದರಿಂದಾಗಿ ತಂಡದ ಬೌಲಿಂಗ್ ವಿಭಾಗವು ಮತ್ತಷ್ಟು ಬಲಗೊಂಡಿದೆ. ದಕ್ಷಿಣ ಆಫ್ರಿಕಾ ತಂಡದ ಬ್ಯಾಟರ್‌ಗಳು ಲಯಕ್ಕೆ ಮರಳಿದರೆ ಆತಿಥೇಯ ಬೌಲಿಂಗ್ ಪಡೆಯ ದಾಳಿಯನ್ನು ಮೆಟ್ಟಿ ನಿಲ್ಲಲು ಸಾಧ್ಯವಿದೆ. ನಾಯಕ ಡೀನ್ ಎಲ್ಗರ್, ಸರೆನ್ ಎರ್ವಿ, ವ್ಯಾನ್ ಡರ್ ಡಸೆ ಹಾಗೂ ತೆಂಬಾ ಬವುಮಾ ಫಾರ್ಮ್ ಕಂಡುಕೊಳ್ಳುವ ನಿರೀಕ್ಷೆ ಇದೆ.

ಆದರೆ ಅಮೋಘ ಲಯದಲ್ಲಿರುವ ಆಸ್ಟ್ರೇಲಿಯಾದ ಬ್ಯಾಟರ್‌ಗಳಾದ ಸ್ಟೀವ್ ಸ್ಮಿತ್, ಮಾರ್ನಸ್ ಲಾಬುಷೇನ್, ಉಸ್ಮಾನ್ ಖ್ವಾಜಾ ಮತ್ತು ಟ್ರಾವಿಸ್ ಹೆಡ್ ಅವರನ್ನು ನಿಯಂತ್ರಿಸುವ ಹೊಣೆ ಪ್ರವಾಸಿ ತಂಡದ ಅನುಭವಿ ಬೌಲರ್‌ಗಳಾದ ಕಗಿಸೊ ರಬಾಡ ಮತ್ತು ಲುಂಗಿ ಗಿಡಿ ಮುಂದಿದೆ.

ದಿನದಾಟ ಆರಂಭ: ಬೆಳಿಗ್ಗೆ 5 (ಭಾರತೀಯ ಕಾಲಮಾನ)



ಟೆಸ್ಟ್ ಸರಣಿಯ ಟ್ರೋಫಿಯೊಂದಿಗೆ ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಹಾಗೂ ನ್ಯೂಜಿಲೆಂಡ್ ನಾಯಕ ಟಿಮ್ ಸೌಥಿ –ಎಎಫ್‌ಪಿ ಚಿತ್ರ

ಪಾಕಿಸ್ತಾನ–ನ್ಯೂಜಿಲೆಂಡ್ ಮೊದಲ ಟೆಸ್ಟ್ ಇಂದಿನಿಂದ

ಕರಾಚಿ (ಎಎಫ್‌ಪಿ): ಟಿಮ್ ಸೌಥಿ ನಾಯಕತ್ವದ ನ್ಯೂಜಿಲೆಂಡ್ ತಂಡವು ಸೋಮವಾರ ಇಲ್ಲಿ ಆರಂಭವಾಗಲಿರುವ ಟೆಸ್ಟ್ ಪಂದ್ಯದಲ್ಲಿ ಪಾಕಿಸ್ತಾನವನ್ನು ಎದುರಿಸಲಿದೆ.

ಈಚೆಗೆ ಇಂಗ್ಲೆಂಡ್ ವಿರುದ್ಧ ತವರಿನಲ್ಲಿ ಸೋತಿರುವ ಪಾಕ್ ತಂಡವು ಕಿವೀಸ್ ಎದುರಿನ ಸರಣಿಯಲ್ಲಿ ಜಯಿಸುವ ಛಲದಲ್ಲಿದೆ. ಇತ್ತೀಚೆಗೆ ಕಿವೀಸ್ ತಂಡಕ್ಕೆ ಟಿಮ್ ಸೌಥಿ ಅವರನ್ನು ನಾಯಕರನ್ನಾಗಿ ನೇಮಕ ಮಾಡಲಾಗಿದೆ. ಅವರು ಪೂರ್ಣಾವಧಿ ನಾಯಕರಾದ ನಂತರ ತಂಡವು ಮೊದಲ ಬಾರಿಗೆ ವಿದೇಶದಲ್ಲಿ ಸರಣಿ ಆಡಲಿದೆ.

ಬಾಬರ್ ಆಜಂ ಬಳಗ ಇಂಗ್ಲೆಂಡ್ ಎದುರು ಉತ್ತಮ ಹೋರಾಟ ಮಾಡಿತ್ತು. ಆದರೆ ಬೆನ್ ಸ್ಟೋಕ್ಸ್ ಬಳಗದ ಅಬ್ಬರದ ಮುಂದೆ ಸೋತಿತು. ಆದರೆ ವಿಶ್ವ ಟೆಸ್ಟ್ ಚಾಂಪಿಯನ್ ನ್ಯೂಜಿಲೆಂಡ್ ಕೂಡ ನಿಕಟ ಪೈಪೋಟಿಯೊಡ್ಡುವ ಸಾಧ್ಯತೆ ಇದೆ.

ಇಲ್ಲಿಯ ಪಿಚ್ ಹಾಗೂ ವಾತಾವರಣದ ಪರಿಚಯ ಕಿವೀಸ್ ಆಟಗಾರರಿಗೆ ಇಲ್ಲ. ಬಹಳಷ್ಟು ವರ್ಷಗಳ ನಂತರ ತಂಡವು ಇಲ್ಲಿಗೆ ಬಂದಿದೆ. ಈ ಹಿಂದೆ ಪಾಕ್‌ನಲ್ಲಿ ಕಿವೀಸ್ ತಂಡವು 21 ಪಂದ್ಯಗಳನ್ನು ಆಡಿತ್ತು. ಅದರಲ್ಲಿ ಎರಡರಲ್ಲಿ ಮಾತ್ರ ಜಯಿಸಿದೆ.

ಇಲ್ಲಿಯ ಪಿಚ್‌ಗಳು ಸ್ಪಿನ್ನರ್‌ಗಳಿಗೆ ಹೆಚ್ಚು ನೆರವಾಗುವ ಸಾಧ್ಯತೆ ಇದೆ.

ಪಂದ್ಯ ಆರಂಭ: ಬೆಳಿಗ್ಗೆ 10







